B. Loans received from the Central Government.

1.	Grow More Food ..	95.00 lakhs
2.	Loans for Displaced persons ..	7.80 lakhs
3.	Capital Programme	340.00 lakhs
4.	Power Supply to Irrigation Pumps	50.00 lakhs
5.	Labour Housing ..	20.00 lakhs
	Total ..	512.80 lakhs

(d) There is a Sinking Fund for repayment of these loans. There are other ways also for repayment of these amounts which will be decided upon well in time before repayment.

Mr. SPEAKER.—Introduction of Bills.

Sri A. G. RAMACHANDRA RAO (Minister for Law and Education).—I submit that we will be introducing the Bills tomorrow.

BUDGET FOR 1953 54.—DEMANDS FOR GRANTS—*contd.*

Mr. SPEAKER.—Voting of demands for grants for the year 1953-54. Demands Nos. 29 to 35, 35-A 42-A and 43-A.

DEMAND No. 29—CIVIL WORKS.

50. Civil Works.

Mr. SPEAKER.—Motion moved :

"That a sum not exceeding Rs. 2,36,59,000 be granted to the Government to defray the charges which will come in course of payment during the year ending 31st day of March 1954, in respect of 'Civil Works'."

Sri J. MOHAMED IMAM (Jagalur).—Sir, I had made a request that there may be short respite after the close of the financial business and before the commencement of the legislative business and the Hon'ble Minister for Home promised to let us know today. I want to know whether Government have come to a decision about that.

Sri A. G. RAMACHANDRA RAO (Minister for Law and Education).—We have not yet come to a decision. Regarding the working on Sunday, it has been decided. Sri J. Mohamed Imam wanted respite for three days before the commencement of the Legislative business and that is under consideration of Government. Regarding working on Sunday, I believe we have come to an understanding that we would work on Sunday. That is what I understand.

Mr. SPEAKER.—Sunday's programme will be announced tomorrow.

Sri K. PATTABHIRAMAN (Kolar).—Three alternative suggestions were made on the floor of the House. One was to work on Sunday and another was to take an off on the 1st of April. If in the course of the day we know something about that, it will facilitate our work. If it is to be announced tomorrow it will upset our arrangements.

Mr. SPEAKER.—It will be made known at 3-30 today. With regard to voting of demands may we adopt yesterday's procedure as that seems to have given some satisfaction ?

Sri J. MOHAMED IMAM.—I suggest that we can go on with Civil Works till lunch and then we can devote some time to Extraordinary Charges and Community Development Projects and then Famine Relief. You may be pleased to give an hour and a half for Civil Works, half an hour for Famine Relief, forty-five minutes for Extraordinary Charges and half an hour for Community Development Projects.

Mr. SPEAKER.—The Leader of the Opposition has expressed his opinion like this. Demand No. 29 Civil Works for an hour and a half up to 2-30 ; Demand No. 30 Famine Relief for half an hour till lunch 2-30 to 3 ; then Demand No. 35 Extraordinary Charges for forty-five minutes—from 3-30 to 4-30 ; Demand No. 35-A—Community Development Projects for half an hour. The other demands will be put to vote without any speeches. Is that agreed upon ?

HON'BLE MEMBERS.—Yes.

---

1 P.M.

Sri RAJASEKHARA MURTHY (Yelandur).—Mr. Speaker, Sir, it is needless to point out that roads play a remarkable role in the economic development of the modern world, particularly in a sub-continent like India where 80 per cent of the people are living in rural parts. The network of roads is indispensable. The various wars which were fought in the European theatre in an international scale had disclosed the importance of the road from the strategic and military point of view and it is a common practice to measure the progress of the country by the length of its road system. If that criterion is applied to India, particularly to Mysore, the backwardness of our road system is patent. The road mileage for every lakh of population is as follows : U.S.A. : 2,500 miles ; France: 934 ; Great Britain : 392 ; India : 89 ; Mysore: 116. The road mileage with reference to the area per square mile : U.S.A. : 1.03 ; France : 1.84 ; Great Britain : 2.02 ; India : .22 ; Mysore : .36. These figures disclose the backward condition of our road system. Now the causes are not far to seek. The first thing is that there is no definite road policy or definite road development scheme. Secondly, there is no co-ordination amongst the various administrative authorities who are engaged in the construction of roads. There are as many standards of roads as there are administrative authorities which are engaged in road construction. Thirdly, a considerable portion of the roads is in the hands of the local bodies, district boards, municipalities, and village panchayets and owing to the inelastic financial condition of these local boards, they have not been able to provide sufficient funds for the maintenance of roads. Again roads are constructed without any reference to the future traffic requirements. The density of the traffic and the nature of the traffic will not be taken into consideration while constructing the roads. Above all, there is no road fund created on a permanent and non-lapsing basis. This is a very important factor which has been ignored. At present, grants have been allotted on an annual basis and these grants if not spent in proper time will lapse and the annual grants made are again subject to curtailment before allotments are disbursed with a fear of lapse it will result in uneconomic spending.

Various Committees constituted in this connection have made certain recommendations. The Jayakar Committee constituted in 1929 recommended for the creation of Road Fund. The Indian Road Congress which was constituted in 1934 on the recommendation of Mr. Mitchell, the then Consultation Engineer of Roads made two recommendations namely, that a road fund must be constituted and the various amounts allotted for the construction of roads by the various administrative authorities should be credited to the Central Road Fund. In 1943 a Conference of Chief Engineers was held at Nagpur to find out ways and means to improve the roads. They evolved certain policies popularly known as the Nagpur Plan. It is almost like a Bible for the Road Engineers. They also recommended that a Central Road Fund must be constituted and in 1950 the Motor Vehicle Taxation Enquiry Committee also recommended for the creation of the Central Road Fund. I request the Government to go into the details of these reports and constitute a road fund to improve the road conditions.

Therefore, I make the following suggestions in this connection. That a State Road Fund on a non-lapsable basis shall be created, that the revenue received under the Motor Vehicle Tax must be credited fully to the Central Road Fund and thirdly, the annual grant given by the Central Government out of the revenue they derive by way of import and export duty on petrol and other automatic parts must be credited to the Central Road Fund and fourthly, all money made available by the various administra-

tive authorities like the municipalities, district boards and village panchayets for the construction of road shall be credited to the Fund. The Railways shall be requested to contribute a portion of their profit towards the Road Fund. This amount should be utilised only for the maintenance of roads. The cost of construction of new roads must be met out of the general revenues or by borrowings. A separate road programme or policy shall be chalked out. For the maintenance of roads, a Road Board shall be constituted consisting of 15 members—I think my Congress members will not mistake me when I say that the Board should not consist of any non-official members. The Road Board shall consist of 15 members—The Chief Engineer, the Financial Secretary, the Survey Superintendent, the Advocate-General, the Secretary, Traffic Board, the General Manager of Railways and Presidents of various District Boards. The Advocate-General and the Survey Superintendent are included because in case of encroachment, the help of the Survey Superintendent is needed and for constructing roads some times the lands will have to be acquired; certain legal complications may arise. The Advocate-General is a legal Engineer and therefore he must also be taken as a member of the Board. This Board shall be assisted by a technical sub-committee consisting of 5 members—I do not give the names, I suggest their qualifications. One of them must be a Planning Officer, an expert in planning; another member shall be a soil research expert because the construction of road depends upon the nature of the soil. There must be a bridge expert who knows something about the construction of bridges and two road Engineers. With these remarks, I close my speech.

ಶ್ರೀ ಆರ್. ಅನಂತರಾಮ್ (ಚಾಮರಾಜಪೇಟೆ).—ಅಧ್ಯಕ್ಷರೇ, ಹೋದ ವರ್ಷ ಮದ್ರಾಸಿನ ಮುಖ್ಯ ಮಂತ್ರಿಗಳು ಶ್ರೀ ಸಿ. ರಾಜಗೋಪಾಲಚಾರಿಯವರು ಭಾಷಣ ಮಾಡುತ್ತಾ ಇಂಜಿನಿಯರಿಂಗ್ ಇಲಾಖೆಯ ವಿಷಯದಲ್ಲಿ ಒಂದು ಮಾತು ಹೇಳಿದರು, Public Works Department is my enemy No. (2) ಎಂದು. ಹಾಗೆ ಹೇಳುವುದಕ್ಕೆ ಸಕಾರಣಗಳೂ ಇವೆ. ಏಕೆಂದರೆ ಇಂಜಿನಿಯರಿಂಗ್ ಇಲಾಖೆಯ ಹತೋಟಿಯಲ್ಲಿ ಅನೇಕ ದೊಡ್ಡ ದೊಡ್ಡ ರಸ್ತೆಗಳಿವೆ. ಈ ಇಲಾಖೆಯವರು ಆ ರಸ್ತೆಗಳನ್ನು ಸರಿಯಾಗಿಡುವುದಿಲ್ಲ. ಅವರು ಹಾಗೆ ಹೇಳುವುದಕ್ಕೆ ಇದೊಂದು ಕಾರಣ. ನಮ್ಮ ಮೈಸೂರು ಸಂಸ್ಥಾನದಲ್ಲೂ ಹಿಂದೆ—ಈಗ ಒಂದು ವರ್ಷದಿಂದ ಸ್ವಲ್ಪ ಮಟ್ಟಿಗೆ ಚೆನ್ನಾಗಿದೆ—ಮುಂಚೆ ಎಲ್ಲಿ ನೋಡಿದರೂ ರಸ್ತೆಯಲ್ಲಿ ತುಂಬಾ ದೂಳು ತುಂಬಿಕೊಂಡು ಯಾರಾದರೂ ಅಕಸ್ಮಾತ್ತಾಗಿ ಹೊಸ ಕಾರನ್ನು ಆ ದಾರಿಗಳಲ್ಲಿ ತೆಗೆದುಕೊಂಡು ಹೋದರೆ ಅದನ್ನು ಕಳೆದುಕೊಂಡು ಬರುವ ಸ್ಥಿತಿಯೇ ಬಹಳವಾಗಿತ್ತು. ಹಿಂದೊಮ್ಮೆ ನಾನೇ ನನ್ನ ಸ್ನೇಹಿತರ ಕಾರಿನಲ್ಲಿ ಕನಕಪುರಕ್ಕೆ ಹೋಗಿದ್ದೆ. ಅವರ ಹೊಸ ಗಾಡಿ ನಡುವೆ ದಾರಿಯಲ್ಲಿ ಬಿದ್ದು ಅದರ ರಿಪೇರಿಗೆ 500—600 ರೂಪಾಯಿಗಳನ್ನು ಖರ್ಚುಮಾಡಬೇಕಾಗಿ ಬಂತು. ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಇದನ್ನು ತಿಳಿಸಿದೆವು. ಅದಕ್ಕವರು ನಾವೇನು ಮಾಡೋಣ, ಹಣ ಸಾಲದು ಎಂದು ಹೇಳಿದರು. ಹೀಗೆಯೇ ಎಷ್ಟೋ ರಸ್ತೆಗಳು ದುಸ್ಥಿತಿಯಲ್ಲಿವೆ. ಇಲಾಖೆಯವರು ಅವುಗಳನ್ನು ರಿಪೇರಿ ಮಾಡಿ ವರ್ಷಗಟ್ಟಲೆ ಆಗಿದೆ. ಆದ್ದರಿಂದ ಆದಷ್ಟು ಮಟ್ಟಿಗೆ ಇಂಜಿನಿಯರುಗಳು ರಸ್ತೆಗಳ ಕಡೆಗೆ ಗಮನ ಕೊಡಬೇಕು. ಏಕೆಂದರೆ ಮೈಸೂರು ದೇಶಕ್ಕೆ ಹೊರಗಡೆಯವರು ಯಾರಾದರೂ ಬಂದು ನಮ್ಮ ರಸ್ತೆಗಳನ್ನು ನೋಡಿದರೆ ನಿಜವಾಗಿಯೂ ಬಹಳ ಬೇಜಾರು ಪಟ್ಟುಕೊಳ್ಳುತ್ತಾರೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ನಮಗೇ ಆದರೂ ಸರಿಯಾಗಿರಬೇಡವೆ ?

ಶ್ರೀ ಆರ್. ಅನಂತರಾಮ್.—ನಮಗೂ ಬೇಕು. ಹೊರದೇಶದವರ ವಿಚಾರವೇಕೆ ಹೇಳಿದೆನೆಂದರೆ, ಬೇರೆ ಕಡೆಯವರಿಗೆ ನಮ್ಮ ಮೈಸೂರು ದೇಶದ ಮೇಲೆ ಒಂದು ಒಳ್ಳೆಯ ಅಭಿಪ್ರಾಯ ಇದುವರೆಗೂ ಬೆಳೆದು ಬಂದಿದೆ. ಹೀಗಿರುವಲ್ಲಿ ಅವರು ಈಗೇನಾದರೂ ಬಂದರೆ, ಕೆಟ್ಟ ಅಭಿಪ್ರಾಯ ಇಟ್ಟುಕೊಂಡು ಹೋಗುತ್ತಾರೆ. ನನ್ನ ಸಲಹೆಯೇನೆಂದರೆ, ಈಗ ಎಲ್ಲಿ ನೋಡಿದರೂ ಟಾರನ್ನೇ ಎಲ್ಲಾ ರಸ್ತೆಗಳಿಗೂ ಹಾಕಿಸುತ್ತಿದ್ದೀರಿ. ತಮಗೇ ಗೊತ್ತಿರುವಂತೆ ಅಬೆಡ್ಡಾನ್‌ನಿಂದ ಮೊದಲಿನಂತೆ ಟಾರ್ ಎಣ್ಣೆ ಬರುತ್ತಿಲ್ಲ. ಬರ್ಮಷೆಲ್‌ನವರು ಸಪ್ಲೈಮಾಡುತ್ತಿದ್ದಾರೆ, ಅಷ್ಟೆ. ಅದೂ ಒಂದಕ್ಕೆರಡರಷ್ಟು ಬೆಲೆ ಹಾಕುತ್ತಿದ್ದಾರೆ. ಆದ್ದರಿಂದ ಇದಕ್ಕೆ ಬದಲು ಈಗ ನಮ್ಮಲ್ಲೇ ಹೆಚ್ಚಿಗೆ ಸಿಮೆಂಟ್ ತಯಾರಾಗುತ್ತಿರುವುದರಿಂದ ಅದನ್ನೇ ಆದಷ್ಟುಮಟ್ಟಿಗೂ ಉಪಯೋಗಿಸಿ, ಹೊರಗಡೆಯಿಂದ ಟಾರ್ ಬರುವುದನ್ನು ನಿಲ್ಲಿಸಬಹುದು. ಆದ್ದರಿಂದ ನಮ್ಮ ರಸ್ತೆಗಳನ್ನು ಆದಷ್ಟು ಮಟ್ಟಿಗೆ ಸಿಮೆಂಟ್‌ಮಾಡಿಸುವುದಕ್ಕೇ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಈಗ ಬೆಂಗಳೂರು ಪೂನಾ ರಸ್ತೆಯಲ್ಲಿ ಇನ್ನೂ 20 ಮೈಲಿಗಳಷ್ಟನ್ನು ಸಿಮೆಂಟ್‌ರಸ್ತೆ ಮಾಡಿದೆಯೆಂದು ಹೇಳಿದ್ದೀರಿ ಬಹಳ ಸಂತೋಷ. ಆದರೂ ಇನ್ನೂ ಹೆಚ್ಚು ಹೆಚ್ಚಿಗೆ ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಏಕೆಂದರೆ, ವರ್ಷೇ ವರ್ಷ 20 ಮೈಲಿ ಎಂದು ಹೋಗುತ್ತಿದ್ದರೆ ಪೂರಾ ರಸ್ತೆ ಸಿಮೆಂಟ್‌ರಸ್ತೆ ಆಗಬೇಕಾದರೆ ಹತ್ತಾರು ವರ್ಷಗಳು ಬೇಕಾಗುತ್ತವೆ. ಆದ್ದರಿಂದ ಸಿಬ್ಬಂದಿ ಹೆಚ್ಚಿಗೆ ಇಟ್ಟರೂ ಪರವಾಯಿಲ್ಲ. ಆದಷ್ಟು ಬೇಗ ಇದನ್ನು ಪೂರ್ತಿಮಾಡಬೇಕು. ಅಲ್ಲದೆ ಈಗ ಹೆಚ್ಚಿಗೆ ತೆರಿಗೆ

(ಶ್ರೀ ಎಲ್. ಸಿದ್ದಪ್ಪ.)

ಬೇರೆ ಹಾಕುತ್ತಿದ್ದೀರಿ. ಎಲ್ಲಾ ಮೋಟಾರು ವಾಹನಗಳಿಗೂ ಈ ತೆರಿಗೆ ಬೀಳುತ್ತದೆ. ತೆರಿಗೆ ಹೆಚ್ಚಿಗೆ ಹಾಕಿದ ಮೇಲೆ ನಮಗೇನು ಹೆಚ್ಚಿಗೆ ಅನುಕೂಲ ಮಾಡಿದ್ದೀರಿ ಎಂದು ಅವರೂ ಕೇಳಬಹುದು. ಆದ್ದರಿಂದ ತೆರಿಗೆ ಹಾಕಿರುವಂತೆಯೇ ರಸ್ತೆಗಳನ್ನೂ ಸರಿಮಾಡಿಸುವುದು ನಮ್ಮ ಕರ್ತವ್ಯ. ಈಗಂತೂ ಟೈರುಗಳ ಬೆಲೆ ಬಹಳ ಜಾಸ್ತಿಯಾಗಿದೆ. ರಸ್ತೆಗಳು ಕೆಟ್ಟು ಟೈರುಗಳು ಬೇಗ ಬೇಗ ಕೆಟ್ಟುಹೋದರೆ ಮೋಟಾರ್ ವಾಹನಗಳನ್ನಿಟ್ಟಿರುವವರಿಗೂ ಬಹಳ ನಷ್ಟವಾಗುತ್ತದೆ. ತೆರಿಗೆ ಹೆಚ್ಚಿಗೆ ಕೊಡುವುದಕ್ಕೆ ಅವರು ಸಿದ್ಧವಾಗಿದ್ದಾರೆ. ಅದಕ್ಕೆ ತಕ್ಕಂತೆ ನೀವೂ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡಬೇಕು. ಇನ್ನು ಈ ವಿಚಾರದಲ್ಲಿ ಹೆಚ್ಚಿಗೆ ಹೇಳಬೇಕಾಗಿಲ್ಲ. ನಮ್ಮ ಮಂತ್ರಿಗಳು ಆ ಹೆಚ್ಚಿನ ಉತ್ಸುಕತೆಯಿಂದ ಸಿಮೆಂಟ್ ರಸ್ತೆಗಳನ್ನು ಹೆಚ್ಚು ಹೆಚ್ಚು ಮಾಡಿಸಿ ಆದಷ್ಟು ಮಟ್ಟಿಗೆ ರಸ್ತೆಗಳನ್ನು ಉತ್ತಮಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಸ್ವಾಮಿ, ಪಬ್ಲಿಕ್‌ವರ್ಕ್ಸ್ ಇಲಾಖೆಯ ವಿಚಾರದಲ್ಲಿ ನಾನು ಹೋದ ಸಾರಿಯೂ ಸ್ವಲ್ಪ ಕಟುವಾಗಿಯೇ ಟೀಕೆಮಾಡಿದ್ದೆ. ಈ ಸಾರಿಯೂ ಬಡ್ಜೆಟ್ಟನ್ನೆಲ್ಲಾ ತಿರುವಿ ಹಾಕಿ ಏನಾದರೂ ಉತ್ತಮಗೊಂಡಿದೆಯೇ ಎಂದು ನೋಡಿದರೆ ಏನೂ ಉತ್ತಮಗೊಂಡಿಲ್ಲವೆಂದು ನಾನು ನಿರಾಶೆಯಿಂದ ಹೇಳಬೇಕಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ, (ರೆವೆನ್ಯೂ ಮತ್ತು ಮರಾಮತ್ತು ಇಲಾಖೆಗಳ ಮಂತ್ರಿಗಳು).—ಬಡ್ಜೆಟ್ಟನ್ನು ನೋಡಿದರೆ ಅದು ಹೇಗೆ ಗೊತ್ತಾಗುತ್ತದೆ ?

ಶ್ರೀ ಡಿ. ದೇವರಾಜ್ ಅರಸ್.—ಅದು ಹೇಗೆ ಗೊತ್ತಾಗುತ್ತದೆಂಬುದನ್ನು ನಾನು ಅಂಕಿ ಅಂಶಗಳಿಂದ ವ್ಯಕ್ತಪಡಿಸುತ್ತೇನೆ. ತಾವು ಸ್ವಲ್ಪ ಸಾವಧಾನದಿಂದ ಕೇಳಬೇಕು. ಹೋದಸಾರಿ ಸರ್ಕಾರದವರು ಅಪ್ಪಣೆಕೊಡಿಸಿದರು ಈ ಇಲಾಖೆಯಲ್ಲಿ ರಿಟ್ರೆಂಚ್‌ಮೆಂಟ ಮಾಡುತ್ತೇವೆ ಎಂದು, ಆದರೆ ಸ್ವಾಮಿ, ತಾವು ನೋಡುವುದಾದರೆ ಹೋದ ಸಾರಿ ಸಿಬ್ಬಂದಿಗಾಗಿ 22 ಲಕ್ಷ ರೂಪಾಯಿಗಳನ್ನು ಈ ಬಡ್ಜೆಟ್ ಎಸ್ಟಿಮೇಟ್‌ನಲ್ಲಿ ತೋರಿಸಿರುವುದು ಕಾಣಬರುತ್ತದೆ, ಈ ಸಾರಿ ಅದು 27 ಲಕ್ಷ ರೂಪಾಯಿಗಳಿಗೆ ಹೋಗಿದೆ, ಈ ಡಿಪಾರ್ಟ್‌ಮೆಂಟನ್ನು ರೀ-ಆರ್ಗನೈಸ್ ಮಾಡುವುದಕ್ಕೆ ಮುಂಚೆ ನಾವು ಎಷ್ಟು ಖರ್ಚು ಮಾಡುತ್ತಿದ್ದೇವೆಂದು ನೋಡಿದ್ದರೆ, 1950-51ನೆಯ ಸಾಲಿನ ಲೆಕ್ಕಗಳ ಪ್ರಕಾರ 9 ಲಕ್ಷ ರೂಪಾಯಿಗಳು ಖರ್ಚಾಗುತ್ತಿರುವುದು ಕಾಣಬರುತ್ತದೆ. 1951–52ರ ಬಡ್ಜೆಟ್ಟಿಗೆ ಇದು 19·75 ಲಕ್ಷಕ್ಕೆ ಏರಿದೆ. ಅನಂತರ 1951–52ನೆಯ ಇಸವಿಯ ಕೊನೆಯಲ್ಲಿ ಆಕ್ಚೌಂಟಾಗಿರುವುದನ್ನು ನೋಡಿದರೆ ಇದು 26·7 ಲಕ್ಷಕ್ಕೆ ಹೋಗಿದೆ. ಇದನ್ನು ಹೋದ ಸಾರಿಯ ಬಡ್ಜೆಟ್ಟಿನಲ್ಲಿ 22·1 ಲಕ್ಷಕ್ಕೆ ಇಳಿಸಿ ತೋರಿಸಿದರು. ಆದರೆ 53—54ನೆಯ ಸಾಲಿನ ಬಡ್ಜೆಟ್ ಎಸ್ಟಿಮೇಟ್ಸ್ ನೋಡುವುದಾದರೆ, ಇದು ಮೊದಲಗಿಂತಲೂ ಹೆಚ್ಚಿಗೆ 27·97 ಲಕ್ಷ ರೂಪಾಯಿಗಳಿಗೆ ಏರಿ ಹೋಗಿದೆ. ಇದು ರಿಟ್ರೆಂಚ್‌ಮೆಂಟೇ ಅಥವಾ ಬೇರೆಯೇ ಎಂಬುದನ್ನು ಅವರೇ ಹೇಳಬೇಕು. ಒಂದುವೇಳೆ ಅವರು ಹೇಳಬಹುದು, ಸಂಬಳ ಸಾರಿಗೆಗಳನ್ನು ಜಾಸ್ತಿಕೊಡಬೇಕಾಗಿ ಬಂದದ್ದರಿಂದ ಈ ವರ್ಷ ಸ್ವಲ್ಪ ಜಾಸ್ತಿಯಾಗಿದೆ ಎಂದು. ಆದರೂ 22 ಲಕ್ಷ ರೂಪಾಯಿಗಳಿಂದ 27 ಲಕ್ಷ ರೂಪಾಯಿಗಳಿಗೆ ಏರಿ 5 ಲಕ್ಷ ರೂಪಾಯಿಗಳು ಜಾಸ್ತಿಯಾಯಿತೆಂದರೆ, ಇದು ಬರೀ ಸಂಬಳ ಸಾರಿಗೆಯಿಂದಲೇ ಅಥವಾ ಸಿಬ್ಬಂದಿಯೂ ಜಾಸ್ತಿಯಾಗಿರುವುದರಿಂದಲೇ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಇದರಲ್ಲಿ ಇನ್ನೊಂದು ಹೇಳಬಹುದು, ಈಗ ಕ್ಯಾಪಿಟಲ್ ವರ್ಕ್ಸ್ ಭದ್ರಾ, ತುಂಗ, ನುಗು ಈ ಮೂರು ಮೇಜರ್ ಕೆಲಸಗಳನ್ನು ತೆಗೆದುಕೊಂಡಿದ್ದೇವೆ, ಇದಕ್ಕಾಗಿ ಸಿಬ್ಬಂದಿ ಖರ್ಚು ಹೆಚ್ಚಾಗಿರಬಹುದೆಂದು. ಬಡ್ಜೆಟ್ಟಿನ ಎರಡನೆಯ ಭಾಗವನ್ನು ತೆಗೆದು ನೋಡುವುದಾದರೆ, ನುಗು ಯೋಜನೆಯಲ್ಲಿ ಸಿಬ್ಬಂದಿ, ಟೂಲ್ಸ್ ಅಂಡ್ ಪ್ಲ್ಯಾಂಟ್ ಎಂದು ಸೇರಿಸಲಾಗಿದೆ. ಒಂದೊಂದು ಯೋಜನೆಯಲ್ಲಿಯೂ, ಯಾವ ಯಾವ ಹೊಸ ಕಾಮಗಾರಿಯ ಯೋಜನೆಯನ್ನು ಅಥವಾ ಅಂದಾಜನ್ನು ತಯಾರುಮಾಡುತ್ತಾರೋ ಅದರಲ್ಲೇ ಆ ಕೆಲಸಕ್ಕೆ ಬೇಕಾದ ಸಿಬ್ಬಂದಿಯ ಖರ್ಚನ್ನೂ ಸೇರಿಸಿರುತ್ತಾರೆ. ಸಕ್ಕರೆ ಬೈಲಿನ ತುಂಗಾ ಯೋಜನೆಯಲ್ಲಿಯೂ, 'ಎಸ್ಟ್ಯಾಬ್ಲಿಷ್‌ಮೆಂಟ್ ಟೂಲ್ಸ್ ಅಂಡ್ ಪ್ಲ್ಯಾಂಟ್' ಎಂದಿದೆ ಈ ರೀತಿ ಹೊಸದಾಗಿ ಮಾಡುವ ಯೋಜನೆಗಳಲ್ಲಿ ಮಾಮೂಲಾಗಿ ಇದನ್ನು ಸೇರಿಸುತ್ತಾರೆ. ಖಾಯಂ ಸಿಬ್ಬಂದಿ ಯಾವಾಗಲೂ ಇದ್ದೇ ಇರುತ್ತದೆ. ಕೆಲಸವಿರಲಿ, ಇಲ್ಲದೇಯಿರಲಿ ಇದು ನಡೆದುಕೊಂಡು ಹೋಗುತ್ತದೆ. ಆದುದರಿಂದ ಹೀಗೆ ಹೊಸ ಕೆಲಸಗಳನ್ನು ತೆಗೆದುಕೊಂಡಿದ್ದರಿಂದ ಸಿಬ್ಬಂಧಿ ಚಾರ್ಜು ಜಾಸ್ತಿಯಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಟೂಲ್ಸ್ ಅಂಡ್ ಪ್ಲ್ಯಾಂಟ್ ಎಂದಿದೆ. 1951-52ರ ಬಡ್ಜೆಟ್ಟಿನಲ್ಲಿ 'ಟೂಲ್ಸ್ ಅಂಡ್ ಪ್ಲಾಂಟ್' ಗೆ 14 ಲಕ್ಷ ಚಿಲ್ಲರೆ, 1952–53ರಲ್ಲಿ 10 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಈ ವರ್ಷ ಬಡ್ಜೆಟ್ಟಿನಲ್ಲಿ ಕೊಟ್ಟಿರುವುದು ಸುಮಾರು 28 ಲಕ್ಷ ರೂಪಾಯಿಗಳಾಗುತ್ತದೆ. ಹೊಸ ಯೋಜನೆಗಳಿಗಾಗಿ ಹೊಸ ಸಾಮಾನುಗಳನ್ನು ತರಿಸಬೇಕು, ಅದಕ್ಕಾಗಿ ಈ ಹಣಬೇಕೆಂದು ಹೇಳಬಹುದು. ಆದರೆ ನಾನು ಮೊದಲೇ ಹೇಳಿದ ಹಾಗೆ, ಯಾವ ದೊಡ್ಡ ಕಾಮಗಾರಿಯನ್ನು ತೆಗೆದುಕೊಂಡರೂ ಅದರಲ್ಲಿ ಒದಗಿರುತ್ತದೆ. ಉದಾಹರಣೆಗೆ 43ನೆಯ ಪುಟದಲ್ಲಿ 'ನಾನು ಜಲಾಶಯ' ಎಂಬುದರಲ್ಲಿ, 'ಎಸ್ಟ್ಯಾಬ್ಲಿಷ್‌ಮೆಂಟ್, ಟೂಲ್ಸ್ ಅಂಡ್ ಪ್ಲ್ಯಾಂಟ್'ಗೆ ಒಟ್ಟಿಗೆ 20 ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಿದ್ದಾರೆ. ಹೀಗೆ ಪ್ರತಿಯೊಂದು ಮೇಜರ್ ಕಾಮಗಾರಿಯಲ್ಲಿಯೂ ಅದರ ಅಂದಾಜಿನಲ್ಲೇ ಸೇರಿಸಿರುತ್ತಾರೆ. ಇದಲ್ಲದೆ ಈ ವರ್ಷ ಟೂಲ್ಸ್ ಅಂಡ್ ಪ್ಲಾಂಟ್‌ಗೆ 28 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ತೋರಿಸಿದ್ದಾರೆ. ಸಿವಿಲ್ ವರ್ಕ್ಸ್‌ನಲ್ಲಿ 123ನೆಯ ಪುಟದಲ್ಲಿ 5 ಲಕ್ಷಗಳನ್ನು ಒಂದು ಕಡೆ ತೋರಿಸಿದ್ದಾರೆ. ಬಡ್ಜೆಟ್ಟಿನ ಎರಡನೆಯ ಭಾಗದ 41ನೆಯ ಪುಟದಲ್ಲಿ ಡೆವಲಪ್‌ಮೆಂಟ್ ಸ್ಕೀಮ್ಸ್‌ನಲ್ಲಿ ಪುನಃ 8 ಲಕ್ಷ ರೂಪಾಯಿ ತೋರಿಸಿದ್ದಾರೆ. ಹೀಗೆ ವರ್ಷ ವರ್ಷವೂ ಲಕ್ಷಾಂತರ ರೂಪಾಯಿಗಳ ಟೂಲ್ಸ್ ಅಂಡ್ ಪ್ಲ್ಯಾಂಟ್ ಏನಾಗುತ್ತದೆ, ಇವುಗಳನ್ನು ಏನು ಮಾಡುತ್ತಾರೆ, ಲೆಕ್ಕಗಳನ್ನಿಟ್ಟಿದ್ದಾರೆಯೇ ಎಂದು ಪುಸ್ತಕವನ್ನು ಹುಡುಕಿದರೆ ಎಲ್ಲಿಯೂ ಗೊತ್ತಾಗುವುದಿಲ್ಲ. ನಮ್ಮ ಮುಂದೆ ಆ ಲೆಕ್ಕ ಇಲ್ಲ. ವರ್ಷ ವರ್ಷವೂ ಇದಕ್ಕಾಗಿ ಖರ್ಚುಮಾಡುವ ಹಣ ಸರಿಯಾಗಿ ಖರ್ಚಾಗುತ್ತದೆಯೇ ಅಥವಾ ಏನಾದರೂ 'ಲೀಕೇಜಸ್' ಇವೆಯೆ ಅಥವಾ ತರಿಸತಕ್ಕ ಸಾಮಾನುಗಳು ಸ್ಟೋರ್ಸ್‌ನಲ್ಲಿ ಸರಿಯಾಗಿರುತ್ತವೆಯೆ ಎಂಬುದನ್ನೆಲ್ಲಾ ಕೂಲಂಕಷವಾಗಿ ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಮನವಿ ಮಾಡುತ್ತೇನೆ.

ಇನ್ನೊಂದು ವಿಷಯ. ಹೋದ ವರ್ಷ ಈ ಸಂಬಂಧದಲ್ಲಿ ನಾನೊಂದು ಸಲಹೆಯನ್ನು ಕೊಟ್ಟಿದ್ದೆ, ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ಮಿತವ್ಯಯ ಮತ್ತು ದಕ್ಷತೆಯ ದೃಷ್ಟಿಯಿಂದ ರೀ ಆರ್ಗನೈಜ್ ಅಥವಾ ಪುನರ್ವ್ಯವಸ್ಥೆ ಮಾಡಬೇಕು ಎಂದು. ಆದರೆ ಆ ಸಲಹೆಯ ಪ್ರಕಾರ ಯಾವ ವಿಧದಲ್ಲೂ ಕಾರ್ಯಕ್ರಮ ತೆಗೆದುಕೊಂಡಂತೆ ಕಾಣುವುದಿಲ್ಲ, ರಿಟ್ರೆಂಚ್‌ಮೆಂಟ್ ಮಾಡಿದ ಹಾಗೂ ಕಾಣುತ್ತಿಲ್ಲ. ಅಥವಾ ದಕ್ಷತೆ ಹೆಚ್ಚಿದೆಯೆ ಎಂದರೆ, ನುಗು ಅಂದಾಜು ತಯಾರು ಮಾಡಲು ಪ್ರಾರಂಭವಾಗಿ 5 ವರ್ಷಗಳಾದರೂ ಇನ್ನೂ ಪೂರ್ತಿಯಾಗಿಲ್ಲ. ಸಿಬ್ಬಂದಿ ಖರ್ಚನ್ನು ಶೇಕಡ ಹತ್ತರಷ್ಟು ಮಾಡಬೇಕಾಗಿದೆ. ಹೊರಗಿನ ಒಂದು ಉದಾಹರಣೆ ಕೊಡಬೇಕಾದರೆ, ಮದರಾಸಿನಲ್ಲಿ ಭವಾನಿ ಜಲಾಶಯದ ಕಾಮಗಾರಿ ನಡೆಯುತ್ತಿದೆ. ಅವರು ಪುಸ್ತಕ ರೂಪದಲ್ಲಿ ಅದರ ವಿವರಗಳನ್ನು ಮುದ್ರಣ ಮಾಡಿಸಿದ್ದಾರೆ. ಅದರಲ್ಲಿ ನೋಡಿದರೆ ಅವರ ಸಿಬ್ಬಂದಿ ಖರ್ಚು ಕೇವಲ ಶೇಕಡ 3 ರಷ್ಟು.

Sri Kadidal MANJAPPA.—Now here in India.

Sri D. DEVARAJ URS.—You please get the facts and figures through the Department. The figures I am quoting are from the pamphlet given by the Madras Government. I am prepared to bring that pamphlet and give it to you.

ಅಲ್ಲದೆ ಇದು ಏಳೆಂಟು ಕೋಟಿ ರೂಪಾಯಿಗಳ ಕೆಲಸ ಆದರೂ ಒಂದು ಸಲವೂ ರಿವೈಜ್ಡ್ ಅಂದಾಜು ಮಾಡಿಲ್ಲ ಇದು ಗಮನಾರ್ಹವಾದ ವಿಷಯ. ನಮ್ಮಲ್ಲಿ ಇನ್ನೊಂದು ನ್ಯೂನತೆಯಿದೆ. ಉದಾಹರಣೆಗೆ, ನುಗು ಜಲಾಶಯದ ಕಾಮಗಾರಿಯ ಲೆಖ್ಖವೆಲ್ಲಾ ಒಂದು ಕಡೆ ಇಲ್ಲ. ಅದನ್ನು ಬೇರೆ ಬೇರೆ ಮಾಡಿ ಸಿಬ್ಬಂದಿ ಖರ್ಚು ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ, ಟೂಲ್ಸ್ ಅಂಡ್ ಪ್ಲಾಂಟ್ ಅಲ್ಲಿ ಸ್ವಲ್ಪ ತೋರಿಸಿರುವುದರಿಂದ, ಅದನ್ನೆಲ್ಲಾ ಸೇರಿಸಿದ ಹೊರತು ಅದರ ಸಂಪೂರ್ಣ ಚಿತ್ರ ಗೊತ್ತಾಗುವುದಿಲ್ಲ. ನುಗು ಜಲಾಶಯಕ್ಕೆ ಒರಿಜಿನಲ್ ಅಂದಾಜೆಷ್ಟು, ರಿವೈಸ್ಡ್ ಅಂದಾಜೆಷ್ಟು, ಎಷ್ಟು ಸಾರಿ ರಿವೈಸ್ ಆಯಿತು ಎಂದು ನೋಡಿದರೆ, ನಮ್ಮ ಇಲಾಖೆ ಎಷ್ಟು ಮಟ್ಟಿನ ದಕ್ಷತೆಯಿಂದ ಕೆಲಸಮಾಡುತ್ತಿದೆಯೆಂಬುದು ಗೊತ್ತಾಗುತ್ತದೆ. ನಾನು ಹೇಳಿರುವ ಅಂಕಿ ಅಂಶಗಳ ಮೇಲೆ ಹೇಳುವುದಾದರೆ, ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ, ಬಹಳ ಅಸಮಾಧಾನಕರವಾಗಿದೆ. ಆದ ಕಾರಣ ಇದನ್ನು ಪುನರ್ವ್ಯವಸ್ಥೆ ಮಾಡಿ, ಆದಷ್ಟು ಮಿತವ್ಯಯ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

Sri J. MOHAMED IMAM (Jagalur).—Sir, I support the cut motion moved by my friend Sri Rajasekhara Murthy, wherein he has stressed the necessity......

An HON'BLE MEMBER.—There is no cut motion. No cut motion has been moved. The discussion is only on the general demand.

Sri J. MOHAMED IMAM.—Sir, I associate myself with the views expressed by my friend before this House. He has emphasised the importance of constituting a separate road fund, which fund will be meant entirely for the repair of roads. There are no two opinions regarding the condition of our roads. Their condition is deplorable.

Sri Kadidal MANJAPPA.—From your time........

Sri J. MOHAMED IMAM.—The Minister of Revenue states that the condition of these roads is the same or has been continuously the same from our times. I may state for his information that we were once proud of our roads. It was an admitted fact that the roads in Mysore were much better and were kept in a far better condition than the roads in the adjoining provinces. Nobody can dispute that fact. Of late, the condition of these roads is gradually deteriorating and in spite of repeated requests to the Government to devote more money and to devote greater attention, the Government has not been able to achieve this object.

I may state three reasons for this unsatisfactory and deplorable condition of these roads. First of all is the high traffic—the present day traffic. Secondly, the inadequacy of grants and thirdly, lack of supervision. The present day condition of our roads must correspond to the prevailing traffic. Now the most important traffic you have to cope with, is motor and vehicular traffic. Money to be spent on these roads must have a certain bearing on the volume of traffic on these roads. The number of buses, lorries and cars have increased abnormally. The present mode of repairs, that is, gravelling and metalling of the roads, will not stand the wear and tear that will result from this high traffic. It is quite necessary to adopt the modern system of maintaining these roads. With this object in view, the Government, prior to your taking office undertook a five-year programme of cement concreting of all these roads. When I was in Government, this plan was adopted,

(Sri J. MOHAMED IMAM.)

and it was decided by the then Government to cement-concreting of this entire road from Bangalore to Harihar and in pursuance of this programme, you will find that cement-concreting has been done up to 22 miles on the Bangalore-Tumkur Road, and it has been accomplished to a great extent on the Bangalore-Mysore Road also. Unfortunately, when the Congress took office, this plan was abandoned. This programme was set aside. I may mention here, at this juncture, that the then Government appointed a Policy Committee to investigate and propose measures as to how to improve our communications. The Policy Committee recommended that, to suit the modern traffic, a scheme of cement concreting must be taken up intensively. But when the Congress Government came into power, they had ample funds......

An HON'BLE MEMBER.—Cement was not available.

Sri J. MOHAMED IMAM.—Government should have got an adequate quantity of cement at least to carry on this work to a limited extent.

An HON'BLE MEMBER.—Cost ?

Sri J. MOHAMED IMAM.—They had twenty crores to spend.

Somehow, they did not think it worthwhile to persue this programme and they gave it up. Now we are in this awful predicament. If you had pursued that programme, by this time, we would have cement concreted a good length and I know my friend Sri Anantharaman agreed with me in this respect, when he suggested the taking up of cement concreting most of our roads. I hope Government will find some way of achieving this object.

1-30 P.M.

Secondly, regarding the means, I know we have no means. Now we have to find out the means. As suggested by Sri Rajasekhara Murthy, constituting a separate road fund is absolutely necessary. Before the Congress took office there was a separate fund called the Road Development Fund. The income derived from tolls, motor vehicles and road taxes was pooled together and this fund was constituted. The Government also used to contribute to this fund and this fund was meant only for the repair of the roads. But if you look at the Budget, you will find that the Road Fund has been extinct. It was the practice at that time to contribute from the normal revenues every year and most of the surplus money was transferred to this fund. That policy has not been adopted. I am glad that Sri Rajasekhara Murthy has come forward with this proposal and I heartily endorse it. It is quite necessary that you constitute a separate fund to which you will contribute all revenue derived from buses, motor cars, petrol tax and as much money as can be spared from other sources. That fund must be devoted only to the repairs of the roads, and I am sure Government will adopt this policy.

But what do we find ? I will speak on this when the Motor Spirit Bill is taken up for consideration. The reason given there is that the extra item of taxation is meant, not to improve the roads or to construct extra bridges, but to wipe off the deficit. That is not the idea and I am going to dilate upon it on some other occasion. My submission is that whatever income is derived from motor cars, buses and lorries must be pooled together into a separate fund and that amount must be devoted to the repairs of roads.

Regarding the provision for which we are voting, *viz.*, Rs. 2,36,59,000, I may say that the entire amount will not be spent properly.

Sri Kadidal MANJAPPA.—Was it spent when you were the Minister for Public Works ?

Sri J. MOHAMED IMAM.—What is your opinion now ?

Sri Kadidal MANJAPPA.—There is slight improvement.

Sri J. MOHAMED IMAM.—I can state that during my days it was spent much better.

Sri Kadidal MANJAPPA.—I was a member of the Representative Assembly when you were a Minister.

Sri J. MOHAMED IMAM.—As a member of the Representative Assembly you could understand precious little.

When I was in the Ministry, we took proper care and precaution to see that the amount was spent well. You can judge from the number of new roads constructed ; you can judge from the state of the roads in which they were kept at that time. I have no hesitation in saying that the amount at that time was spent more usefully and profitably.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಅವರವರು ಅವರವರ ಕಾಲಗಳನ್ನು ಹೊಗಳಿಕೊಳ್ಳುವುದು ಸ್ವಾಭಾವಿಕ.

Sri J. MOHAMED IMAM.—There are facts and figures.

Mr. SPEAKER.—Is not the road between Davangere and Jagalur better even now ?

Sri J. MOHAMED IMAM.—It is not at all satisfactory. Nearly ten or twelve buses run between those two places. Every year grant is given for repair of about two or three miles and within two months of the work you will find that the metal will have blown off and the repaired portion will be as bad as any other portion of the road. That is because of the heavy traffic. That is why I say that our system of road repair must be changed and we must adopt some other form which will stand the wear and tear much better. I am very particular of the cement-concreting of roads—not even asphalting of roads because asphalting of roads involves a good deal of expenditure and it will stand only for a few years. But cement-concreting of roads, though it involves a good deal of expenditure, is cheaper in the long run. It does not require repairs for at least 30 years. It will save the cost of maintenance, and, so, economically it is very advantageous.

Sri V. VENKATAPPA (Channapatna).—What is the cost of maintenance ?

Sri J. MOHAMED IMAM.—Practically nil. You have to spend some money when the road has to be cement-concreted but so far as the cost of maintenance is concerned it is nothing.

So the time has come for the Government to consider seriously as to the form and method to be adopted hereafter in the repair of roads.

Sri Kadidal MANJAPPA.—You had plenty of money ; why did you not have roads cement-concreted ?

Sri J. MOHAMED IMAM.—I had a programme for five years. I wanted Shimoga-Harihar road to be cement-concreted.

Sri T. N. MUDALAGIRI GOWDA (Kunigal).—In the meanwhile you were checked out.

Sri J. MOHAMED IMAM.—Not checked out ; we quitted.

We had ample funds, to the extent of nearly 36 crores and when you came to office you had not that vision of pursuing the policy of improving roads. That was given up. The folly is certainly yours and not mine.

Sri Kadidal MANJAPPA.—They are certainly better than what they were.

Sri S. SRINIVASA IYENGAR (T.-Narsipur).—They have deteriorated.

Sri J. MOHAMED IMAM.—I have seen that the metal and gravel collected for repairing roads are not made use of in the same year. I have seen gravel pits wherein small shrubs and plants have grown. It clearly indicates that the gravel must have been collected some two or three years ago and has not been made use of. In many cases it often happens that the material collected during a year will not be made use of for repairing roads during that year alone. Secondly, the mode of consolidation, is a little faulty. When there are good rains and when the conditions are favourable, they must undertake the work of consolidation. It also often happens that when the rainy

(Sri J. MOHAMED IMAM.)

season has disappeared they spread the metal and make a pretence of rolling with the result that within two months the entire repairs will have been damaged or will have disappeared. They are slacknesses which require to be investigated by the Government. As I said, the present condition of roads is due to three causes; the first is the volume of traffic; the second, inadequacy of grant and the third, slackness in supervision. If these things are rectified, I think, the condition of our roads may improve. We may be glad that we have improved roads in some form but anyhow it is agreed to by all the members of the House that the condition of our roads is very bad and that they require immediate repairs. I am sure that Government will pay special attention to this matter.

ಶ್ರೀಮತಿ ಬಿ. ಎಲ್ ಸುಬ್ಬಮ್ಮ (ಚಿಕ್ಕಮಗಳೂರು–ಮೂಡಿಗೆರೆ).—ಸ್ವಾಮಿ, ನಾನು ಈ ವಿಚಾರದಲ್ಲಿ ಒಂದು ಖೋತಾ ನಿರ್ಣಯವನ್ನು ಸಹ ಕಳುಹಿಸಿದ್ದೇನೆ. ಮಲೆನಾಡಿನಲ್ಲಿ ರಸ್ತೆಗಳ ಸ್ಥಿತಿ ಹೇಗಿರುತ್ತೆಂಬುದನ್ನು ಸರ್ಕಾರದವರ ಗಮನಕ್ಕೆ ತರಬೇಕೆಂಬುದೇ ಆ ನನ್ನ ಖೋತಾ ನಿರ್ಣಯದ ಉದ್ದೇಶ. ಈ ವಿಚಾರವಾಗಿ ನಾನು ಹೋದ ವರ್ಷ ಬಹಳ ಕಟುವಾಗಿ ಮಾತನಾಡಿದ್ದೆನು. ಆದರೆ ಈ ವರ್ಷ ಶಕ್ಯಮಟ್ಟಿಗೆ ಅಲ್ಲಿ ರಸ್ತೆ ದುರಸ್ತಿ ಕೆಲಸಗಳು ನಡೆದಿರುತ್ತವೆಂದು ಹೇಳಬೇಕಾಗಿದೆ. ಅನೇಕ ವರ್ಷಗಳಿಂದಲೂ ದುರಸ್ತಾಗದೆ ಇದ್ದಂಥ ರಸ್ತೆಗಳೆಲ್ಲವನ್ನೂ ಏಕ್‌ದಂ ಒಂದೇ ಸಲ ಸರಿಪಡಿಸಬೇಕೆಂದರೆ ಯಾರಿಗಾದರೂ ಬಹಳ ಕಷ್ಟದ ಕೆಲಸವೇ ಹೌದು ಮಾಡಿರತಕ್ಕ ಕೆಲಸವನ್ನು ಮಾಡಿಲ್ಲವೆಂದು ಎಂದಿಗೂ ಹೇಳಬಾರದು. ಅದನ್ನು ಒಪ್ಪಿಕೊಳ್ಳುವುದು ಒಳ್ಳೆಯದು

ನಮ್ಮ ಜಿಲ್ಲೆಯಲ್ಲಿ ಕಡೂರು–ಮಂಗಳೂರು ರಸ್ತೆಯಲ್ಲಿ ವ್ಯಾಪಾರ ಹೆಚ್ಚಾಗಿರುವುದರಿಂದ ಅಲ್ಲಿ ವಾಹನ ಸಂಚಾರಗಳು ತಿರುಗಿ ಹೆಚ್ಚಾಗಿದೆ ಈ ರಸ್ತೆಗೆ ಸಿಮೆಂಟ್, ಕಾಂಕ್ರೀಟ್ ಮಾಡಿಸಬೇಕೆಂದು ಬಹಳ ವರ್ಷಗಳಿಂದಲೂ ಕೇಳಿಕೊಳ್ಳುತ್ತಲೇ ಇದ್ದೇವೆ. ಆದರೆ ಅದರಿಂದೇನೂ ಪ್ರಯೋಜನವಾಗಿಲ್ಲ. ಇನ್ನು ನಮ್ಮ ಜಿಲ್ಲೆಗೆ, ರೈಲ್ವೆ ಸೌಕರ್ಯವಂತೂ ಇಲ್ಲವೇ ಇಲ್ಲ ಕಡೂರು ಚಿಕ್ಕಮಗಳೂರಿಗೆ ರೈಲ್ವೆ ಲೈನ್ ಹಾಕಬೇಕೆಂದು ಒತ್ತಾಯ ಮಾಡಿದೆವು. ಅದೂ ಕೂಡ ಇನ್ನೂ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆದರೆ ಚಿಕ್ಕಮಗಳೂರು ಮತ್ತು ಕಡೂರು ಈ ಎರಡು ಸ್ಥಳಗಳಿಂದ ಸುಮಾರು ಎರಡು ಮೈಲಿಗಳ ತನಕ ಈ ಸಿಮೆಂಟ್ ರೋಡ್ ಮಾಡಿಕೊಂಡು ಬಂದಿದ್ದು ಅಲ್ಲಿಂದ ಮುಂದಕ್ಕೆ, ಸಿಮೆಂಟಿನ ಅಭಾವದಿಂದಲೋ ಏನೋ ಕೆಲಸವನ್ನು ಇತ್ತೀಚೆಗೆ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದಾರೆ. ಅಂತೂ ಆ ರಸ್ತೆಯ ಕೆಲಸ ಸಹ ಬಹಳ ನಿಧಾನವಾಗಿದೆ.

ಇನ್ನು ರಸ್ತೆಗಳ ರಿಪೇರಿ ಮತ್ತು ಸಾರಾಬಾದ ಕಾಮಗಾರಿಗಳನ್ನು ಕೈಕೊಳ್ಳತಕ್ಕ ಬಗ್ಗೆ ಸರ್ಕಾರದವರೂ ಮತ್ತು ಜಿಲ್ಲಾ ಬೋರ್ಡುಗಳವರೂ ಈ ರಸ್ತೆಗಳನ್ನು ರೀಕ್ಲಾಸಿಫಿಕೇಷನ್ ಮಾಡಿ, ಯಾರು ಯಾರು ಯಾವ ಯಾವ ರಸ್ತೆಗಳನ್ನು ಹೇಗೆ ರಿಪೇರಿ ಮಾಡಿಸಬೇಕೆಂಬ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬಂದಿದ್ದಾರೆಂದು ತಿಳಿದು ಬರುತ್ತದೆ. ಆದರೆ ನಮ್ಮ ಮಲೆನಾಡು ಎಲ್ಲ ವಿಷಯಗಳಲ್ಲಿಯೂ ಬಹಳ ಹಿಂದೆ ಬಿದ್ದಿದೆ. ನಾನು ಹೀಗೆ ಹೇಳತಕ್ಕದ್ದನ್ನು ಒಂದು ಉತ್ಪ್ರೇಕ್ಷೆಯೆಂದು ಯಾರೂ ಭಾವಿಸಬಾರದು. ಮೂಡಿಗೆರೆಯಿಂದ 14 ಮೈಲಿ ಫಾಸಲೆಯಲ್ಲಿ ಗೋಣೀಬೀಡು ಎಂಬ ಒಂದು ಗ್ರಾಮವಿದೆ. ಆ ಗ್ರಾಮಕ್ಕೆ ಹೋಗಲು ಎತ್ತ ಕಡೆಯಿಂದಲೂ ರಸ್ತೆಯೇ ಇಲ್ಲ. ಅಲ್ಲಿನ ಜನರ ಗೋಳನ್ನು ಹೇಳತೀರದಾಗಿದೆ. ನಿಜವಾಗಿಯೂ ಅಲ್ಲಿನ ಜನರು ಬಹಳ ತೊಂದರೆಯಲ್ಲಿರುತ್ತಾರೆ. ಒಂದು ಸಾರ್ತಿ ಒಬ್ಬ ಗರ್ಭಿಣಿ ಹೆಂಗಸು ಆಸ್ಪತ್ರೆಗೆ ಬರಲು ಪಟ್ಟ ಕಷ್ಟವನ್ನಂತೂ ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಮಳೆಗಾಲದಲ್ಲಿ ಗಾಡಿಯಲ್ಲಿ ಆಕೆಯನ್ನು ಕರೆತರುವುದಕ್ಕೆ ರಸ್ತೆಯಿಲ್ಲ. ನಡೆದುಕೊಂಡು ಬರಲು ಹೇಮಾವತಿನದಿ ಬೇರೆ. ಆ ನದಿಗೆ ಒಂದು ಸೇತುವೆ ಇಲ್ಲದೆ ಅಲ್ಲಿನ ಜನರಿಗೆ ಬಹಳ ಕಷ್ಟವಾಗಿದೆ, ಆ ಹೊಳೆಗೆ ಅದೊಂದು ಸೇತುವೆ ಕಟ್ಟಿಸಿಕೊಡಬೇಕೆಂದು ಸಾಧಾರಣವಾಗಿ 25–30 ವರ್ಷಗಳಿಂದಲೂ ಸರ್ಕಾರದವರನ್ನು ಒತ್ತಾಯಮಾಡಿ ಸಾಕಾಯಿತು. ಆದರೆ ಆ ಸೇತುವೆಯನ್ನು ಇನ್ನೂ ಕಟ್ಟಿಸಿರುವುದಿಲ್ಲ, ಹೊಳೆ ದಾಟಲು ದೋಣಿಯಿಲ್ಲ, ಗಾಡಿ ಬರಲಿಕ್ಕೆ ರಸ್ತೆಯಿಲ್ಲ. ಹೀಗೆಲ್ಲಾ ಆಗಿ ಆ ಗರ್ಭಿಣಿ ಹೆಂಗಸು ಆ ದಿನ ಆಸ್ಪತ್ರೆಗೆ ಬರಲು ಬಹಳ ಕಷ್ಟವಾಯಿತು. ಇದೇ ರೀತಿಯಾಗಿ ಮತ್ತೊಂದು ಕಡೆ ಜಾವತಿ ಎಂಬ ಒಂದು ಹೊಳೆಯಿದೆ. ಅದು ಸುಮಾರು ಮೂಡಿಗೆರೆಗೆ 5–6 ಮೈಲಿಗಳ ಫಾಸಲೆಯಲ್ಲಿರುತ್ತದೆ. ಅಲ್ಲಿಯೂ ಸಹ ಇದೇ ರೀತಿ ರಸ್ತೆ ಸೌಕರ್ಯಗಳಿಲ್ಲದೆ ಜನರಿಗೆ ತುಂಬಾ ಕಷ್ಟವಾಗಿದೆ. ಆದುದರಿಂದ ಆ ನದಿಗೂ ಕೂಡ ಒಂದು ಸೇತುವೆ ಹಾಕಿಸಿದರೆ ಆ ಪ್ರದೇಶದ ಜನರಿಗೆ ಮಳೆಗಾಲದಲ್ಲಿ ಓಡಾಡಲು ಬಹಳ ಅನುಕೂಲ ಮಾಡಿದಂತಾಗುತ್ತದೆ. ಇದೇ ರೀತಿಯಾಗಿ ಮತ್ತೊಂದು ಕಡೆ, ಸುಮಾರು ಚಿಕ್ಕಮಗಳೂರಿಗೆ 40–50 ಮೈಲಿ ಫಾಸಲೆಯಲ್ಲಿ ತುಂಬಾ ಕಾಡು ಪ್ರದೇಶ, ಮಂಗಳ ಎಂಬ ಒಂದು ಗ್ರಾಮವಿದೆ. ಅದರ ಸಮೀಪದಲ್ಲೇ ಕಲ್ಗುಡಿ ಎಂಬ ಒಂದು ದೇವಸ್ಥಾನವಿದೆ. ಆ ದೇವಸ್ಥಾನದಲ್ಲಿದ್ದ ಪ್ರತಿಮೆ ಕಳವಾಗಿಹೋಯಿತು. ಆಗ ಅದನ್ನು ವಿಚಾರಣೆ ಮಾಡಲು ಅಲ್ಲಿಗೆ ಹೋಗುವುದಕ್ಕೆ ರಸ್ತೆಯಿಲ್ಲದೆ ಸರ್ಕಾರದವರಿಗೆ ತುಂಬ ತೊಂದರೆಯಾಯಿತು. ಈ ವಿಚಾರ ಸರ್ಕಾರದವರ ಗಮನಕ್ಕೂ ಸಹ ಬಂದಿರಬೇಕು, ಹೀಗೆ ಅಲ್ಲಿನ ಜನರಿಗೆ ಬಹಳ ಅನಾನುಕೂಲಗಳಿವೆ. ತಾವು ಹೇಳಬಹುದು, ರಸ್ತೆಗಳನ್ನೆಲ್ಲಾ ವರ್ಷೇ ವರ್ಷೇ ರಿಪೇರಿ ಮಾಡಿಸುತ್ತಿದ್ದೇವೆ ಎಂದು. ಆದರೆ ನಮ್ಮ ಮಲೆನಾಡಿನಲ್ಲಿ ಸಾಮಾನ್ಯವಾಗಿ ಮಳೆ ಹೆಚ್ಚಾಗಿ ಬೀಳುತ್ತಿರುವುದರಿಂದ ಅಲ್ಲಿ ರಸ್ತೆಗಳು ಬಹು ಬೇಗ ಕೆಟ್ಟುಹೋಗುತ್ತವೆ. ಅಲ್ಲದೆ ಈ ರಸ್ತೆಗಳನ್ನು ದುರಸ್ತಿ ಮಾಡಿಸತಕ್ಕ ವಿಚಾರದಲ್ಲಿ ಮೈದಾನ ಪ್ರದೇಶದಲ್ಲಿರುವ, ಅಂದರೆ ಈ ಬೆಂಗಳೂರು, ಮೈಸೂರು ಇಂಥ ಕಡೆ ಇರತಕ್ಕ ಕಂಟ್ರಾಕ್ಟರುಗಳಿಗೆ ಆ ಕೆಲಸವನ್ನು ಕೊಟ್ಟರೆ, ಅವರು ಒಂದು ಟೆಕ್ನಿಕಲ್ ರೀತಿಯಾಗಿ ನಡೆಸತಕ್ಕ ಅನುಭವವಿರುವುದರಿಂದ ಇಲ್ಲಿಯ ರಸ್ತೆಗಳು ಅಷ್ಟು ಬೇಗ ಹಾಳಾಗದಂತೆ ಕೆಲಸ ಮಾಡುತ್ತಾರೆ. ಆದರೆ ನಮ್ಮ ಮಲೆನಾಡಿನಲ್ಲಿ ಇಂಥ ಅನುಭವಸ್ಥರಾದ ಕಂಟ್ರಾಕ್ಟರುಗಳು ಇಲ್ಲದಿರುವುದರಿಂದಲೂ, ಆ ಕೆಲಸವನ್ನು ಅಲ್ಲಿರತಕ್ಕ ಹಳ್ಳಿಯ ಜನರೇ ಮಾಡುತ್ತಿರು

ವುದರಿಂದಲೂ ಅಲ್ಲಿಯ ರಸ್ತೆಗಳು ಬಹುಬೇಗ ಹಾಳಾಗಲೂ ಅವಕಾಶವಾಗಿದೆ. ಇದೂ ಅಲ್ಲದೆ, ನಮ್ಮ ಹಳ್ಳಿಯ ಕಂಟ್ರಾಕ್ಟರುಗಳಿಗೆ ಇನ್ನೂ ಒಂದು ದೊಡ್ಡ ತೊಂದರೆಯಿದೆ. ಅವರು ಕೆಲಸ ಮುಗಿಸಿ ಬಿಲ್ಲುಗಳನ್ನು ಕೊಟ್ಟರೆ, ಇಂಜನಿಯರಿಂಗ್ ಇಲಾಖೆಯವರು ತುಂಬಾ ಸತಾಯಿಸುತ್ತಿದ್ದಾರೆ. ಹೀಗೆ ಮಾಡುತ್ತಿರುವುದರಿಂದ ಅವರಿಗೆ ಕೆಲಸಮಾಡಲು ಉಮೇದಿರುವುದಿಲ್ಲ. ಇದನ್ನು ತಾವು ಮೊದಲು ಸರಿಪಡಿಸಬೇಕು. ಅಂತೂ ಕೆಲಸ ಮಾಡುವುದರಲ್ಲಿ ಮೈದಾನದ ಕಂಟ್ರಾಕ್ಟರುಗಳಿಗೂ, ಮಲೆನಾಡಿನ ಕಂಟ್ರಾಕ್ಟರುಗಳಿಗೂ ಬಹಳ ವ್ಯತ್ಯಾಸ ವಿದೆ

ಇನ್ನು ಈ ರಸ್ತೆ ರಿಪೇರಿಗಾಗಿ ಸರ್ಕಾರದವರು ಮಲೆನಾಡಿಗೂ ಮೈದಾನಕ್ಕೂ ಒಂದೇ ಸಮನಾಗಿ ಮೈಲೇಜ್ ಗ್ರಾಂಟನ್ನು ಕೊಡುತ್ತಿದ್ದಾರೆ. ಆದರೆ ಮಲೆನಾಡಿನ ಸ್ಥಿತಿಗತಿಗೂ ಮೈದಾನದ ಸ್ಥಿತಿ ಗತಿಗೂ ಬಹಳ ವ್ಯತ್ಯಾಸವಿದೆ, ಮಲೆನಾಡಿನಲ್ಲಿ ಸುಮಾರು 300 ಇಂಚುಗಳಿಗಿಂತಲೂ ಹೆಚ್ಚಿನ ಮಳೆ ಬೀಳುತ್ತಿರುವ ಕಾರಣ ರಸ್ತೆಗಳು ಬಹುಬೇಗ ಹಾಳಾಗಿ ಹೋಗುತ್ತಿವೆ. ಆ ಕಾರಣ ತಾವು ಮಲೆನಾಡಿಗೆ ಹೆಚ್ಚಿನ ಮೈಲೇಜ್ ಗ್ರಾಂಟನ್ನು ಕೊಡಬೇಕೆಂದು ತಿಳಿಸುತ್ತೇನೆ. ಚಿಕ್ಕಮಗಳೂರಿನಿಂದ ಕಡೂರು—ಮಂಗಳೂರು ಮಾರ್ಗವಾಗಿ ಹೋಗತಕ್ಕ ರಸ್ತೆ ಹೇಗಿರುತ್ತೆಂಬ ವಿಷಯ ಇಲ್ಲಿರತಕ್ಕ ಅನೇಕ ಮಾನ್ಯ ಸದಸ್ಯರುಗಳಿಗೂ ಗೊತ್ತೇ ಇದೆ. ಒಬ್ಬ ಬಸ್ ಮಾಲೀಕರು ಈ ರಸ್ತೆಯ ದುರಸ್ತಿಗಾಗಿ 25 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ, ಆ ಬಗ್ಗೆ ಸರ್ಕಾರಕ್ಕೆ ಬಿಲ್ಲನ್ನು ಕೊಟ್ಟಿದ್ದಾರೆ. ಆದರೆ ಡೆಪ್ಯುಟಿಕಮಿಷನರು, ಆ ಕೆಲಸಕ್ಕೆ ಎಸ್ಟಿಮೇಟ್ ಮಂಜೂರಾಗದೆ ಇರುವಾಗಲೇ ತಾವು ಕೆಲಸವನ್ನು ಪೂರೈಸಿರುತ್ತೀರಿ, ತಾವು ಖರ್ಚುಮಾಡಿರುವಷ್ಟು ಹಣವನ್ನು ಕೊಡುವುಕ್ಕಾಗುವುದಿಲ್ಲ, ಅದರಲ್ಲಿ ಸ್ವಲ್ಪ ಕಡಿಮೆಮಾಡಬೇಕಾಗಿದೆಯೆಂದು ಹೇಳುತ್ತಿದ್ದಾರೆ. ಹೀಗೆ 25 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ, 5 ಸಾವಿರ ಕಡಿಮೆತೆಗೆದುಕೊಳ್ಳಬೇಕೆಂದು ಹೇಳುತ್ತಿರುವುದರಿಂದ ಹಳ್ಳಿಯ ಜನರು ಮುಂದೆ ಬಂದು ಇಂಥ ಕೆಲಸಗಳನ್ನು ಕೈಕೊಳ್ಳಲು ತುಂಬ ಹೆದರುತ್ತಿದ್ದಾರೆ. ಈ ವಿಚಾರದಲ್ಲಿ ತಾವು ಇಂಜನಿಯರಿಂಗ್ ಇಲಾಖೆಯವರಿಗೆ ಸರಿಯಾದ ತಿಳಿವಳಿಕೆಯನ್ನು ಕೊಡಬೇಕು. ಇನ್ನು ಜನರು ಕೆಲಸ ಮುಗಿಸಿ ಫೈನಲ್ ಬಿಲ್‌ಗಳನ್ನು ಕೊಟ್ಟಮೇಲೂ ಸಹ ಅವರ ಬಿಲ್ಲುಗಳನ್ನು ಕಾಲಕ್ಕೆ ಸರಿಯಾಗಿ ಚೆಕ್‌ಮಾಡಿ ಅವರಿಗೆ ಹಣ ಪಾವತಿಮಾಡದೆ, ಅಸಿಸ್ಟೆಂಟ್ ಇಂಜನಿಯರು ಅವುಗಳನ್ನು ಎಗ್ಸಿಕ್ಯುಟೀವ್ ಇಂಜನೀಯರಿಗೂ ಅನಂತರ ಅವರು ಅವನ್ನು ಸೂಪರಿಂಟೆಂಡಿಂಗ್ ಇಂಜನಿಯರವರಿಗೂ ಅನಂತರ ಚೀಫ್ ಇಂಜನಿಯರ್ ಅವರಿಗೂ ಕಳುಹಿಸುವ ನೆಪದಲ್ಲಿ 3-4 ವರ್ಷಗಳಾದರೂ ಹಣವೂ ಪಾವತಿಯಾಗುವುದಿಲ್ಲ. ಕೆಲಸಗಳನ್ನು ಸಹ ಹೊಸದಾಗಿ ಅಂದಾಜು ತಯಾರಿಸಿ ಮಾಡಲು ಅವಕಾಶವಿಲ್ಲ. ಅಂದಾಜುಗಳು ಜಾಗ್ರತೆ ಮಂಜೂರಾಗುವಂತೆ ಸರ್ಕಾರದವರು ತಕ್ಕ ನಿಗಾ ಕೊಡಬೇಕು ಸರ್ಕಾರದವರು ಈ ರಸ್ತೆಗಳ ವಿಚಾರದಲ್ಲಿ ಹೆಚ್ಚಿನ ನಿಗಾಕೊಟ್ಟು ಪ್ರಯಾಣಿಕರಿಗೆ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಲ್. ಸಿದ್ದಪ್ಪ.—ಸ್ವಾಮಿ, ಈಗಾಗಲೇ ನಮ್ಮ ಅನೇಕ ಮಾನ್ಯ ಮಿತ್ರರು ತಿಳಿಸಿರುವಂತೆ ಈ ಪಿ.ಡಬ್ಲ್ಯು.ಡಿ. ಯನ್ನು ಸಂಪೂರ್ಣವಾಗಿ ರೀ ಆರ್ಗನೈಜ್ ಮಾಡುವುದು ತೀರ ಅವಶ್ಯಕವೆಂದು ನಾನೂಕೂಡ ಹೇಳುತ್ತೇನೆ. ಕೆಲವು ಸಬ್‌ಡಿವಿಜನ್ನುಗಳಲ್ಲಿ ವಾಸ್ತವವಾಗಿ ಅಸಿಸ್ಟೆಂಟ್ ಇಂಜನಿಯರ್‌ಗಳಿಗೆ ಏನೂ ಕೆಲಸವಿರುವುದಿಲ್ಲ. ಸಣ್ಣಪುಟ್ಟ ಕೆಲಸಕಾರ್ಯಗಳಿರುವ ಕಡೆಗಳಲ್ಲೂ ಒಂದೊಂದು ಸಬ್‌ಡಿವಿಜನ್ ಇಟ್ಟುಕೊಂಡಿರುತ್ತಾರೆಂದು ತಿಳಿದುಬಂದಿದೆ. ಈಗ ನಮ್ಮ ಜಿಲ್ಲೆಯ ವಿಚಾರವನ್ನೇ ತೆಗೆದುಕೊಳ್ಳೋಣ, ನಮ್ಮ ಜಿಲ್ಲೆಯ ವಿಚಾರ ಈಗಿನ ಮಾನ್ಯ ಮರಾಮತ್ ಸಚಿವರಿಗೂ ಚೆನ್ನಾಗಿ ಗೊತ್ತಿದೆ. ಮತ್ತು ಮಾನ್ಯ ಅಧ್ಯಕ್ಷರಿಗೂ ಸಹ ಚೆನ್ನಾಗಿ ಗೊತ್ತಿದೆ. ಮಲೆನಾಡು ತಾಲ್ಲೂಕುಗಳಲ್ಲಿ ಕೆಲವು ಕಡೆ ಹೆಚ್ಚಿಗೆ ಕೆಲಸವಿರಬಹುದು. ಹಾಗೆ ನೋಡಿದರೆ ಸೊರಬ, ಶಿಕಾರಿಪುರ, ಸಾಗರ, ನಗರ ಮತ್ತು ತೀರ್ಥಹಳ್ಳಿ. ಈ ತಾಲ್ಲೂಕುಗಳಲ್ಲಿ ಕೆಲಸ ಜಾಸ್ತಿ ಇರುತ್ತದೆ. ಅಲ್ಲಿ ಕೆರೆಗಳೂ ಜಾಸ್ತಿಯಿವೆ. ಹೀಗೆ ಎಲ್ಲಿ ಕೆರೆಗಳು ಮತ್ತು ಇಲಾಖೆಗೆ ಸಂಬಂಧಪಟ್ಟ ಕೆಲಸಗಳು ಹೆಚ್ಚಾಗಿರುತ್ತವೆಯೋ ಅಲ್ಲಿ ತಾಲ್ಲೂಕಿಗೆ ಒಂದು ಸಬ್‌ಡಿವಿಜನ್ ಪ್ರಕಾರ ಇಟ್ಟುಕೊಂಡರೆ ಅನುಕೂಲವಾಗುತ್ತದೆ.

ಅದು ಬಿಟ್ಟು ಚೆನ್ನಗಿರಿ, ಹೊನ್ನಾಳಿ ತಾಲ್ಲೂಕುಗಳಿಗೆ ಬೇರೆ ಬೇರೆ ಒಂದೊಂದು ಏರ್ಪಡಿಸಿದ್ದೀರಿ. ನಮ್ಮ ಊರಿ ಒಂದು ಹೆಚ್ಚಿಗೆ ಕೊಡಿ ಎಂಬುದು ಸ್ವಾಭಾವಿಕವೇ. ಆದರೂ ನಾನು ಆ ರೀತಿ ಕೇಳುವುದಿಲ್ಲ. ಏಕೆಂದರೆ, ನಮಗೇ ಗೊತ್ತಿದೆ. ಹಿಂದೆ ಭದ್ರಾವತಿ, ಚೆನ್ನಗಿರಿ ಎರಡೂ ಸೇರಿ ಒಂದೇ ಸಬ್‌ಡಿವಿಜನ್ ಇತ್ತು. ಅದು ಬಹಳ ದಕ್ಷತೆಯಿಂದ ಕೆಲಸಮಾಡುತ್ತಿತ್ತು. ಈಗ ಚೆನ್ನಗಿರಿಯಲ್ಲೇ ಒಂದು ಸಬ್‌ಡಿವಿಜನ್ ಇಟ್ಟು ಅಲ್ಲಿಗೆ ಇಬ್ಬರು ಇಂಜನಿಯರ್‌ಗಳ ಜೊತೆಗೆ ನಾಲ್ಕು ಜನ ಅಸಿಸ್ಟೆಂಟ್ ಇಂಜನಿಯರುಗಳನ್ನೂ ಕೊಟ್ಟಿದ್ದೀರಿ. ಅಲ್ಲದೆ ದೊಡ್ಡದೊಡ್ಡ ಕೆಲಸಗಳನ್ನು ತೆಗೆದುಕೊಂಡರೆ ಅದಕ್ಕೊಬ್ಬರು ಸರ್ವೇಯರನ್ನು ಬೇರೆಕೊಡುತ್ತಾರೆ. Normal ಕೆಲಸಗಳಿಗೆ ಬೇರೆ ಒಬ್ಬರು ಸಬ್ ಓವರ್ಸಿಯರ್ ಇರುತ್ತಾರೆ. ಇದೇ ರೀತಿ ಶಿಕಾರಿಪುರ ಮತ್ತು ಹೊನ್ನಾಳಿ ತಾಲ್ಲೂಕುಗಳ ಕೆಲಸಗಳನ್ನು ನೋಡಿಕೊಳ್ಳುವುದಕ್ಕೆ ಹಿಂದೆ ಶಿಕಾರಿಪುರದಲ್ಲಿ ಒಂದೇ ಒಂದು ಸಬ್‌ಡಿವಿಜನ್ ಇತ್ತು. ಈಗಲಾದರೋ, ಶಿಕಾರಿಪುರ ಮತ್ತು ಹೊನ್ನಾಳಿ ಎರಡರಿಂದ ಒಟ್ಟು ಮೂರು ಸಬ್‌ಡಿವಿಜನ್‌ಗಳಿವೆ—ಒಂದು ಅಂಜನಾಪುರ ಸಬ್‌ಡಿವಿಜನ್, ಇನ್ನೊಂದು ಶಿಕಾರಿಪುರ ಸಬ್ ಡಿವಿಜನ್, ಇನ್ನೊಂದು ಹೊನ್ನಾಳಿ ಸಬ್‌ಡಿವಿಜನ್. ಇದು ಬಹಳ ಅನಾವಶ್ಯಕ. ಚೆನ್ನಗಿರಿ ತಾಲ್ಲೂಕಿನಲ್ಲಾದರೋ ಸೂಳೆಕೆರೆಯೆಂಬ ದೊಡ್ಡ ಕೆರೆ ಇದೆ. ಹೊನ್ನಾಳಿ ತಾಲ್ಲೂಕಿನಲ್ಲಂತೂ ಏನೂ ಕೆಲಸವಿಲ್ಲ. ಈ ರೀತಿಯಾಗಿ ನೋಡಿ ಎಲ್ಲಿ ಕೆಲಸ ಜಾಸ್ತಿ ಇದೆಯೋ ಅಲ್ಲಿಗೆ ಸಿಬ್ಬಂದಿ ಜಾಸ್ತಿಮಾಡಬೇಕು. ಕೆಲಸ ವಿಲ್ಲದಿರುವ ಕಡೆ ಹೆಚ್ಚಿಗೆ ಇರುವ ಸಿಬ್ಬಂದಿ ತೆಗೆಯಬೇಕು. ಹೀಗೆ ಮಾಡುವುದು ಸಾಧ್ಯ. ರಿಟ್ರೆಂಚ್‌ಮೆಂಟ್ ದೃಷ್ಟಿಯಿಂದ ಹೀಗೆ ಮಾಡುವುದರಿಂದ ಅನುಕೂಲವಾಗುತ್ತದೆ; ಮತ್ತು ಕೆಲಸ ಜಾಸ್ತಿ ಇರುವ ಕಡೆಗಳವರಿಗೂ ಸಹಾಯವಾಗುತ್ತದೆ. ಆದ್ದರಿಂದ ಮಂತ್ರಿಗಳು ಈ ರೀತಿ ಈ ಇಲಾಖೆಯನ್ನು ರೀ—ಆರ್ಗನೈಜ್ ಮಾಡಿ ಎಲ್ಲಿ ಖೋತಾ ಮಾಡಬಹುದು, ಎಲ್ಲಿ ಹೆಚ್ಚು ಮಾಡಬಹುದು ಎಂಬುದನ್ನು ನೋಡಿ ಸೂಕ್ತ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ಶ್ರೀ ದೇವರಾಜ್ ಅರಸ್‌ನವರು ಟೂಲ್ಸ್ ಮತ್ತು ಪ್ಲಾಂಟ್ಸ್ ಚಾರ್ಜಿನ ಬಗ್ಗೆ ಬಜೆಟ್ಟಿನಲ್ಲಿ ಒದಗಿಸಿರುವ ಮೊಬಲಗಿನ ಬಗ್ಗೆ ಆಕ್ಷೇಪಿಸುತ್ತಾ ಅದು ಬಹಳ ಜಾಸ್ತಿ ಎಂದು ಹೇಳಿದರು; ಮತ್ತು ವರ್ಷೇ ವರ್ಷೇ ಇದು ಜಾಸ್ತಿಯಾಗುತ್ತಿದೆಯೆಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಈ

(ಶ್ರೀ ಎಲ್.. ಸಿದ್ದಪ್ಪ)

ಬಾಬಿಗೆ ಕೊಟ್ಟಿರುವುದು ಬಹಳ ಕಡಮೆ ಎಂದು ಹೇಳಬೇಕು. ಏಕೆಂದರೆ ಶ್ರೀ ಇಮಾಂರವರು ಮಂತ್ರಿಗಳಾಗಿದ್ದಾಗ್ಗೆ ಕೆಲವು ಕೆರೆಗಳನ್ನು ಅವರು ಸ್ಯಾಂಕ್ಷನ್ ಮಾಡಿದ್ದರು. ಆ ಕೆರೆಗಳು ಈಗ ಮುಗಿಯುತ್ತಾ ಬಂದಿವೆ. 1943-44ರಲ್ಲಿ ಮಂಜೂರಾದ ಕೆರೆಗಳು ಈಗ ತಾನೇ ಮುಗಿದಿವೆ. 1944ರಲ್ಲಿ ಕ್ಷಾಮ ಬಂದಾಗ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಸಂಗೇನಹಳ್ಳಿ ಕೆರೆ ಎಂಬುದನ್ನು ಸ್ಯಾಂಕ್ಷನ್ ಮಾಡಿದ್ದೆವು. ಹಿಂದೆ ಯಾವ ರೀತಿ ಕೆಲಸ ನಡೆಯುತ್ತಿತ್ತೊ, ಅದೇ ವೇಗದಲ್ಲಿ ಗಡಿಮಾಕುಂಟೆ, ತಪ್ಪದಹಳ್ಳಿ, ಕಪೂರ್ತಿ ಈ ಕೆರೆಗಳನ್ನು ಮಾಡಿಸಿದ್ದರೆ ಬಹುಶಃ ಅವನ್ನು ಮುಗಿಸಬೇಕಾದರೆ ಇನ್ನು ಹತ್ತು ವರ್ಷ ಬೇಕಾಗುತ್ತಿದ್ದುವು. ಅಂಥಾದ್ದನ್ನು ಇಷ್ಟು ಬೇಗ ಮುಗಿಸಿದ್ದಾರೆ. ನಿಜವಾಗಿಯೂ ಬಹಳ ಸಂತೋಷ. ಇದು ಹೇಗೆ ಸಾಧ್ಯವಾಯಿತು ಎಂದು ಕೇಳಿದ್ದರಲ್ಲಿ ಮೆಷಿನರಿಗಳನ್ನು ತಂದು ಕೆಲಸ ಮಾಡಿಸಿದೆವು ಅದರಿಂದಾಗಿ ಕೆಲಸವನ್ನು ತೀವ್ರವಾಗಿ ಮುಗಿಸಲು ಸಾಧ್ಯವಾಯಿತೆಂದು ಹೇಳಿದರು. ಈ ದೃಷ್ಟಿಯಿಂದ ನೋಡಿದರೆ, ಇಲ್ಲಿ, to ls and plant chaiges ಬಾಬಿಗೆ ಕೊಟ್ಟಿರುವುದು ಬಹಳ ಕಡಿಮೆ ಎನ್ನಬೇಕು. ಏಕೆಂದರೆ, ನೀರಾವರಿ ಕಾಮಗಾರಿಗಳನ್ನು ತೀವ್ರವಾಗಿ ಹೆಚ್ಚು ಹೆಚ್ಚಿಗೆ ತೆಗೆದುಕೊಂಡು ನಾವೀಗ ಮುಗಿಸಬೇಕಾಗಿದೆ. ಇದರಿಂದ ಸರ್ಕಾರಕ್ಕೂ ಫಾಯಿದೆಇದೆ, ಜನರಿಗೂ ಅನುಕೂಲವಾಗುತ್ತದೆ. ಆದ್ದರಿಂದ ಇಂಥ ಮೆಷಿನರಿಗಳನ್ನು ಆ ಇಲಾಖೆಯವರಿಗೆ ಹೆಚ್ಚುಹೆಚ್ಚಿಗೆ ಕೊಟ್ಟು ಕೆಲಸಗಳನ್ನು ತ್ವರಿತವಾಗಿ ಮುಗಿಸಬೇಕೆಂದು ಒಂದು ಸಲಹೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ಅದು ಬುಲ್‌ಡೋಜರಿನಿಂದ ನಡೆಯುತ್ತಿದೆಯೇ?

ಶ್ರೀ ಎಲ್. ಸಿದ್ದಪ್ಪ.—ಅದು ನನಗೆ ಗೊತ್ತಿಲ್ಲ. ಬುಲ್‌ಡೋಜರ್ ಮಾತ್ರವೇ ಅಲ್ಲದೆ, earth moving equipment ಮುಂತಾದ ಇನ್ನೂ ಏನೇನೋ ಮೆಷಿನರಿಗಳಿವೆ. ಅವು ಬಹಳ ಉಪಯೋಗಕ್ಕೆ ಬರುತ್ತವೆ.

ಆ ಮೇಲೆ ಮೂರನೆಯದಾಗಿ, ರಸ್ತೆಗಳ ವಿಚಾರ. ನಮ್ಮ ಸಂಸ್ಥಾನದಲ್ಲಿ ರಸ್ತೆಗಳನ್ನು ಮಾಡಿಸುವುದಕ್ಕೆ ಯಾವ ಏಜೆನ್ಸಿಗಳಿವೆಯಲ್ಲಾ ಅವು ಬಹಳ ಹೆಚ್ಚು ಎನ್ನಬೇಕು. ಹೇಗೆಂದರೆ ಒಂದು ಕಡೆ ಸ್ಟೇಟ್ ಫಂಡು ರಸ್ತೆಗಳೆಂದಿವೆ. ಇವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯಿಂದಲೇ ಮಾಡಿಸುತ್ತೇವೆ. ಇನ್ನು ಕೆಲವು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಸ್ವಲ್ಪ ಕಂಟ್ರಿಬ್ಯೂಷನ್ ಕೊಡುವುದು, ಸರ್ಕಾರದವರು ಸ್ವಲ್ಪ ಕಂಟ್ರಿಬ್ಯೂಷನ್ ಕೊಡುವುದು—ಈ ರೀತಿ ಮಾಡಿ ಅದನ್ನೂ ಪಿ. ಡಬ್ಲ್ಯೂ. ಇಲಾಖೆಯಿಂದಲೇ ಮಾಡಿಸಿಕೊಡುತ್ತಾರೆ. ಇವೇ ಮಾರ್ಕೆಟಿಂಗ್ ರಸ್ತೆಗಳು. ಉಳಿದ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಸ್ಥಳೀಯ ಸಂಸ್ಥೆಗಳವರೇ ಸ್ವಂತವಾಗಿ ಮಾಡಿಸುತ್ತಾರೆ. ಇವಲ್ಲದೆ inter village ಸ್ಕೀಮಿನ ಪ್ರಕಾರ ಕೆ ಸ ರಸ್ತೆಗಳನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಮಾಡಿಸುತ್ತಾರೆ. ಇದರ ಮೇಲೆ ನಮ್ಮ ಸಂಸ್ಥಾನದಲ್ಲಿ ಅರಣ್ಯ ಇಲಾಖೆಯವರೂ ಕೆಲವು ರಸ್ತೆಗಳನ್ನು ಮಾಡಿಸುತ್ತಿದ್ದಾರೆ. ಇದನ್ನೆಲ್ಲ ನೋಡಿದರೆ, ಹೀಗೆ ರಸ್ತೆಗಳನ್ನು ಮಾಡಿಸುವ ಕೆಲಸವನ್ನು ನಾನಾ ಇಲಾಖೆಗಳಿಗೆ ಬಿಡದೆ ಎಲ್ಲಾ ರಸ್ತೆ ಕೆಲಸವನ್ನೂ ಪಬ್ಲಿಕ್ ವರ್ಕ್ಸ್ ಇಲಾಖೆಗೇ ವಹಿಸಿ ಯಾವ ಯಾವ ಸಂಸ್ಥೆಗಳು ಈ ಬಗ್ಗೆ ಎಷ್ಟೆಷ್ಟು ಖರ್ಚು ಮಾಡುತ್ತಿದ್ದಾರೊ ಅವನ್ನೇ ಈ ಇಲಾಖೆಗೆ ಗ್ರಾಂಟು ರೂಪದಲ್ಲಿ ಕೊಡುವಂತೆ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಮೊನ್ನೆ ಎಸ್. ಕರಿಯಪ್ಪನವರು ಕೇಳಿರುವ ಒಂದು ಪ್ರಶ್ನೆಗೆ ಕೊಟ್ಟಿರುವ ಜವಾಬನ್ನು ನೋಡಿದರೆ ಏನು ತೊಂದರೆಯಾಗುತ್ತಿದೆ ಎಂಬುದು ಅರ್ಥವಾಗುತ್ತದೆ. ಅವರು ಮೈಸೂರು ದೇಶದಲ್ಲಿರುವ ಜಂಗಲು ರಸ್ತೆಗಳ ಉದ್ದವೆಷ್ಟು, ಅವುಗಳಿಗೆ ಎಷ್ಟು ಖರ್ಚಾಗುತ್ತಿದೆ ಎಂದು ಕೇಳಿದ್ದಾರೆ. ಹೋದವರ್ಷ ಒಂದು ಸಾರಿ ನಾನು ಮತ್ತು ನನ್ನ ಸ್ನೇಹಿತರು ಇಂಥ ಅರಣ್ಯಶಾಖೆಯವರು ಮಾಡಿಸಿದ ಒಂದು ರಸ್ತೆಯಲ್ಲಿ ಹೋಗಬೇಕಾದ ಸಂದರ್ಭ ಬಂದಿತ್ತು. ಆಗ ನಾವು ಪಟ್ಟ ಕಷ್ಟ ಹೇಳತೀರದು. ಆ ರಸ್ತೆ ಇರುವ ಸ್ಥಿತಿ ನೋಡಿದರೆ ನಿಜವಾಗಿಯೂ ಶೋಚನೀಯ. ಅದು ಮರಳವಾಡಿ—ಹುಣಸಿನಹಳ್ಳಿ ರಸ್ತೆ. 22 ಮೈಲಿ 3 ಫರ್ಲಾಂಗ್ ಉದ್ದವಿದೆ. ಅದನ್ನು ಮಾಡಲಿಕ್ಕೆ ವೆಚ್ಚವಾಗಿರುವ ಮೊಬಲಗು ಮೊದಲನೆಯ ವರ್ಷ 2,409 ರೂಪಾಯಿಗಳು, ಎರಡನೇ ವರ್ಷ 418 ರೂಪಾಯಿಗಳು, ಮೂರನೆಯ ವರ್ಷ ಏನೂ ಖರ್ಚಾಗಿಲ್ಲ, ಅದರ ಮುಂದಿನ ವರ್ಷ 798 ರೂಪಾಯಿಗಳು, ಹೋದ ವರ್ಷ 2,058 ರೂಪಾಯಿಗಳು, ಇಷ್ಟು ಮೊಬಲಗಿನಲ್ಲಿ ಎಷ್ಟುತಾನೆ ಚೆನ್ನಾಗಿ ಇಡುವುದಕ್ಕೆ ಸಾಧ್ಯವೆಂಬುದನ್ನು ನೀವೆ ಯೋಚನೆಮಾಡಿ. ಅವರು ಹೇಳಬಹುದು, ನಮ್ಮ ಅರಣ್ಯ ಇಲಾಖೆಯ ಉತ್ಪನ್ನಗಳನ್ನು ಸಾಗಿಸಲಿಕ್ಕೆ ಇಷ್ಟಿದ್ದರೆ ಸಾಕು ಎಂದು.

ಶ್ರೀ ವಿ. ವೆಂಕಟಪ್ಪ.—ಬಸ್ ಕೂಡ ಅಲ್ಲಿ ಓಡಾಡುತ್ತದೆ.

ಶ್ರೀ ಎಲ್. ಸಿದ್ದಪ್ಪ.—ನನಗದು ಗೊತ್ತು. ನಾವು ಅದನ್ನು ತಿಳಿದೇ ಕಾರನ್ನು ತೆಗೆದುಕೊಂಡುಹೋಗಿ, ಶ್ರೀ ಕರಿಯಪ್ಪನವರಂಥ ಪ್ರತಿನಿಧಿಗಳಿರುವ ಊರಿನ ಹತ್ತಿರ ಇರುವ ರಸ್ತೆ ಇಷ್ಟು ಶೋಚನೀಯ ಸ್ಥಿತಿಯಲ್ಲಿದೆಯಲ್ಲಾ ಎಂದು ವ್ಯಥೆಪಟ್ಟೆವು. ನಾನು ಅಲ್ಲಿಂದ ಬಂದಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೂ ಹೇಳಿದೆ. ಹೋದಸಾರಿಯ ಬಡ್ಜೆಟ್ಟಿನ ಸಂಬಂಧದಲ್ಲಿಯೂ ನಾನು ಈ ವಿಷಯವನ್ನು ಸರ್ಕಾರದವರ ಗಮನಕೆ ತಂದೆ.

ಶ್ರೀ ಕೆ. ಎಸ್. ಸಿದ್ದಪ್ಪ (ಮಾಗಡಿ).—ಆ ರಸ್ತೆಯ ಮೇಲೆ ನೀರು ಹೋಗುತ್ತದೆ. ಆದರಿಂದ ಹೀಗಾಗಿದೆ.

ಶ್ರೀ ಎಲ್. ಸಿದ್ದಪ್ಪ.—ನೀರು ಹರಿಯುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಅಂತೂ ಶೋಚನೀಯ ಸ್ಥಿತಿಯಲ್ಲಿದೆ.

ಆದ್ದರಿಂದ ನನ್ನ ಸಲಹೆಯೇನೆಂದರೆ, ಹೀಗೆ ಬೇರೆ ಬೇರೆ ಇಲಾಖೆಯವರಿಗೆ ಅವರವರಿಗೆ ತೋರಿದಂತೆ ಹೊಸ ರಸ್ತೆಗಳನ್ನು ಮಾಡಿಸುವುದಕ್ಕೆ ಬಿಡುವುದಕ್ಕೆ ಬದಲಾಗಿ ರಸ್ತೆಗಳ ನಿರ್ಮಾಣಕ್ಕಾಗಿ ಮತ್ತು ಅವುಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕಾಗಿ ಎಷ್ಟು ಮೊಬಲಗು ಬೇಕಾಗುತ್ತದೋ ಆ ಮೊಬಲಗನ್ನು ಆಯಾ ಇಲಾಖೆಗಳವರಿಂದ ಕಂಟ್ರಿಬ್ಯೂಷನ್ ರೂಪವಾಗಿ ತೆಗೆದುಕೊಂಡು ರಸ್ತೆಯನ್ನು ಮಾಡಿಸುವ ಪೂರ್ಣ ಜವಾಬ್ದಾರಿಯನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರೇ ನಿರ್ವಹಿಸಬೇಕು. ಆ ಬಗ್ಗೆ ಏನೇನು ಕಾರ್ಯಕ್ರಮ ಕೈಕೊಳ್ಳಬೇಕೋ ಅದನ್ನು ಕೈಕೊಳ್ಳುವುದು ಸೂಕ್ತ. ಹೀಗೆ ಮಾಡದಿದ್ದರೆ ನಾವು ವರ್ಷ ವರ್ಷವೂ ಏನಾದರೊಂದು ಪ್ರಶ್ನೆ ಕೇಳುತ್ತೇವೆ, ಯಾವುದೋ ಡಿಸ್ಟ್ರಿಕ್ಟ್ ಫಂಡ್ ರಸ್ತೆ ಅಥವಾ ಅರಣ್ಯ ರಸ್ತೆ ಅಥವಾ ಗ್ರಾಮಾಂತರ ರಸ್ತೆ ವಿಷಯವನ್ನೆತ್ತಿ ಆ ರಸ್ತೆಯನ್ನೇಕೆ ಸರಿಯಾದ ಸ್ಥಿತಿಯಲ್ಲಿಟ್ಟಿಲ್ಲ, ಎಂದು

ಕೇಳುತ್ತೇವೆ. ನೀವೂ ಎಂದಿನಂತೆ 'Consistent with the grants at their disposal the road is maintained in a fairly good condition' ಎಂದು ಉತ್ತರ ಕೊಟ್ಟುಬಿಡುತ್ತೀರಿ.

ಈಗೇನೊ ಸರ್ಕಾರದವರು, ಡಿಸ್ಟ್ರಿಕ್ಟ್ ಬೋರ್ಡಿನವರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಇವರೆಲ್ಲರೂ ಸೇರಿ Re-classification of Roads ಎಂಬ ವಿಷಯದಲ್ಲಿ ನಿರತರಾಗಿದ್ದೀರೆಂದು ಕೇಳಿದ್ದೇನೆ. ಅದರ ವಿವರಗಳೇನು ಎಂಬುದು ನಮಗೆ ಗೊತ್ತಿಲ್ಲ. ಅದೇನೇ ಇರಲಿ, ಇದ್ದೇನು ಪಟ್ಟಿಮಾಡಿ ಮುದ್ರಿಸಿ ತೋರಿಸಿದ್ದೀರೋ ಆ ರೀತಿಯೇ ಮಾಡುತ್ತಾ ಹೋದರೆ ನಮ್ಮ ರಸ್ತೆಗಳು ಎಂದೂ ಉತ್ತಮವಾಗುವುದಿಲ್ಲ. ಪುನಃ ಪುನಃ ವರ್ಷಕ್ಕೊಂದು ಸಾರಿ ಸಹಸ್ರನಾಮಗಳು ನಮಗೆ ತಪ್ಪುವುದೂ ಇಲ್ಲ. ಹಿಂದೆ ಒಂದು ಸಾರಿ ಏನೋ ಒಂದು ರೀತಿಯಲ್ಲಿ ರಿಕ್ಲಾಸಿಫಿಕೇಷನ್ ಮಾಡಿತ್ತು. ಆಗ್ಗೆ ಡಿಸ್ಟ್ರಿಕ್ಟ್ ಬೋರ್ಡುಗಳು ಕೆಲವು ರಸ್ತೆಗಳನ್ನು maintain ಮಾಡುತ್ತಿದ್ದುವು. ಆಗ ಆ ರಸ್ತೆಗಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಹಣದ ಕೊರತೆಯಿತ್ತು. ಆದ್ದರಿಂದ ಅವರು ಏನು ಹಣ ಖರ್ಚು ಮಾಡುತ್ತಿದ್ದಾರೋ ಅಷ್ಟು ಹಣವನ್ನು ನೀವೇ ತೆಗೆದುಕೊಂಡು ಅದಕ್ಕಿಂತ ಮೇಲೆ ತಗಲಬಹುದಾದ್ದನ್ನು ಸರ್ಕಾರದವರೇ ಹಾಕಿ ಅವನ್ನು maintain ಮಾಡುವ ಪೂರ್ಣ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳಬೇಕು.

ಒಬ್ಬ ಸದಸ್ಯರು.—ಸರ್ಕಾರದವರು ಸಾಧ್ಯವಿದ್ದರೆ ಬೇರೆ ರಸ್ತೆಗಳನ್ನು ಮಾಡಲಿ. ಈ ರಸ್ತೆಗಳನ್ನೇಕೆ ತೆಗೆದುಕೊಳ್ಳಬೇಕು !

ಶ್ರೀ ಎಸ್. ಸಿದ್ದಪ್ಪ.—ಬಹಳ ಸಂತೋಷ. ಮೊದಲು ಈ ಫಸ್ಟ್‌ಕ್ಲಾಸ್ ರಸ್ತೆ, ಸೆಕೆಂಡ್‌ಕ್ಲಾಸ್ ರಸ್ತೆ, ಥರ್ಡ್ ಕ್ಲಾಸ್ ರಸ್ತೆ, ಫೋರ್ತ್‌ಕ್ಲಾಸ್ ರಸ್ತೆ ಎಂದು ವಿಂಗಡಿಸಿ ಅವಕ್ಕೆ ಏನೊಂದು ಹಣವನ್ನು ಕೊಡಬೇಕೆಂದು ಗೊತ್ತು ಮಾಡಿಕೊಂಡಿದ್ದೀರೋ ಅಷ್ಟು ಮೊಬಲಗನ್ನು ಪ್ರತಿಯೊಂದಕ್ಕೂ ಒದಗಿಸುವುದಾದರೆ ನನ್ನದೇನೂ ಅಭ್ಯಂತರವಿಲ್ಲ, ಆದರೆ ಹಾಗೆ ಒದಗಿಸುವುದಕ್ಕೆ ಸಾಧ್ಯವಿಲ್ಲ.

ಆದ್ದರಿಂದ ತಾವೊಂದು ರೋಡ್ ಫಂಡ್ ಎಂಬುದನ್ನು ಏರ್ಪಾಡುಮಾಡಿ ಅದಕ್ಕೆ ಬೇರೆ ಬೇರೆ ಭಾಗಗಳಿಂದ ಏನೇನು ಹಣ ಬರುತ್ತಿದೆಯೋ ಅದನ್ನೆಲ್ಲಾ ಸೇರಿಸಿ, ಕೊರತೆ ಬರಬಹುದಾದ ಹಣವನ್ನು ನೀವೇ ಹಾಕಿ ಈ ನಿಧಿಯನ್ನು Nonlapsable ಎಂದು ಮಾಡಿ. ಏಕೆಂದರೆ, ಈ ವರ್ಷ 50 ಲಕ್ಷ ರೂಪಾಯಿಗಳ ಕೆಲಸ ಮಾಡಬೇಕೆಂದಿದ್ದರೆ ಯಾವುದೋ ಕಾರಣದಿಂದ 20 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿ 30 ಲಕ್ಷ ರೂಪಾಯಿಗಳು ಉಳಿಯಬಹುದು. ಆದರೂ ಇದನ್ನು ಲ್ಯಾಪ್ಸ್ ಆಗುವುದಕ್ಕೆ ಬಿಡಕೂಡದು. ಮುಂದೆ ಸರಿಯಾದ ಸಿಬ್ಬಂದಿ ಮತ್ತು ಅವಕಾಶ ಸಿಕ್ಕಿದಾಗ, ಈ ರೀತಿ ಫಂಡ್‌ನ್ನಾಡಿಟ್ಟಿದ್ದರೆ ಅದನ್ನು ಉಪಯೋಗಿಸಬಹುದು.

ಆದ್ದರಿಂದ ಈಗ ಏನು ರೋಡ್-ರೀ-ಕ್ಲಾಸಿಫಿಕೇಷನ್ ಮಾಡಿದ್ದಾರೋ ಅದನ್ನು ದಯವಿಟ್ಟು ರದ್ದುಮಾಡಿ, ಆಮೂಲಾಗ್ರವಾಗಿ ಮೊದಲಿಂದ ಹೋಗಿ, ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳು ಯಾವುವು, ಸ್ಟೇಟ್ ಫಂಡ್ ರಸ್ತೆಗಳು ಯಾವುವು, ಇಂಟರ್ ವಿಲೇಜ್ ರಸ್ತೆಗಳು ಯಾವುವು, ಆ ಮೇಲೆ ನ್ಯಾಷನಲ್ ಹೈವೇಸ್ ಯಾವುವು ಎಂಬುದನ್ನೆಲ್ಲಾ ವಿಂಗಡಿಸಿಕೊಂಡು ಎಲ್ಲವನ್ನೂ ನೀವೇ ಒಳ್ಳೆಯ ಸ್ಥಿತಿಯಲ್ಲಿಡಬೇಕೆಂದು ಹೇಳುತ್ತೇನೆ. ನ್ಯಾಷನಲ್ ಹೈವೇಸ್ ನಮಗೇಕೆ ಎಂದು ಕೇಳಬಹುದು. ಇಟ್ಟುಕೊಳ್ಳುವುದೇನೂ ನಮ್ಮ ಸಂಸ್ಥಾನಕ್ಕೆ ಹೆಚ್ಚಲ್ಲ. ಕೊಚಿನ್ ತಿರುವಾಂಕೂರು ಸಂಸ್ಥಾನಗಳವರೇ ಇಟ್ಟುಕೊಂಡಿದ್ದಾರೆ, ಅಕ್ಕಪಕ್ಕದ ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತಗಳಲ್ಲೂ ಇವೆ. ಅದೇ ರೀತಿ ನಮ್ಮಲ್ಲಿಯೂ ಬೆಂಗಳೂರು-ಮದ್ರಾಸ್ ರೋಡು, ಬೆಂಗಳೂರು-ಊಟಿ ರಸ್ತೆ, ಬೆಂಗಳೂರು-ಹೊನ್ನಾಳಿ ರಸ್ತೆ ಇಂಥ ಮುಖ್ಯವಾದ 3-4 ರಸ್ತೆಗಳನ್ನು ನ್ಯಾಷನಲ್ ಹೈವೇಸ್ ಎಂದು ಇಟ್ಟುಕೊಳ್ಳುವುದು ಉಚಿತ.

ಕೊನೆಯದಾಗಿ, ಶ್ರೀ ರಾಜಶೇಖರ ಮೂರ್ತಿ ಮತ್ತು ಶ್ರೀ ಇಮಾಂರವರು ಹೇಳಿದ ಹಾಗೆ, ಇಂಥಿಂಥ ರಸ್ತೆಗಳನ್ನು ಮಾಡಬೇಕೆಂದು ಒಂದು ಪಟ್ಟಿ ಇಟ್ಟುಕೊಂಡು ಮಾಡಬೇಕು. ಏಕೆಂದರೆ, ಯಾವುದೋ ಒಂದು ಕೆಲಸಮಾಡಿಸುತ್ತಿರುವಾಗ ಮಧ್ಯೆ ಯಾರಾದರೂ ಬಂದು ಹೇಳಿದರೆ ಆ ಕೆಲಸವನ್ನು ಮಾಡಿಸಿಕೊಡುವುದಕ್ಕೆ ಹೋಗುವುದುಂಟು. ಒಂದು ಉದಾಹರಣೆ ಹೇಳುವುದಾದರೆ, ಚೆನ್ನಗಿರಿ ತಾಲ್ಲೂಕಿನಲ್ಲಿ ಒಂದು ಟನಲ್ ಕನ್‌ಸ್ಟ್ರಕ್ಷನ್ ಡಿವಿಜನ್ ಮಾಡಿದ್ದರು. ಆ ಟನಲ್ ಡಿವಿಜನ್ನಿನವರು ಕೆಲವು ರಸ್ತೆಗಳ ಕೆಲಸವನ್ನು ತೆಗೆದುಕೊಂಡರು. ಅನಂತರ ಈಚೆಗೆ ಹೊಳೆಹೊನ್ನೂರು ಸೇತುವೆಯನ್ನು $2\frac{1}{2}$ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿದರು. ಇದನ್ನು ಕಟ್ಟಿಸಿದ ಮೇಲೆ, ಈ ಸೇತುವೆಯ ಉಪಯೋಗ ಆ ಪ್ರದೇಶದ ಜನರಿಗೆ ಆಗಲಿ ಎಂಬ ದೃಷ್ಟಿಯಿಂದ ಹೊಳೆಹೊನ್ನೂರು-ಚನ್ನಗಿರಿ ರಸ್ತೆಯನ್ನು ಮಾಡಬೇಕಾಯಿತು. ಹೀಗೆಲ್ಲಾ ಮಾಡುತ್ತಾ ಹೋದರೆ ಕೆಲಸಗಳು ಬಹಳ ನಿಧಾನವಾಗುತ್ತದೆ. 8-10 ಮೈಲಿ ಮಾಡುವುದಕ್ಕೆ ನಾಲ್ಕಾರು ವರ್ಷಗಳಾಗುತ್ತವೆ. ಆ ಮೇಲೆ, ರಸ್ತೆ ಮಾಡಿಸಿದ ಮೇಲೆ ಅವುಗಳ ದುರಸ್ತಿಗೆ ಬೇರೆ ಏರ್ಪಡಿಸಬೇಕು. ಆದ್ದರಿಂದ ಯಾವುದನ್ನು ಮಾಡುವುದರಲ್ಲೂ ಪಟ್ಟಿಯ ಪ್ರಕಾರ ಮಾಡಿಕೊಂಡು ಹೋಗುವುದು ಅವಶ್ಯಕ.

ಇನ್ನೊಂದು ವಿಚಾರವೇನೆಂದರೆ, ಈಗ ತಾವು ರೋಡ್-ರೀ-ಕ್ಲಾಸಿಫಿಕೇಷನ್ ಜವಾಬ್ದಾರಿ ತೆಗೆದುಕೊಳ್ಳುವವರಾಗಿದ್ದೀರಿ. ಇದೇ ಸಂಬಂಧದಲ್ಲಿ ಹೊಸ ಹೊಸ ರಸ್ತೆಗಳನ್ನು ಮಾಡಿಸುವುದಕ್ಕೂ ಮತ್ತು ಅವುಗಳನ್ನು ದುರಸ್ತಿನಲ್ಲಿಡುವುದಕ್ಕೂ ನಮಗೆ resources ಎಷ್ಟಿವೆಯೆಂಬುದನ್ನು ಗಮನದಲ್ಲಿಟ್ಟುಕೊಂಡು ರೋಡ್-ರೀ-ಕ್ಲಾಸಿಫಿಕೇಷನ್ ಮಾಡಬೇಕೆಂದು ಹೇಳುತ್ತೇನೆ.

ಮುಖ್ಯವಾಗಿ ಇಷ್ಟು ವಿಷಯಗಳನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಈ ಇಲಾಖೆಯನ್ನು ರಿ-ಆರ್ಗನೈಸ್ ಮಾಡುವುದು ಒಂದು; ಈ ಇಲಾಖೆಗೆ ಬೇಕಾದ ಹೊಸ ಹೊಸ ಮೆಷಿನರಿಗಳನ್ನು ಬೇಗ ಬೇಗ ತಂದೊದಗಿಸಿ ಕೆಲಸಗಳು ಜಾಗ್ರತೆ ನಡೆಯುವುದಕ್ಕೆ ಏರ್ಪಾಡು ಮಾಡುವುದು ಎರಡನೆಯದು. ಮೂರನೆಯದು, Road Policy ವಿಚಾರದಲ್ಲಿ ಶ್ರೀ ರಾಜಶೇಖರ ಮೂರ್ತಿಯವರು ಮತ್ತು ಶ್ರೀ ಇಮಾಂರವರೂ ಹೇಳಿದಂತೆ, Re-classification ತತ್ವಗಳನ್ನು ಚೆನ್ನಾಗಿ ಓದಿಕೊಂಡು, ಯಾರು ಯಾರು ಎಷ್ಟೆಷ್ಟು ಮೊಬಲಗುಗಳನ್ನು ಕೊಡಬೇಕು, ಆಯಾ ಕೆಲಸಗಳನ್ನು ಮಾಡುವವರು ಯಾರು ಎಂಬುದನ್ನೆಲ್ಲಾ ಗೊತ್ತುಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಇದನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರೇ ತೆಗೆದುಕೊಂಡು ಆಗಾಗ್ಗೆ ದುರಸ್ತುಪಡಿಸಬೇಕು. ಇದಕ್ಕಾಗಿ ಆಯಾ ಸಂಸ್ಥೆಗಳವರು ಕೊಡುತ್ತಿದ್ದ ದುಡ್ಡನ್ನು ಕಡ್ಡಾಯವಾಗಿ ತಪ್ಪದೇ ಕೊಡುವಂತೆ ಒತ್ತಾಯಮಾಡಿ, ರಸ್ತೆಗಳ ಸ್ಥಿತಿ ಇಷ್ಟು ಶೋಚನೀಯಾವ್ಯವಸ್ಥೆಯಲ್ಲಿರುವುದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

(ಶ್ರೀ ಎರ್. ಸಿದಪ್ಪ)

2 P.M.

ಒಂದು ವಿಷಯದಲ್ಲಿ ನ ನು ಸರ್ಕಾರದವರನ್ನು ಅಭಿನಂದಿಸಬೇಕಾಗಿದೆ. ಮಲೆನಾಡಿನಲ್ಲಿರತಕ್ಕ ಒಂದು ರಸ್ತೆಯ ಪರಿಸ್ಥಿತಿ ಬಹಳ ಶೋಚನೀಯವಾಗಿತ್ತು. ಹಿಂದೆ ಸಿಮೆಂಟ್ ರಸ್ತೆಯೇನೋ ಮಂಜೂರಾಗಿತ್ತು. ಜಲ್ಲಿಕೂಡ ಜಮಾವಣೆಯಾಗಿತ್ತು. ಕೆಲಸ ನಡೆಯದೆ ಅಲ್ಲಿದ್ದ ಜಲ್ಲಿಯನ್ನು ಅಕ್ಕಪಕ್ಕದ ಹಳ್ಳಿಯ ಜನ ಎತ್ತಿಕೊಂಡು ಹೋಗುವ ಸ್ಥಿತಿಯಿತ್ತು. ಈಗ ಕೆಲಸ ನಡೆದು ಚೆನ್ನಾಗಿರುವುದಕ್ಕಾಗಿ ನಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸುತ್ತೇವೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ ಈಗಾಗಲೇ ಈ ಸಂಬಂಧವಾಗಿ ಸರ್ವಸಾಮಾನ್ಯವಾಗಿ ಏನು ಹೇಳಬೇಕೋ ಅದನ್ನು ಮಿತ್ರರು ಹೇಳಿದ್ದಾರೆ. ಈಗ ನನ್ನ ತಾಲ್ಲೂಕಿನ ವಿಚಾರವನ್ನು ಮಾತ್ರ ನಾನು ಹೇಳತ್ತೇನೆ. ಶ್ರೀ ರಾಜಶೇಖರಮೂರ್ತಿಯವರು ಕೆಲವು ಅಂಕಿ ಅಂಶಗಳನ್ನು ಕೊಟ್ಟರು. ಸಾಮಾನ್ಯವಾಗಿ ಯಾವ ಯಾವ ದೇಶಗಳಲ್ಲಿ ಪ್ರಜಾಸಂಖ್ಯೆಗನುಗುಣವಾಗಿ ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ ಎಷ್ಟೆಷ್ಟು ಮೈಲಿ ರಸ್ತೆಗಳಿರುತ್ತವೆ ಎಂಬುದನ್ನು ಅವರು ಹೇಳಿದ್ದಾರೆ. ಮೈಸೂರು ದೇಶದ ಪ್ರಜಾಸಂಖ್ಯೆ ಮತ್ತು ರಸ್ತೆಗಳನ್ನು ತೆಗೆದುಕೊಂಡರೆ ಇಲ್ಲಿ ಒಂದು ಲಕ್ಷ ಜನರಿಗೆ 116 ಮೈಲಿ ರಸ್ತೆಯಿದೆ ಎಂದು ಹೇಳಿದ್ದಾರೆ. ಈ ದೃಷ್ಟಿಯಿಂದ ನೋಡುವುದಾದರೆ, ನಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ರಸ್ತೆಯಿದೆಯೆಂದರೆ, ಫಸ್ಟ್‌ಕ್ಲಾಸ್ ರಸ್ತೆಯಿಲ್ಲ, ಸೆಕೆಂಡ್‌ಕ್ಲಾಸ್ ರಸ್ತೆಯೂ ಇಲ್ಲ, ಥರ್ಡ್‌ಕ್ಲಾಸ್ ರಸ್ತೆ 24 ಮೈಲಿ ಇದೆ. 'ಫೇರ್ ವೆದರ್ ರೋಡ್'' 21 ಮೈಲಿ ಇದೆ. ಅಲ್ಲಿನ ಪ್ರಜಾ ಸಂಖ್ಯೆ 1 ಲಕ್ಷದ 30 ಸಾವಿರವಿದೆ.

ಶ್ರೀ ಕಡಿದಾಳ್ ಮಂಜಪ್ಪ.—ತಾವೂ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿದ್ದಿರಿ!

ಶ್ರೀ ವಿ. ವೆಂಕಟಪ್ಪ.—ನಿಜ, ಇದ್ದೇ ಅಗರೇ ಅಷ್ಟೋ ಇಷ್ಟೋ ಮಾಡಿದ್ದು. ಈಗ ಅದೂ ಹೋಯಿತು!

ಸ್ವಾಮಿ, ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಯಾರಿದ್ದರೋ ಅವರೆಲ್ಲರೂ ಈ ಸ್ಥಿತಿಯನ್ನು ನೋಡಿದ್ದಾರೆ. ಈಗಿನ ಮಂತ್ರಿಗಳೂ ನೋಡಿದ್ದಾರೆ. ಇಂಥಿಂಥಾ ಗ್ರಾಮಗಳಿಗೆ ರಸ್ತೆ ಇದೆಯೆ ಎಂದು ಒಂದು ಪ್ರಶ್ನೆ ಕೇಳಿದರೆ, ಸರ್ಕಾರದವರು ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿಯೊಬ್ಬ ಮಂತ್ರಿಗಳು ಅಲ್ಲಿಗೆ ಬಂದಾಗಲೂ ಅರ್ಜಿಗಳನ್ನು ಮಾತ್ರವಲ್ಲ, ಬಹಳ ಕಾಲ ಕಾದು, ಮುದ್ರಣಮಾಡಿಸಿ ಬಿನ್ನವತ್ತಳೆಗಳನ್ನು ಕೊಟ್ಟು ಇಂಥಿಂಥ ಕಡೆ ಇಂಥಿಂಥ ರಸ್ತೆಗಳು ಬೇಕೆಂದು ಕೇಳಿದ್ದೇವೆ. ಹೀಗಿದ್ದರೂ ಆ ಮೇಲೆ ಒಂದು ಪ್ರಶ್ನೆ ಕೇಳಿದರೆ, ಗೊತ್ತಿಲ್ಲವೆಂದು ಹೇಳುತ್ತಾರೆ! ಇದು ಬಹಳ ವಿಷಾದದ ಸಂಗತಿ! ಈ ಸಲ ಚೀಫ್ ಇಂಜನಿಯರು ನಮ್ಮ ತಾಲ್ಲೂಕಿಗೆ ಬಂದಿದ್ದಾಗ ಈ ವಿಷಯವನ್ನು ಹೇಳಿದಾಗ, ಇಂಥ 'ಪಾಕೆಟ್ಸ್' ಕೆಲವು ಕಡೆ ಉಳಿದು ಹೋಗುತ್ತವೆ, ಅವುಗಳಲ್ಲಿ ಇದೂ ಒಂದು ಎಂದು ಹೇಳಿದರು. ಮೈಸೂರು–ಬೆಂಗಳೂರಿಗೆ ಮಧ್ಯೆ ಇದ್ದು ಕೂಡ ಇಂಥ ಸ್ಥಳದಲ್ಲಿ ಹೀಗಿರುವುದು ವಿಷಾದದ ಸಂಗತಿ ಯೆಂದು ಹೇಳಿದರು. ಇದರ ಅನುಭವ ನಮ್ಮ ಮಂತ್ರಿಗಳಿಗೂ ಆಗಿದೆ. ನಮ್ಮ ತಾಲ್ಲೂಕಿನ ಒಳಗಡೆ ಪ್ರದೇಶಕ್ಕೆ ಹೋದರೆ ನಡೆಯಬೇಕಾಗುತ್ತದೆ, ಕಷ್ಟ ಎಂದು ವಾಪಸು ಬಂದುಬಿಡುತ್ತಾರೆ. ತಾವು ಮಂತ್ರಿಗಳಾಗಿದ್ದಾಗ ಬಂದಿರಿ, ಸಹಾನುಭೂತಿಯಿಂದ ಒಂದು ಸೇತುವೆಯನ್ನಾದರೂ ಮಾಡಿಸಿಕೊಟ್ಟಿರಿ.

Mr. SPEAKER.—At a cost of Rs. 32,000, is it not?

ಶ್ರೀ ವಿ. ವೆಂಕಟಪ್ಪ.—ಹೌದು, ಸೇತುವೆ ಆಯಿತು ಮಂತ್ರಿಗಳೂ ಬಂದಿದ್ದರು. ಅದರಿಂದ ಮುಂದೆ ಹೋಗುವುದು ಹೇಗೆ ಎನ್ನುವುದು ಗೊತ್ತಿಲ್ಲ. ಶ್ರೀ ಸಿದ್ದಪ್ಪನವರು ಮಂತ್ರಿಗಳಾಗಿದ್ದಾಗ ಒಂದು ರಸ್ತೆಯನ್ನು ನೋಡಿದ್ದರು. ಅದರ ಅಂದಾಜು ಎರಡು ಸಾವಿರ ಚಿಲ್ಲರೆ, ಅದು ಇನ್ನೂ ಆಗುತ್ತಿದೆ! ಅದನ್ನು ಈಗ ಮಾಡಬೇಕಾದರೆ ಆರು ಸಾವಿರ ಖರ್ಚಾಗುತ್ತದೆ. ಇದುವರೆಗೂ ಆ ಕೆಲಸ ಆಗಿಲ್ಲ ಅದಕ್ಕೆ 13 ಅಥವಾ 14 ಗುಂಟೆ ಜಮೀನು ಅಕ್ವೈರು ಆಗುತ್ತು. ಸಿದ್ದಪ್ಪನವರ ಕಾಲದಿಂದ ಇದುವರೆಗೂ ಆ ಕೆಲಸ ಹಾಗೆಯೆ ನಿಂತಿದೆ. ಮಂತ್ರಿಗಳನ್ನು ಒಂದುಕಡೆ ಕರೆದುಕೊಂಡು ಹೋಗಿದ್ದೆ. ಅಲ್ಲಿಂದ ಇನ್ನು ಮುಂದೆ ಹೋಗಿದ್ದಿದ್ದರೆ ಚೆನ್ನಾಗಿತ್ತು. ನಡೆಸಿಕೊಂಡು ಹೋಗಿದ್ದೆ. ಅಷ್ಟರಲ್ಲಿ ಸಧ್ಯ ಸಾಕು ಎಂದು ಹೇಳಿದರು. ಆ ಸ್ಥಿತಿಯನ್ನು ಹೇಳುವುದೂ ಕಷ್ಟ. ಆ ತಾಲ್ಲೂಕು ಬಹಳ ಚಿಕ್ಕ ಪ್ರದೇಶ. ವಿಸ್ತೀರ್ಣ 210 ಚದರಮೈಲಿ ಇದೆ. ಯಾವ ಲೆಕ್ಕದ ದೃಷ್ಟಿಯಿಂದ ನೋಡಿದರೂ ರಸ್ತೆಯ ವಿಷಯ ಒಂದರಲ್ಲಿಲ್ಲ. ಬಾಕಿ ವಿಷಯಗಳಲ್ಲಿಯೂ ಹೀಗೆಯೇ ಇದೆ. ಉದಾಹರಣೆಗೆ ಒಂದು ಸ್ಕೂಲು ಕಟ್ಟಡ 1889ರಲ್ಲಿ ಕಟ್ಟಿದ ಕಟ್ಟಡ. ಆಗ ಐದಾರು ಹುಡುಗರಿದ್ದರೋ ಏನೋ, ಈಹೊತ್ತು 600 ಜನರಿದ್ದಾರೆ ಇನ್ನೂ ಅದನ್ನು ಸರಿಮಾಡಿಲ್ಲ. ಇದಕ್ಕೆ ಕಾರಣವೇನು ಏಕೆ ಹೀಗಾಯಿತು ಎಂಬುದನ್ನು ಪರಿಶೀಲನೆಮಾಡಿ ಹೇಳುವುದಕ್ಕೆ ಈಗ ನಾನು ಹೋಗುವುದಿಲ್ಲ. ಇತ್ತೀಚಿನ ಮಂತ್ರಿಗಳಿಗೂ ಕೂಡ ಏಕೆ ಆ ಕಡೆ ಗಮನಬೀಳಲಿಲ್ಲನೋ ಗೊತ್ತಿಲ್ಲ. ಆ ಪ್ರದೇಶದ ಹೀನಸ್ಥಿತಿಯನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ಒಂದು ಖೋತಾ ನಿರ್ಣಯವನ್ನು ಕಳುಹಿಸಿದ್ದೆ. ಈಗ ತಾವು ಡಿಮ್ಯಾಂಡಿನ ಮೇಲೆ ಮಾತನಾಡಬಹುದೆಂದು ಹೇಳಿದ್ದರಿಂದ, ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಬಹಳ ಶೋಚನೀಯ ಸ್ಥಿತಿಯಿದೆ. ಇರತಕ್ಕ ರಸ್ತೆಗಳು ಕೂಡ ಯಾವ ಸ್ಥಿತಿಯಲ್ಲಿವೆಯೆಂಬುದನ್ನು ಈಗಾಗಲೇ ಹೇಳಿದ್ದಾರೆ. ಅದಷ್ಟು ಜಾಗ್ರತೆ ಉತ್ತಮಸ್ಥಿತಿಗೆ ತರಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.ನರಸೀಪುರ).—ಸ್ವಾಮಿ, ಬಹಳ ಪ್ರಾಮುಖ್ಯವಾದ ವಿಚಾರದಲ್ಲಿ ಈಗಾಗಲೇ ಹಿಂದೆ ಮಂತ್ರಿಗಳಾಗಿದ್ದವರೂ ಅನುಭವಶಾಲಿಗಳೂ ಅನೇಕ ಅಂಶಗಳನ್ನು ತಿಳಿಸಿದ್ದಾರೆ. ಕಾಲ ಸಾಕಷ್ಟು ಇಲ್ಲದ್ದರಿಂದ, ನಾನು ಅನೇಕ ವಿಷಯಗಳನ್ನು ಮಾತನಾಡಬೇಕೆಂದಿದ್ದರೂ, ಪುನರುತ್ತಿಯಾಗಬಹುದೆಂದು ಅವುಗಳನ್ನೆಲ್ಲಾ ಹೇಳಲು ಇಷ್ಟಪಡುವುದಿಲ್ಲ. ಒಂದೆರಡು ವಿಷಯಗಳನ್ನು ಮಾತ್ರ, ಹೇಳುತ್ತೇನೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಹೊಸ ಕೆಲಸಗಳಿಗೆ 13,50,000 ರೂಪಾಯಿ ಒದಗಿಸಿದ್ದಾರೆ. ಇದರಲ್ಲಿ 12 ಲಕ್ಷಗಳನ್ನು ಹೊಸ ರಸ್ತೆಗಳ ಕೆಲಸಕ್ಕೆಂದು ಹೇಳಲಾಗಿದೆ. ಅದೂ ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಮಾತ್ರ ನಡೆಯುವುದು ಎಂದಿದೆ. ಕಾರಣ 16,12,000 ರೂಪಾಯಿಗಳನ್ನು ಷುಗರ್‌ಕೇನ್ ಸೆಸ್ ನಿಂದ ತೆಗೆದುಕೊಂಡಿದ್ದಾರೆ. ಸಂಸ್ಥಾನಾದ್ಯಂತ ವಿಶ್ವೇಶ್ವರಯ್ಯ ನಾಲಾ ಪ್ರದೇಶವಲ್ಲದೆ, ಇನ್ನೆಲ್ಲೂ ಒಂದು ಫರ್ಲಾಂಗ್ ರಸ್ತೆಯನ್ನು ಕೂಡ ಮಾಡುವುದಿಲ್ಲ

ಎಂದು ಹೇಳಿದ್ದಾರೆ. ಇದು ತುಂಬಾ ಅತೃಪ್ತಿಕರವಾದ ಸಂಗತಿ.

ಇನ್ನು ರಿಪೇರಿ ವಿಷಯ. ಬಡ್ಜೆಟ್ಟಿನ ಪ್ರಕಾರ 54·7 ಲಕ್ಷ ರೂಪಾಯಿಗಳ ಪೈಕಿ 41·7 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಈ ಹಣವನ್ನು general maintenanceಗೆ, ಸಂಸ್ಥಾನದಲ್ಲಿರುವ 10,854 ಮೈಲಿ ರಸ್ತೆಗಳಿಗೆ ಒದಗಿಸಿದ್ದಾರೆ. ಇದರಲ್ಲಿ ಕ್ಲಾಸ್ II ರಸ್ತೆಯ 1,868 ಮೈಲುಗಳಿಗೆ 9,25,000 ರೂಪಾಯಿಗಳನ್ನು ಮಾತ್ರ ಕೊಟ್ಟರೆ ಮೈಲಿಗೆ 495 ರೂಪಾಯಿಗಳನ್ನು ಒಂದು ವರ್ಷಕ್ಕೆ ಕೊಟ್ಟಹಾಗಾಯಿತು. ಇಷ್ಟು ಹಣದಲ್ಲಿ ಸಾರಾಬಾದು ಹೇಗೆ ಮಾಡುವುದು? ತಿಂಗಳಿಗೊಂದು ಸಾರಿ ರಸ್ತೆಗಳಿಗೆ ಮಣ್ಣು ಹಾಕಿ ರಿಪೇರಿ ಮಾಡಿ, ಕಲ್ಲು ಹಾಕುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಟಿ. ಮರಿಯಪ್ಪ.—'ಬ್ಲೈಂಡೇಜ್' ಎಂದುಮಾಡುತ್ತಾರಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ನಮಗೆ ಬ್ಲೈಂಡೇಜ್ ಆಗುತ್ತದೆ ಅಷ್ಟೆ. ಖರ್ಚಾಗುವ ಹಣ ಸಾರ್ಥಕವಾಗುವುದಿಲ್ಲ (ನಗು!)

ಕಂದಾಯ ವಗೈರೆಯಿಂದ ಬರುವ ವರಮಾನದಿಂದ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಹಣ ಕೊಡಬೇಕೇ ಎಂದರೆ, ಖಂಡಿತವಾಗಿಯೂ ಇಲ್ಲ. ರಸ್ತೆಗಳಿಂದ ಬರತಕ್ಕ ವರಮಾನದಿಂದಲೇ ಇನ್ನೂ ಉಳಿಯುತ್ತದೆ. ಸ್ಥಳೀಯ ಸಂಸ್ಥೆಗಳಿಂದ 7·85 ಲಕ್ಷ ರೂಪಾಯಿಗಳಷ್ಟು ಕಾಂಟ್ರಿಬ್ಯೂಷನ್ ಬರುತ್ತದೆ.

ಸೆಂಟ್ರಲ್ ರೋಡ್ ಫಂಡಿನಿಂದ 24·24ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿ ವರ್ಷವೂ ಇಷ್ಟೇ ಹಣ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸೆಂಟ್ರಲ್ ರೋಡ್ ಫಂಡಿನಿಂದ ಈ ವರ್ಷ ಬಂದಿದೆ. ಮುಂದೆ ಬರದೇಯಿರಬಹುದು. ಪೆಟ್ರೋಲ್ ಟ್ಯಾಕ್ಸಿನಿಂದ 16 ಲಕ್ಷ ರೂಪಾಯಿ, ಮೋಟಾರ್ ಸ್ಪಿರಿಟ್ ಟ್ಯಾಕ್ಸಿನಿಂದ 2ಲಕ್ಷ, ಮೋಟಾರು ವೆಹಿಕಲ್ಸ್ ಆಕ್ಟ್ ಪ್ರಕಾರ ಬರುವುದು 56,90,000 ರೂಪಾಯಿಗಳು, ಡ್ರೈವಿಂಗ್ ಲೈಸೆನ್ಸಿನಿಂದ 1,73,000 ಬರುತ್ತವೆ. ಒಟ್ಟು ಈ ವರ್ಷ ಬರುವುದು 1,08,80,900 ರೂಪಾಯಿಗಳು, ಷುಗರ್‌ಕೇನ್ ಸೆಸ್ಸಿನಿಂದ 16,11,000 ರೂಪಾಯಿಗಳನ್ನುತೆಗೆದುಕೊಳ್ಳುತ್ತಾರೆ. ಹೀಗೆ ರಸ್ತೆಗಳಿಂದ ಒಟ್ಟು 1,24,91,900 ರೂಪಾಯಿಗಳ ವರಮಾನವಿದೆ.

ಇನ್ನು ಇದಕ್ಕೆ ಕೊಟ್ಟಿರುವುದೆಷ್ಟೆಂದರೆ,

ಡೆವಲಪ್‌ಮೆಂಟಿಗೆ 54,70,000 ರೂ. ಗಳು
ಮೆಯಿಂಟೆನೆನ್ಸಿಗೆ 41,70,900 ,,
ಹೊಸಕೆಲಸಗಳಿಗೆ 13,60,000 ,,

ಏಕೆ ಈ ಅಂಕಿಅಂಶಗಳನ್ನೆಲ್ಲಾ ಹೇಳುತ್ತಿದ್ದೇನೆಂದರೆ, ಸರ್ಕಾರದವರೇನೂ ಜನರಲ್ ರೆವಿನ್ಯೂಸ್‌ನಿಂದ ರಸ್ತೆಗಳಿಗಾಗಿ ಕೊಡುತ್ತಿಲ್ಲ; ರಸ್ತೆಗಳಿಂದ ಏನು ಉತ್ಪತ್ತಿ ಬರುತ್ತದೆಯೋ ಅದನ್ನು ಹಾಕಿ ಸರಿಯಾದ ಸ್ಥಿತಿಯಲ್ಲಿಡಿ ಎಂದು ಒತ್ತಾಯಮಾಡುವುದಕ್ಕಾಗಿ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ರೋಡ್‌ಫಂಡ್ ವಿಚಾರ ಹೇಳಿದರು. ಇದು 1936-37ನೆಯ ಇಸವಿಯಿಂದ ಆರಂಭವಾಯಿತು, 1952-53ನೆಯ ಇಸವಿಯಲ್ಲಿ ಸತ್ತುಹೋಯಿತು. ಬಡ್ಜೆಟ್ ಮೆಮೊರ್‍ಯಾಂಡಂನಲ್ಲಿ this has been discontinued ಎಂದು ಹೇಳಿದ್ದಾರೆ. ಅಕೌಂಟೆಂಟ್ ಜನರಲ್‌ರವರು ಬೇಡವೆಂದು ಹೇಳಿ ಶಿಫಾರಸು ಮಾಗಿ ಅದರ ಮೇಲೆ ಹೇಗೆ ಮಾಡಿದರೋ ಏನೋ ಗೊತ್ತಾಗಲಿಲ್ಲ. ರೋಡ್ ಫಂಡ್ ಎಂದು ಮಾಡಿದ್ದುದರಿಂದ ಬಹಳ ಸೌಕರ್ಯವಿತ್ತು. ಖರ್ಚುಮಾಡುವಾಗ ಎಷ್ಟು ಉಳಿದಿದೆ ಎಂಬುದು ಡಿ. ಸಿ. ಬಿ. ಸ್ಟೇಟ್‌ಮೆಂಟ್ ಹಾಕಿದರೆ ಅಂದಾಜು ಸಾಕೆ ಇಲ್ಲವೆ ಎಂಬುದು ಗೊತ್ತಾಗುತ್ತದೆ.

ಇನ್ನು ಹೆಚ್ಚು ತಕರಾರಿರುವುದು, ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಕೆಲಸ ನಿಧಾನ ಮತ್ತು ಲಂಚರುಷುವತ್ತಿದೆ ಎಂಬುದು. ಇದಕ್ಕೆ ಕಾರಣವೇನೆಂಬುದನ್ನು ಪರಿಶೀಲಿಸಬೇಕು. ಅಂದಾಜು ತಯಾರಾದ ರಾಗಾಯ್ತು ಕೆಲಸವಾಗುವವರೆಗೆ ನಾಲ್ಕಾರು ವರ್ಷಗಳಾಗುತ್ತವೆ. ಒಂದು ಕೆಲಸವಾಗಬೇಕಾದರೆ, ಮೊದಲು ಅಂದಾಜು ತಯಾರಾಗಿ ಅವಕ್ಕೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆಗಬೇಕು, ಆಮೇಲೆ ಟೆಕ್ನಿಕಲ್ ಸ್ಯಾಂಕ್ಷನ್ ಆಗಬೇಕು. ಮೊದಲು ಯಾವ ಮಾರ್ಗದಿಂದ ಬಂತೋ ಅದೇ ಮಾರ್ಗದಿಂದ ವಾಪಸು ಹೋಗುವುದು ಈಗಿನ ಕ್ರಮ. ಪುನಃ ಟೆಕ್ನಿಕಲ್ ಸ್ಯಾಂಕ್ಷನ್‌ಗೆ ಬರಬೇಕಾದರೆ ಎಗ್ಜಿಕ್ಯೂಟಿವ್ ಇಂಜಿನಿಯರಿಂದ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಹೋಗಿ, ಅಲ್ಲಿಂದ ಚೀಫ್ ಇಂಜಿನಿಯರಿಗೆ ಹೋಗಿ, ಅಲ್ಲಿಂದ ಸರ್ಕಾರಕ್ಕೆ ಬರಬೇಕು, ಪುನಃ ಹೀಗೆಯೇ ವಾಪಸು ಬರಬೇಕು. ಇದೆಲ್ಲಾ ಆಗಬೇಕಾದರೆ ಮೂರು ವರ್ಷಗಳಾಗುತ್ತವೆ. ಚೀಫ್ ಇಂಜಿನಿಯರಿಂದ ಮಂಜೂರಾತಿಯಾಗಿ ಬಂದಾಗ ಷೆಡ್ಯೂಲ್ ಆಫ್ ರೇಟ್ಸ್ ವ್ಯತ್ಯಾಸವಾಗಿರುತ್ತದೆ. ಆಗ ಪುನಃ ಅಂದಾಜು ರಿವೈಸ್ ಆಗಬೇಕಾಗುತ್ತದೆ. ಹೀಗಾಗಿ ಕೆಲಸಗಳು ಜಾಗ್ರತೆ ನಡೆಯುವುದಿಲ್ಲ. ಆದುದರಿಂದ ಆಡಳಿತದಲ್ಲಿ ಯಾವ ರೀತಿ ಮಾಡಿದರೆ ಅಂದಾಜು ಮಂಜೂರಾಗಿ ತಕ್ಷಣ ಕೆಲಸ ಪ್ರಾರಂಭವಾಗಿ ಒಂದೆರಡು ವರ್ಷಗಳಲ್ಲಿ ಪೂರೈಸುತ್ತದೆಯೆಂಬುದನ್ನು ಯೋಚಿಸಿ ಜಾರಿಗೆತರಬೇಕು. ಹೀಗೆ ಮಾಡಿದರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ, ಜನರಿಗೂ ನಂಬಿಕೆ ಬರುತ್ತದೆ.

ಲಂಚ ರುಷುವತ್ತುಗಳಿಗೆ ಕಲೆಕ್ಷನ್ ಮತ್ತು ಕನ್ಸಾಲಿಡೇಷನ್ನಿಗೆ ಪ್ರತ್ಯೇಕ ಸೀಸನ್ ಇರುವುದೇ ಕಾರಣವೆಂದು ಹೇಳಿದರು. ನಿಜ, ಹೀಗೆ ಬೇರೆ ಬೇರೆ ಸೀಸನ್‌ಗಳಲ್ಲಿ ಆಗಲೇಬೇಕು. ಏಕೆಂದರೆ. ಕನ್ಸಾಲಿಡೇಷನ್ನಿಗೆ ಮಳೆಗಾಲ ಬೇಕು, ಕಲೆಕ್ಷನ್ ಮಿಕ್ಕ ಕಾಲದಲ್ಲಿ ಮಾಡುತ್ತಾರೆ. ಇನ್ನು ಹೆಚ್ಚು ವಿವರವಾಗಿ ಹೇಳಲು ಕಾಲವಿಲ್ಲ. ನನ್ನ ಖೋತಾ ನಿರ್ಣಯದ ವಿಷಯವೊಂದನ್ನು ಹೇಳಬೇಕಾಗಿದೆ. ಇದು ಬಹು ಮುಖ್ಯ ವಿಷಯ.

ಮೈಸೂರಿನಿಂದ ಟಿ. ನರಸೀಪುರಕ್ಕೆ ಕ್ಲಾಸ್ II ರಸ್ತೆ 32 ಮೈಲಿ ಇದೆ. ಹತ್ತು ವರ್ಷಗಳ ಹಿಂದೆ ಈ ರಸ್ತೆಯಲ್ಲಿ ಐದು ಬಸ್ಸುಗಳು ಮಾತ್ರ ಓಡಾಡುತ್ತಿದ್ದವು. ಈ ಹೊತ್ತು ಎಷ್ಟು ಬಸ್ಸುಗಳು ಓಡಾಡುತ್ತಿವೆಯೆಂದರೆ, ಸೂರ್ಯೋದಯದಿಂದ ಸೂರ್ಯಾಸ್ತಮಯದವರೆಗೂ ಪ್ರತಿ ಕಾಲು ಗಂಟೆಗೂ ಒಂದೊಂದು ಬಸ್ಸು ಓಡುತ್ತದೆ. ಪ್ರತಿವರ್ಷವೂ ಪ್ರತಿ ಬಸ್ಸಿನಿಂದಲೂ ಪ್ರತಿಯೊಂದು ಮೈಲಿಗೂ ರೂ.58-11-10 ವರಮಾನ ಈ ರಸ್ತೆಯಿಂದ ಬರುತ್ತದೆ. This is per bus, per mile, per year. ಆ ರಸ್ತೆಯಿಂದ ಸರ್ಕಾರಕ್ಕೆ ವರಮಾನ ಸುಮಾರು 64,625 ರೂಪಾಯಿ ಬರುತ್ತಿದೆ. ಇಷ್ಟು ವರಮಾನ ಬರತಕ್ಕ ರಸ್ತೆಗೆ ರಿಪೇರಿಗಾಗಿ ಕೊಡುತ್ತಿರುವುದು ಕೇವಲ 11,000 ರೂಪಾಯಿಗಳು ಮಾತ್ರ.

ಈಗ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದಿರುವ ಒಂದು ಮುಖ್ಯ ವಿಚಾರವೇನೆಂದರೆ ನಮ್ಮ ಟಿ. ನರಸೀಪುರದಿಂದ ಮೈಸೂರಿಗೆ ಹೋಗುವ ರಸ್ತೆ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್)

ಯಿಂದ ಸರ್ಕಾರಕ್ಕೆ ಬರತಕ್ಕ ಒಟ್ಟು ವರಮಾನ 64 ಸಾವಿರ. ಈ ಬಗ್ಗೆ ತಾವು ಒಂದು ವರ್ಷಕ್ಕೆ ಖರ್ಚು ಮಾಡುತ್ತಿರುವುದು 11 ಸಾವಿರ ರೂಪಾಯಿ. ಇದು ಬಹಳ ಕಡಿಮೆಯಾಯಿತು. ಆದಕಾರಣ ತಾವು ಈ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ಮಾಡಿಸಬೇಕೆಂದು ತಿಳಿಸುತ್ತೇನೆ. ಈ 22 ಮೈಲಿ ಉದ್ದವಿರತಕ್ಕ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ಮಾಡಿಸಲು ತಮಗೆ ಸುಮಾರು 11 ಲಕ್ಷ ರೂಪಾಯಿ ಖರ್ಚಾಗಬಹುದು. ಈ ಬಗ್ಗೆ ತಮಗೆ ಕಡಿಮೆ ಬೀಳಬಹುದಾದ ಮೊಬಲಗನ್ನು ತಾವು ಸ್ಪೆಷಲ್ ಛಾರ್ಜಸ್ ಎಂಬ ಐಟಂನಲ್ಲಿ ತೋರಿಸಿರತಕ್ಕ 18 ಲಕ್ಷ ರೂಪಾಯಿಗಳಲ್ಲಿ ತೆಗೆದು ಇದಕ್ಕೆ ಉಪಯೋಗಿಸಿಕೊಳ್ಳಬಹುದು. ಹೀಗೆ ತಾವು ಸಿಮೆಂಟ್ ಕಾಂಕ್ರೀಟ್ ಮಾಡಿಸಿದ ನಂತರ ತಮಗೆ ಮೈಲಿಯೊಂದಕ್ಕೆ ವರ್ಷಕ್ಕೆ 500 ರೂಪಾಯಿ ಮೈಂಟೆನೆನ್ಸ್ ಖರ್ಚು ಬಂದರೂ ತಮಗೆ ಹೆಚ್ಚಿನ ಟ್ಯಾಕ್ಸ್ ಬಂದೇ ಬರುತ್ತದೆ; ಮತ್ತು ಈ ಹಣಕ್ಕೆ ಬಡ್ಡಿ ಮತ್ತು ಅಸಲು ವಾಪಸ್ಸಾಗುವಷ್ಟು ಸಹ ಸೆಸ್ಸುಗಳು ವಸೂಲಾಗುತ್ತವೆ. ಆದಕಾರಣ ಇದನ್ನು ಸಿಮೆಂಟ್ ಕಾಂಕ್ರೀಟ್ ರೋಡ್ ಮಾಡಿಸಬೇಕೆಂದು ಒತ್ತಾಯಪಡಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಸ್ವಾಮಿ, ಈಗ ಚರ್ಚೆಯಲ್ಲಿ ಭಾಗವಹಿಸಿರತಕ್ಕ ಮಾನ್ಯ ಸದಸ್ಯರನೇಕರು ರಸ್ತೆಗಳ ವಿಚಾರದಲ್ಲೂ ಮತ್ತು ಪಿ. ಡಬ್ಲ್ಯು. ಡಿ. ಆಡಳಿತದ ವಿಚಾರವಾಗಿಯೂ ಅನೇಕ ಸಂಗತಿಗಳನ್ನು ಪ್ರಸ್ತಾಪಿಸಿದ್ದಾರೆ. ಆದರೆ ನಾನು ಎಲ್ಲ ರಸ್ತೆಗಳೂ ಚೆನ್ನಾಗಿವೆಯೆಂದು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಕಡೆ ರಸ್ತೆಗಳು ಕೆಟ್ಟುಹೋಗಿವೆ. ಆದರೆ ಈ ರಸ್ತೆಗಳು ಕೆಟ್ಟುಹೋಗಿರತಕ್ಕ ಬಗ್ಗೆ ಶ್ರೀ ಜೆ. ಮಹಮದ್ ಇಮಾಂರವರು ಏನು ಕಾರಣಗಳನ್ನು ಸೂಚಿಸಿದ್ದಾರೋ ಆ ಕಾರಣಗಳ ಜೊತೆಗೆ ಇತ್ತೀಚೆಗೆ ಟ್ರಾಫಿಕ್ ಕೂಡ ಜಾಸ್ತಿಯಾಗಿರತಕ್ಕದ್ದೂ ಒಂದು ಕಾರಣವಾಗಿದೆ. ಅಷ್ಟೆ ಅಲ್ಲದೆ ಆ ಬಗ್ಗೆ ನಾವು ಕೊಡುತ್ತಿರುವ ಮೈಂಟೆನೆನ್ಸ್ ಛಾರ್ಜಸ್ ಕೂಡ ಕಡಮೆಯಾಗಿರುವುದೂ ಸಹ ಒಂದು ಕಾರಣವಾಗಿದೆ. ಹೀಗೆ ಈ ಎರಡು ಕಾರಣಗಳಿಂದ ರಸ್ತೆಗಳು ಕೆಟ್ಟುಹೋಗಿವೆ. ಈಗ ಹಾಲಿ ನಮ್ಮ ಸಂಸ್ಥಾನದಲ್ಲಿ ಆಸ್ಫಾಲ್ಟ್ Iನೆ ತರಗತಿಗೆ ಸೇರಿರುವ ರಸ್ತೆ $2\frac{1}{2}$ ಸಾವಿರ ಮೈಲಿಗಳಿರುತ್ತದೆ. 2ನೆಯ ಕ್ಲಾಸಿಗೆ ಸೇರಿರತಕ್ಕ ರಸ್ತೆ 2 ಸಾವಿರ ಮೈಲಿಗಳು, 3ನೇ ತರಗತಿಗೆ ಸೇರಿರತಕ್ಕ ರಸ್ತೆ 4 ಸಾವಿರ ಮೈಲಿಗಳು ಮತ್ತು 4ನೆಯ ತರಗತಿಗೆ ಸೇರಿರತಕ್ಕ ರಸ್ತೆ $3\frac{1}{2}$ ಸಾವಿರ ಮೈಲಿಗಳು. ಹೀಗೆ ನಮ್ಮ ಸಂಸ್ಥಾನದಲ್ಲಿ ಸುಮಾರು ಒಟ್ಟು 11–12 ಸಾವಿರ ಮೈಲಿಗಳ ರಸ್ತೆ ಇರುತ್ತದೆ. ಸರ್ಕಾರ ಈ ಪೈಕಿ ಕೆಲವು ಸರಕ್ಷೈಡ್ ರೋಡುಗಳನ್ನು ಮಾತ್ರ ಚೆನ್ನಾಗಿ ಇಟ್ಟುಕೊಂಡಿದೆ. ನಮ್ಮಲ್ಲಿರತಕ್ಕ ರಸ್ತೆಗಳ ಉದ್ದ ಜಾಸ್ತಿ. ಆದರೆ ಶ್ರೀ ಮಹಮದ್ ಇಮಾಂರವರು ಮಾತನಾಡುತ್ತ "ನಾವಿದ್ದ ಕಾಲದಲ್ಲಿ ಒಂದು ಪ್ಲಾನ್ ಹಾಕಿಕೊಂಡು, ಅದರ ಪ್ರಕಾರ ರಸ್ತೆಗಳನ್ನು ದುರಸ್ತಿ ಪಡಿಸಿ ಅವುಗಳನ್ನು ಚೆನ್ನಾಗಿಟ್ಟುಕೊಂಡಿದ್ದೆವು. ಆದರೆ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಆ ಪ್ಲಾನನ್ನು ಇವರು ಕೈಬಿಟ್ಟಿದ್ದರಿಂದ ರಸ್ತೆಗಳೆಲ್ಲಾ ಹಾಳಾಗಿ ಹೋದವು" ಎಂಬುದಾಗಿ ಹೇಳಿದರು. ಈ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟೋ ರಸ್ತೆಗಳು ಬಹಳ ಉತ್ತಮ ಸ್ಥಿತಿಗೆ ಬಂದಿವೆಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ನನ್ನಲ್ಲಿ ಈಗ ಆ ಸಂಪೂರ್ಣ ವಿವರಗಳಿಲ್ಲ. 2 ವರ್ಷದ ಲೆಕ್ಕಗಳು ಮಾತ್ರ ಇವೆ. 1951-52 ಮತ್ತು 1952-53ನೇ ಸಾಲುಗಳಲ್ಲಿ 25 ಮೈಲಿಗಳ ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನೂ ಮತ್ತು 74 ಮೈಲಿಗಳ ಟಾರ್ ರಸ್ತೆಯನ್ನೂ ಮಾಡಿಸಲಾಗಿದೆ. ಆದರೆ ಹೀಗೆ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ಮಾಡಿಸುವುದಕ್ಕೆ ಎಷ್ಟು ಖರ್ಚಾಗುತ್ತದೆ ಎಂಬ ವಿಷಯ ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯಂಗಾರರಿಗೂ ಗೊತ್ತಿದೆ ಮತ್ತು ಶ್ರೀ ಇಮಾಂ ಸಾಹೇಬರವರಿಗೂ ಗೊತ್ತಿದೆ. ನಾವೂ ಸಹ ಈ ಕೆಲಸಗಳನ್ನೆಲ್ಲಾ ಒಂದು ಪ್ಲಾನ್ ಪ್ರಕಾರವೇ ಮಾಡುತ್ತಿದ್ದೇವೆ. ಬೆಂಗಳೂರಿನಿಂದ ಪ್ರತಿಯೊಂದು ಜಿಲ್ಲಾ ಕಸಬೆಗಳಿಗೂ ಹೋಗತಕ್ಕ ರಸ್ತೆಗಳನ್ನೆಲ್ಲಾ ಸಿಮೆಂಟ್ ಕಾಂಕ್ರೀಟಿಂಗ್ ಮಾಡಿಸಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಅನಂತರ ಪ್ರತಿಯೊಂದು ಜಿಲ್ಲಾ ಕಸಬೆಗಳಿಂದ ಆಯಾ ಜಿಲ್ಲೆಯ ತಾಲ್ಲೂಕು ಕಸಬೆಗಳಿಗೆ ಹೋಗತಕ್ಕ ರಸ್ತೆಗಳಿಗೆ ಟಾರ್ ಹಾಕಿಸಬೇಕೆಂಬ ಉದ್ದೇಶವೂ ಸಹ ಸರ್ಕಾರಕ್ಕಿದೆ. ಇಷ್ಟೆಲ್ಲಾ ನಮ್ಮ ಗಮನದಲ್ಲಿದ್ದಾಗ್ಯೂ ಶ್ರೀ ಇಮಾಂರವರು ಈ ರಸ್ತೆಗಳ ಕಡೆಗೆ ಸರ್ಕಾರದವರು ಗಮನವನ್ನೇ ಕೊಟ್ಟಿಲ್ಲವೆಂದು ಹೇಳಿರುವುದು ಸರಿಯಲ್ಲ. ಹಣ ಒದಗಿದಂತೆಲ್ಲಾ ಈ ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟಿಂಗ್ ಮಾಡಿಸಬೇಕೆಂಬ ಇಚ್ಛೆ ಸರ್ಕಾರದವರಿಗಿದೆಯೆಂಬ ಅಂಶವನ್ನು ನಾನು ಈ ಸಂದರ್ಭದಲ್ಲಿ ಶ್ರೀ ಇಮಾಂರವರಿಗೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ದೇವರಾಜೇ ಅರಸಿನವರು ಈ ಟೂಲ್ಸ್ ಅಂಡ್ ಪ್ಲಾಂಟ್ಸ್‌ಗಾಗಿ ಹಣವನ್ನು ಹೆಚ್ಚಾಗಿ ಖರ್ಚು ಮಾಡುತ್ತಿರಲಾಗಿದೆಯೆಂದು ತಿಳಿಸಿದರು. ಆದರೆ ಅವುಗಳಿಂದ ಆಗತಕ್ಕ ಸಹಾಯ ಎಷ್ಟಿದೆಯೆಂಬುದನ್ನು ಈಗಾಗಲೇ ಮಾನ್ಯ ಶ್ರೀ ಎಲ್. ಸಿದ್ದಪ್ಪನವರು ಸಭೆಯ ಗಮನಕ್ಕೆ ತಂದಿದ್ದಾರೆ.

ಇನ್ನು ಶ್ರೀ ಇಮಾಂರವರು ಪ್ರಾರಂಭಮಾಡಿ ಕೈಬಿಟ್ಟಿದ್ದ ಅನೇಕ ಕೆಲಸಗಳನ್ನು ನಾವೀಗ ಮುಗಿಸುತ್ತ ಬಂದಿದ್ದೇವೆ. ಈ ವರ್ಷ ಅವುಗಳೆಲ್ಲಾ ಮುಗಿಯಬಹುದು. ಆ ಕೆಲಸಗಳೆಲ್ಲವೂ ನಮ್ಮಲ್ಲಿರುವ ಈ ಟೂಲ್ಸ್ ಅಂಡ್ ಪ್ಲಾಂಟ್ಸಿನಿಂದಲೇ ನಡೆದಿರುತ್ತವೆ. ಈ ರಸ್ತೆ ಕಾಮಗಾರಿ ಬಗ್ಗೆ ಬೇಗ ಕೆಲಸಗಳು ನಡೆಯಬೇಕಾಗಿದ್ದರೆ ಲಾರಿಗಳು ಬೇಕು, ಟೂಲ್ಸ್ ಅಂಡ್ ಪ್ಲಾಂಟ್ ಇತ್ಯಾದಿ ಅನೇಕ ಸಾಧನ ಸಾಮಗ್ರಿಗಳ ಅಗತ್ಯ ಹೆಚ್ಚಾಗಿರುತ್ತೆ.

ಶ್ರೀ ರಾಜಶೇಖರಮೂರ್ತಿಯವರು ಒಂದು ಸಮಿತಿಯನ್ನು ಈ ಬಗ್ಗೆ ನೇಮಕಮಾಡಿ ಅವರು ಕೊಡತಕ್ಕ ತೀರ್ಮಾನಕ್ಕನುಸಾರವಾಗಿ ನಡೆಯುವಂತೆ ಮಾಡುವುದು ಸೂಕ್ತವೆಂದು ಹೇಳಿದರು. ಆದರೆ ನಮಗೆ ಈಗ ಮುಖ್ಯವಾಗಿ ಬಂದಿರತಕ್ಕ ಸಮಸ್ಯೆ ದುಡ್ಡಿನದು, ಈ ದುಡ್ಡಿನ ಸಮಸ್ಯೆಯೊಂದು ಬಗೆಹರಿದರೆ ನಾವು ಯಾವ ಸಮಿತಿಯನ್ನು ಮಾಡಲಿಕ್ಕೂ ತಯಾರಿದ್ದೇವೆ. ಆದರೆ ನನ್ನ ಸ್ವಂತ ಅಭಿಪ್ರಾಯದಿಂದ ಹೇಳುವುದಾದರೆ ಹೀಗೆ ಬರಿ ಒಂದು ಸಮಿತಿಗಳ ನೇಮಕದಿಂದಲೇ ಈ ಸಮಸ್ಯೆಗಳೆಲ್ಲಾ ಬಗೆಯರಿಯುತ್ತವೆಂಬ ನಂಬಿಕೆ ನನಗೇನೋ ಇಲ್ಲ. ಸರ್ಕಾರ ಈಗ ಎಲ್ಲ ದೃಷ್ಟಿಗಳಿಂದಲೂ ಇದನ್ನು ವಿಮರ್ಶೆಮಾಡಿ ಈ ಒಂದು ತೀರ್ಮಾನಕ್ಕೆ ಬರಲಾಗಿದೆ.

ಇನ್ನು ಶ್ರೀ ಆರ್. ಅನಂತರಾಮಯ್ಯರವರು, ಶ್ರೀ ರಾಜಾಜಿಯವರು ಮದ್ರಾಸಿನಲ್ಲಿ ತಿಳಿಸಿದ್ದ ಪ್ರಕಾರ, ಈ ಇಲಾಖೆಯನ್ನು "enemy number 2" ಎಂದು ಹೇಳಿ ಕರೆದಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿರತಕ್ಕ ಈ ಡಿಪಾರ್ಟ್‌ಮೆಂಟಿನ ಖರ್ಚು ವೆಚ್ಚಗಳನ್ನೂ

ಮತ್ತು ಇದರ ಆಡಳಿತವನ್ನೂ ಇತರೇ ಸಂಸ್ಥಾನಗಳಲ್ಲಿರ ತಕ್ಕ ಪಿ. ಡಬ್ಲ್ಯು. ಇಲಾಖೆಗಳ ಆಡಳಿತಕ್ಕೆ ಹೋಲಿಸಿ ನೋಡಿದರೆ ನಮ್ಮದೇ ಬಹಳ ಉತ್ತಮವೆಂಬ ಅಂಶ ವನ್ನು ನಾನು ಬಹಳ ಮುಗುಂ ಆಗಿ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸಿನವರು ಈ ಇಲಾಖೆ ಯಲ್ಲಿ ಸಿಬ್ಬಂದಿಗಾಗಿ ಹೆಚ್ಚು ಹಣ ಖರ್ಚಾಗುತ್ತಿದೆ ಯೆಂದು ಹೇಳಿದರು. ಆದರೆ ಬಾಕೀ ಸಂಸ್ಥಾನಗಳಲ್ಲಿ ಈ ಇಲಾಖೆಯ ಖರ್ಚು ವೆಚ್ಚ ಶೇಕಡ 12, 13 ಇದ್ದರೆ ನಮ್ಮಲ್ಲಿ ಈ ಇಲಾಖೆಯ ಸಿಬ್ಬಂದಿ ವೆಚ್ಚ ಶೇಕಡ 8 ಇದೆ ಯೆಂದು ತಿಳಿಸಲು ಸಂತೋಷಪಡುತ್ತೇನೆ. ಟೂಲ್ಸ್ ಅಂಡ್ ಮೆಷಿನರಿಗಳ ಬಗ್ಗೆ ನಾವು ಖರ್ಚುಮಾಡುತ್ತಿರು ವುದು ಶೇಕಡ 2ರಷ್ಟು ಇರುತ್ತದೆ. ಅನೇಕ ಪ್ರಾಜೆಕ್ಟು ಗಳ ಕೆಲಸ, ಎಂದರೆ ತುಂಗ, ನುಗು ಇತ್ಯಾದಿಗಳ ಕೆಲಸ ಅರ್ಧಮರ್ಧವಾಗಿರುತ್ತೆಂದು ಕೆಲವರಿಗೆ ಅತೃಪ್ತಿಯಾಗಿರ ಬಹುದು. ಆದರೆ ಈ ಕೆಲಸಗಳೆಲ್ಲಾ ಎಷ್ಟೋ ವರ್ಷ ಗಳ ಹಿಂದೆ ಪ್ರಾರಂಭವಾದುವು. ನಮಗೆ ಹಣದ ಅನು ಕೂಲತೆ ಇದ್ದಿದ್ದರೆ ಇವುಗಳೆಲ್ಲವನ್ನೂ ಒಂದೇ ವರ್ಷದಲ್ಲಿ ಮುಗಿಸುವುದಕ್ಕೂ ನಾವು ಸಿದ್ಧರಾಗಿದ್ದೆವು. ಆದರೆ ನಮ್ಮಲ್ಲಿ ಸಾಧನ ಸೌಕರ್ಯಗಳಿವೆ, ಜನರಿದ್ದಾರೆ, ಬುದ್ಧಿವಂತರಾದ ಇಂಜಿನಿಯರುಗಳಿದ್ದಾರೆ, ಹೀಗೆ ಎಲ್ಲಾ ಅನುಕೂಲತೆಗಳೂ ಇವೆ. ಆದರೆ ದುಡ್ಡಿನ ಅನುಕೂಲತೆ ಮಾತ್ರ ಒಂದಿಲ್ಲ. ಆದರೆ ಈ ಎಲ್ಲ ಕೆಲಸಗಳೂ ಮೊದಲಿ ಗಿಂತಲೂ ಈಗ ಬಹಳ ಚೆನ್ನಾಗಿ ಮುಂದುವರಿಯುತ್ತಿ ವೆಯೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ಮಲೆನಾಡಿನ ರಸ್ತೆಗಳು ತೃಪ್ತಿಕರವಾಗಿಲ್ಲವೆಂದೂ, ಇತ್ತೀಚೆಗೆ ಅವು ಗಳು ತೃಪ್ತಿಕರವಾದ ರೀತಿಯಲ್ಲಿ ದುರಸ್ತಿಯಾಗುತ್ತಿವೆ ಯೆಂದೂ ತಿಳಿಸಿದರು. ಆದರೆ ಮಲೆನಾಡಿನಲ್ಲಿರತಕ್ಕ ರಸ್ತೆಗಳನ್ನೆಲ್ಲಾ ಟಾರ್ ರಸ್ತೆಗಳನ್ನಾಗಿ ಮಾಡಬೇಕಾ ಗಿದ್ದರೆ ಸುಮಾರು 2½ ಕೋಟಿ ರೂಪಾಯಿಗಳು ಬೇಕಾ ಗಬಹುದು. ಮಲೆನಾಡಿನಲ್ಲಿ ಕಮ್ಯೂನಿಟಿ ಪ್ರಾಜೆಕ್ಟಿಗಾಗಿ 5 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ.

ಶ್ರೀ ಎಲ್. ಸಿದ್ದಪ್ಪನವರು ಈ ಡಿಪಾರ್ಟ್ ಮೆಂಟನ್ನೇ ರೀ-ಆರ್ಗನೈಜ್ ಮಾಡಬೇಕೆಂಬುದಾಗಿ ಹೇಳಿದ್ದಾರೆ. ಈ ವಿಚಾರವಾಗಿ ಸರ್ಕಾರದವರೂ ಆಲೋಚನೆ ಮಾಡಿ ನೋಡಿದ್ದಾರೆ. ತೀರಾ ಆವಶ್ಯಕ ವೆಂದು ಕಂಡುಬರುವ ಕಡೆಗಳಲ್ಲಿ ಮಾತ್ರ ಸಬ್-ಡಿವಿ ಜನ್ನುಗಳನ್ನು ಇಟ್ಟುಕೊಂಡು, ಬಾಕೀ ಕಡೆಗಳಲ್ಲಿದ್ದ ಅನೇಕ ಸಬ್‌ಡಿವಿಜನ್‌ಗಳನ್ನು ವಜಾ ಮಾಡಿದ್ದೇವೆ. 7 ಪ್ರಾಜೆಕ್ಟ್ ಡಿವಿಜನ್‌ಗಳನ್ನು ವಜಾ ಮಾಡಿದ್ದೇವೆ, 7 ಸಾಧಾರಣ ಸಬ್‌ಡಿವಿಜನ್‌ಗಳನ್ನು ವಜಾ ಮಾಡಿ ದ್ದೇವೆ, ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರ ಹುದ್ದೆ ಯನ್ನು ವಜಾ ಮಾಡಲಾಗಿದೆ; 2 ಸ್ಪೆಷಲ್ ಸಬ್ ಡಿವಿಜನ್‌ಗಳನ್ನು ತೆಗೆದು ಹಾಕಿದ್ದೇವೆ. ಆದರೆ ಕೆಲವು ಕಡೆಗಳಲ್ಲಿ ಕೆಲಸ ಇನ್ನೂ ಜಾಸ್ತಿಯಾಗಿರುವುದರಿಂದ ಇನ್ನೂ ಕೆಲವು ಸಬ್‌ಡಿವಿಜನ್‌ಗಳನ್ನು ಹೊಸದಾಗಿ ನಿರ್ಮಾಣಮಾಡಬೇಕಾದ ಅಗತ್ಯ ಕೂಡ ಇದೆ. ಹಣ ಮಿಗಿಸಬೇಕೆಂಬ ದೃಷ್ಟಿಯಿಂದಲೇ ಸಿಬ್ಬಂದಿಯನ್ನು ಇನ್ನು ಖೋತಾ ಮಾಡಬೇಕೆಂದರೆ ಅದು ಸಾಧ್ಯವಿಲ್ಲವೆಂದು ನಾನು ತಮಗೆ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಶ್ರೀ ವಿ. ವೆಂಕಟಪ್ಪನವರು ಚೆನ್ನಪಟ್ಟಣ ತಾಲ್ಲೂಕಿನಲ್ಲಿ ರಸ್ತೆಗಳೆಲ್ಲಾ ಕೆಟ್ಟುಹೋಗಿರುತ್ತವೆಂದು ಹೇಳಿದರು, ನಿಜ. ಈ ಹಿಂದೆ ನಾನೂ ಕೂಡ ಅಲ್ಲಿಗೆ ಹೋಗಿದ್ದಾಗ ಅವರು ಜೊತೆಯಲ್ಲೇ ಅನೇಕ ಕಡೆಗೆ ನನ್ನನ್ನು ಕರೆದುಕೊಂಡು ಹೋಗಿ ತೋರಿಸಿದರು. ಅವರ ತಾಲ್ಲೂಕಿನಲ್ಲಿ ರಸ್ತೆಗಳ ಕೆಟ್ಟುಹೋಗಿರುವುದು ನಿಜ. ಆದರೆ ಇದು ಒಂದುದಿವಸದಲ್ಲಿ ಅಥವಾ ಒಂದು ಸ್ಥಳದಲ್ಲಿ ಉಂಟಾಗಿರುವಂಥಾ ಸಮಸ್ಯೆಯಲ್ಲ. ಹಿಂದಿನ ಅನೇಕ ವರ್ಷಗಳಿಂದಲೂ ಬಂದಿರತಕ್ಕಂಥಾ ಒಂದು ಸಮಸ್ಯೆ. ಉದಾಹರಣೆಗೆ ಹೇಳುವುದಾದರೆ, ಮೈಸೂರು ತಾಲ್ಲೂಕಿ ನಲ್ಲೂ ಹೀಗೆ ರಸ್ತೆಗಳೆಲ್ಲಾ ಕೆಟ್ಟುಹೋಗಿವೆ.

ಇನ್ನು ಶ್ರೀ ಶ್ರೀನಿವಾಸ ಅಯ್ಯಂಗಾರ್‌ಅವರು ಈ ಇಲಾಖೆ ಕೆಲಸವೆಲ್ಲಾ ಬಹಳ ನಿಧಾನವಾಗಿ ನಡೆಯು ತ್ತಿರುವುದರಿಂದ ಲಂಚ ರುಷುವತ್ತುಗಳಿಗೆ ಅವಕಾಶ ವಾಗಿದೆಯೆಂದು ಹೇಳಿದರು. ಆ ಲಂಚ ರುಷುವತ್ತು ಗಳಿಗೆ ಕೆಲಸಗಳು ಆಗುವುದು ನಿಧಾನವಾದದ್ದೇ ಒಂದು ಕಾರಣವಾಗುವುದಿಲ್ಲ. ಕೆಲಕೆಲವು ಕಾರಣಗಳಿಂದ ಕೆಲವು ಕೆಲಸಗಳು ನಿಧಾನವಾಗುತ್ತವೆ. ಇನ್ನು ಕೆಲವು ಚುರುಕಿ ನಿಂದ ಬೇಗ ಬೇಗ ನಡೆಯುತ್ತವೆ. ಇದು ಆಯಾ ಕೆಲಸ ಗಳ ಸ್ವಭಾವವನ್ನು ಅನುಸರಿಸಿಕೊಂಡು ಹೋಗುತ್ತದೆ. ಸರ್ಕಾರದ ಉದ್ದೇಶ ಕೂಡ ಈ ಕೆಲಸಗಳೆಲ್ಲಾ ಚುರು ಕಾಗಿ ನಡೆಯಬೇಕೆಂಬುದೇ ಆಗಿದೆ. ಇನ್ನು ಕೆಲವರು ರೋಡ್ ಸೆಸ್ಸಿನಿಂದ ಬರತಕ್ಕ ಮೊಬಲಗನ್ನೆಲ್ಲಾ ಈ ರಸ್ತೆಗಳ ರಿಪೇರಿಗಾಗಿಯೇ ಮೀಸಲಾಗಿಡಬೇಕೆಂದು ತಿಳಿಸಿದರು. ಈ ವರ್ಷದ ಬಡ್ಜೆಟ್ಟನ್ನು ತಾವು ನೋಡು ವುದಾದರೆ ರಸ್ತೆ ಮತ್ತು ಸೇತುವೆಗಳ ಬಗ್ಗೆ 127ಲಕ್ಷ ಖರ್ಚಾಗಿರುತ್ತೆಂಬುದು ತಮಗೆಲ್ಲಾ ಗೊತ್ತಾಗುತ್ತದೆ.

I will be able to give details later on. But you bave not taken into account the expenditure that we are incurring for collecting those taxes.

2-30 P.M.

ಆದ್ದರಿಂದ, ಈ ಇಲಾಖೆಯ ಕೆಲಸಕಾರ್ಯಗಳು ಬಹಳ ತೃಪ್ತಿಕರವಾಗಿರುವ ರೀತಿಯಲ್ಲಿ ನಡೆಸಲು ಸರ್ಕಾ ರದವರು ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತಾರೆ. ಅನಾವಶ್ಯಕವಾಗಿ ಮಾಡಿದ ಈ ಟೀಕೆಗಳಿಗೆ ಆಧಾರ ವಿಲ್ಲವೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The qucstion is :

"That a sum not exceeding Rs. 2,36,59,000 be granted to the Government to defray the charges which will come in course of payment during the year ending 31st day of March 1954, in respect of 'Civil Works'."

The motion was adopted.

DEMAND No. 30—FEMINE RELIEF 54. FAMINE RELIEF.

Mr. SPEAKER.—Motion moved :

"That a sum not exceeding Rs. 30,00,000 be granted to the Government to defray the charges which will come in course of payment during the year ending 31st day of March 1954. inrespect of Famine Relief'."

ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ—ಹೆಗ್ಗ ಡದೇವನಕೋಟೆ).—ಮಾನ್ಯ ಅಧ್ಯಕ್ಷರೇ, 'famine relief' ಎಂದು ನೀವು ಏನು ಕಾರ್ಯಕ್ರಮ ಕೈಕೊಂಡಿ ದ್ದೀರೋ ಅದರ ವಿಚಾರದಲ್ಲಿ ಕೆಲವು ಮಾತುಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

[Sri M. CHIKKALINGIAH in the Chair.]

(ಶ್ರೀ ಎಚ್. ಕೆ. ಶಿವರುದ್ರಪ್ಪ.)

ಸ್ವಾಮೀ, ನಮ್ಮ ಮೈಸೂರು ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ ಅನೇಕ ಕಡೆ ಮಳೆ ಬೆಳೆಗಳಿಲ್ಲದೆ ತೊಂದರೆ ಯಾಗಿದೆಯೆಂಬ ವಿಚಾರವನ್ನು ನಾನು ಮೊದಲೇ ತಮ್ಮ ಗಮನಕ್ಕೆ ತಂದಿದ್ದರೂ ತಾವು ಆ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಲಿಲ್ಲವೆಂದು ಹೇಳಿ ನಾನು ತಮ್ಮನ್ನು ಆಕ್ಷೇಪಿಸಬೇಕಾಗಿದೆ, ಕಳೆದ ಸಾಲಿನಲ್ಲಿ ಮೈಸೂರು ಜಿಲ್ಲೆಯ ಅನೇಕ ಭಾಗಗಳಲ್ಲಿ ಮಳೆಬೆಳೆಗಳಿಲ್ಲದೆ ಆಹಾರಾಭಾವ ಬಂದಿದ್ದ ಸಂದರ್ಭದಲ್ಲಿ ಆ ಪ್ರದೇಶವನ್ನು ನೋಡಲಿಕ್ಕೆ ಕೂಡ ಅನೇಕರು ಬಂದಿದ್ದರು. ಒಂದುಸಾರಿ ಕಳೆದ ದಸರಾ ಕಾಲದಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳು ಶ್ರೀ ಚೆಂಗಲರಾಯರೆಡ್ಡಿಯವರನ್ನು ಗುಂಡ್ಲುಪೇಟೆ ಮುಂತಾದ ಕೆಲವು ಕ್ಷಾಮಕ್ಕೀಡಾದ ತಾಲ್ಲೂಕುಗಳನ್ನು ನೋಡಿಕೊಂಡು ಬನ್ನಿ ಎಂದು ಸಲಹೆ ಕೊಟ್ಟು ಕಳುಹಿಸಿದ್ದರೆಂದೂ ನನಗೆ ತಿಳಿದುಬಂತು. ಅವರು ಅದೇ ಪ್ರಕಾರ ನೋಡಿಕೊಂಡು ಬಂದು ಕೆಲವು ವರದಿಗಳನ್ನು ಸರ್ಕಾರದವರಿಗೆ ಒಪ್ಪಿಸಿದರು. ಅವರೇ ಕಂಡಂತೆ ಅನೇಕ ಕಡೆಗಳಲ್ಲಿ ಮಳೆ ಬೆಳೆಗಳು ಹೋಗಿ, ಜನರ ಕೈಯಲ್ಲಿ ದುಡ್ಡಿಲ್ಲದೆ, ಆಹಾರ ಪದಾರ್ಥಗಳು ಸಿಕ್ಕುತ್ತಿದ್ದರೂ ಜನರು ಕೊಂಡುಕೊಳ್ಳುವುದಕ್ಕಾಗದೆ ಇರುವಂಥ ದುಸ್ಥಿತಿಯನ್ನು ನೋಡಿ ಸರ್ಕಾರದವರಿಗೆ ತಕ್ಕ ಏರ್ಪಾಡುಮಾಡಲಿಕ್ಕೆ ಸಲಹೆ ಮಾಡುತ್ತೇವೆಂದು ಹೇಳಿದರು. ನಮ್ಮ ಸೀಮೆಯೆಲ್ಲಾ ಹೆಚ್ಚು ಜೋಳ ಬೆಳೆಯುವ ಸೀಮೆ; ಅಂಥದರಲ್ಲಿ ಜೋಳ ಆಗಲಿಲ್ಲ, ಬತ್ತವೂ ಕೂಡ ಆಗಲಿಲ್ಲ; ರಾಗಿ ಇಲ್ಲವೇ ಇಲ್ಲ. ಆದ್ದರಿಂದ ಮುಂದಿನ ಜೋಳದ ಫಸಲುಬರುವ ತನಕ, ಅಂದರೆ, ಆಗಸ್ಟ್, ಸೆಪ್ಟೆಂಬರ್ ತನಕ, ಬೇರೆ ಯಾವ ದಿನಸಿಯೂ ಬರುವ ಸಂದರ್ಭ ಇಲ್ಲ. ಇದರಿಂದಾಗಿ ಇವೊತ್ತಿನ ದಿವಸ ಅಲ್ಲಿನವರೆಲ್ಲರೂ ಕೊಂಡು ತಿನ್ನಬೇಕಾದ ಸಂದರ್ಭ ಬಂದಿದೆ. ಆದರೆ ಕೊಳ್ಳುವುದಕ್ಕೆ ಕಾಸಿಲ್ಲ. ಆದ್ದರಿಂದ ಜನರಿಗೆ ಕೂಲಿಯೊದಗಿಸುವ ಸಲುವಾಗಿ ಯಾವುದಾದರೂ ಕ್ಷಾಮ ನಿವಾರಣಾ ಕಾರ್ಯವನ್ನು ಕೈಕೊಳ್ಳುವುದು ಅತ್ಯಾವಶ್ಯಕವಾಗಿದೆ. ಈ ಸಂದರ್ಭದಲ್ಲಿ ಬೊಂಬರಾಪುರದ ಕೆರೆ ಕಾಮಗಾರಿಯನ್ನು Distress relief ಕಾಮಗಾರಿಯಾಗಿ ಕೈಗೊಂಡು ಜನರಿಗೆ ಕೂಲಿ ಒದಗಿಸಬೇಕೆಂದು ಶಿಫಾರಸು ಮಾಡಿದ್ದಾಯಿತು. ನವೆಂಬರಿನಲ್ಲೇ ಈ ರೀತಿ ಶಿಫಾರಸು ಮಾಡಿದರೂ ಮಾರ್ಚಿ ತಿಂಗಳಾದರೂ ಕೈಗೊಳ್ಳದೆ ಹಾಗೆಯೇ ಇದ್ದಾರೆ. ಕಳೆದ ಸಾಲಿನಲ್ಲಿ ಕ್ಷಾಮ ನಿವಾರಣಾ ಫಂಡ್ ಎಂದು ಮಾಡಲಾಯಿತು. ಅದನ್ನೂ ಕೂಡ ಖರ್ಚುಮಾಡದೆ ಉಳಿಸಿದರು. ವರ್ಷದ ಕೊನೆಯ ಭಾಗದಲ್ಲಿ ಈ ರೀತಿ ಹಣವನ್ನು ಕೊಟ್ಟಂತೆ ಮಾಡಿ ಖರ್ಚುಮಾಡದೆ ವಾಪಸು ತೆಗೆದುಕೊಂಡಿರುವುದು ನಿಜವಾಗಿಯೂ ಖಂಡನೀಯವಾದದ್ದು. ನಮ್ಮ ತಾಲ್ಲೂಕಿನಲ್ಲಿ ಇದುವರೆಗೂ ಒಂದಾದರೂ ಡಿಸ್ಟ್ರೆಸ್ ಕಾಮಗಾರಿಯನ್ನು ಕೈಗೊಂಡಿದ್ದಾರೆಯೇ ? ಹಾಗಿದ್ದರೆ, ಮಾನ್ಯ ಮಂತ್ರಿಗಳು ಹೇಳಲಿ ! ಇಡೀ ಗುಂಡ್ಲುಪೇಟೆ ತಾಲ್ಲೂಕು ಇಷ್ಟು ಕ್ಷಾಮ ಬಾಧೆಯಿಂದ ತೊಳಲುತ್ತಿದ್ದರೂ ಒಂದಾದರೂ ರಿಲೀಫ್ ಕಾಮಗಾರಿಯನ್ನು ಕೈಗೊಳ್ಳಬೇಡವೇ ? ತಾವು ಒಂದು ಮಾಡಿರುವುದನ್ನು ಹೇಳಿದರೂ ನಾನು ಇಡೀ ಸರ್ಕಾರದವರಿಗೆ ಕೃತಜ್ಞನಾಗಿರುತ್ತೇನೆ. ನಾವು ಎಷ್ಟು ಹೇಳಿದರೂ ತಾವು ತೆಗೆದುಕೊಳ್ಳುವ ಪ್ರಯತ್ನವನ್ನೂ ಸಹ ಮಾಡಿಲ್ಲವಲ್ಲ ಎಂದು ದುಃಖಪೂರಿತನಾಗಿ ಹೇಳುತ್ತಿದ್ದೇನೆ. ಅದೇನು ನಾವು ಹೇಳುವುದು ಸುಳ್ಳು ಎಂದು ಭಾವಿಸಿದರೋ ಅಥವಾ ವಿರೋಧಪಕ್ಷದವರಿಗೆ ಸಹಾಯಮಾಡಕೂಡದೆಂದು ಮನಸ್ಸು ಮಾಡಿದರೋ ಕಾಣೆ. ಮಾನ್ಯ ಶ್ರೀ ಚೆಂಗಲರಾಯರೆಡ್ಡಿಯವರು ಹೇಳಿದರೂ ಅದಕ್ಕಾದರೂ ಒಂದು ಬೆಲೆ ಬೇಡವೇ !

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಸದ್ಯಕ್ಕೆ ಒಂದು ವಿಷಯ ಮಾತ್ರ ಹೇಳಬಲ್ಲೆ, ಅನೇಕಕಡೆ ಬಾವಿಗಳನ್ನು ಆಳಪಡಿಸಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆದರೆ ನೀರೇ ಬಹಳ ಇಳಿದುಹೋಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಅದು ರಿಲೀಫ್ ಕಾಮಗಾರಿಯಲ್ಲವೇ ?

ಶ್ರೀ ಎಚ್. ಕೆ. ಶಿವರುದ್ರಪ್ಪ.—ಬಾವಿ ತೆಗೆಯುವ ಕೆಲವು ಒಡ್ಡರಿಗೆ ಅದರಿಂದ ನಾಲ್ಕುಕಾಸು ಸಿಕ್ಕುವಂತಾಗಿರಬಹುದೇ ಹೊರತು, ಸರ್ವೇಸಾಮಾನ್ಯ ಜನರೆಲ್ಲಾ ದುಡ್ಡಿಲ್ಲದೆ ಒದ್ದಾಡುತ್ತಿರುವಾಗ ಅವರಿಗೆ ಹೇಗೆ ಅನುಕೂಲಮಾಡಿದಹಾಗಾಯಿತು ? ಎಲ್ಲಾ ಸಾಮಾನ್ಯ ಜನರಿಗೂ ಕೂಲಿ ಬರುವಂಥ ಯಾವುದಾದರೂ ಕಾಮಗಾರಿ ಮಾಡಿದ್ದರೆ ಅದನ್ನು ರಿಲೀಫ್ ಕಾಮಗಾರಿಯೆನ್ನಬಹುದು. ಕೆರೆ ಕಾಮಗಾರಿಯನ್ನೋ, ರಸ್ತೆ ಕಾಮಗಾರಿಯನ್ನೋ ಕೈಕೊಂಡರೆ ಹೆಚ್ಚು ಜನರಿಗೆ ನಾಲ್ಕುಕಾಸು ಬರುತ್ತದೆಯೇ ಹೊರತು, ಬಾವಿ ಕೆಲಸದಿಂದಲ್ಲ. ಬಾವಿ ಕೆಲಸಮಾಡುವ 3-4 ಜನರಿಗೆ 300—400 ರೂಪಾಯಿಗಳನ್ನು ಕೊಟ್ಟುಬಿಟ್ಟು ರಿಲೀಫ್ ಕಾಮಗಾರಿ ಏರ್ಪಡಿಸಿದ್ದೇವೆಂದು ಹೇಳುವುದು ಸರಿಯಲ್ಲ.

ಮೈಸೂರು ಜಿಲ್ಲೆಯಲ್ಲಿ ಈ ಸಾರಿ ಒಂದು ಕಮ್ಯೂನಿಟಿ ಪ್ರಾಜೆಕ್ಟನ್ನು ತೆಗೆಯುತ್ತೀರೆಂಬ ವರ್ತಮಾನ ಕೇಳಿದೆ. ನಮ್ಮ ಜಿಲ್ಲೆಯಲ್ಲಿ ಇದನ್ನು ಕೈಕೊಳ್ಳುವುದು ಅತ್ಯಾವಶ್ಯಕ. ಆದ್ದರಿಂದ ಕೂಡಲೆ ಹೆಚ್ಚು ಹೆಚ್ಚಾಗಿ ಇದಕ್ಕೆ ಹಣ ಒದಗಿಸಿ ಅದಕ್ಕೆ ತೀವ್ರ ಗಮನ ಕೊಡಬೇಕೆಂದು ನಾನು ಸರ್ಕಾರದವರನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ.

Sri B. V. NARAYANA REDDY (Bagepalli-Gudibanda).—Even in the last budget session I strongly criticised them in this matter. In spite of repeated representations, the works are not adequate. You did allow several thousands of cattle to die.

ಹಾಗಿದ್ದರೂಕೂಡ ತಾವು ಯಾವ ವಿಧದಲ್ಲೇ ಆದರೂ ಈ 13 ಲಕ್ಷ ರೂಪಾಯಿಗಳನ್ನು ಅಲ್ಲಿ ನಿಜವಾಗಿಯೂ ಖರ್ಚುಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಜಾಸ್ತಿ ಮಾಡಿದ್ದೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ನೀವು ಹೇಗೆ ಮಾಡಿದಿರೋ ! ಅಂತೂ ಎಷ್ಟು ಖರ್ಚುಮಾಡಿದ್ದೇವೆಂದ ಹೇಳುತ್ತೀರೋ ಅಷ್ಟು ಸಾವಿರ ದನಗಳೇ ಸತ್ತುಹೋಗಿವೆ ! ಎಷ್ಟೋ ಕಡೆ ಜನರು ಊಟವಿಲ್ಲದೆ ಸತ್ತರು ! ನೀವೇನೋ ಅದನ್ನು deny ಮಾಡುತ್ತೀರಿ. ಅವರು ತಿಂದಿದ್ದ ಆಹಾರದಿಂದ ಬಂದ ಖಾಯಿಲೆಯೆಂದಾದರೂ ತಿಳಿಯಿರಿ, ಬೇರೆ ರೋಗದಿಂದಲೆಂದಾದರೂ ತಿಳಿಯಿರಿ, ಅಂತು ಜನ ಸತ್ತಿರುವುದನ್ನು ನೀವು ಒಪ್ಪಬೇಕು. ಈ ವರ್ಷವೂ ಸದ್ಯ ಅದೇ ಅಭಾವವಿದ್ದರೂ ಕೂಡ ತಾವು ರಿಲೀಫ್ ಕೆಲಸಗಳನ್ನು ಮುಂದುವರಿಸದೆ ನಿಲ್ಲಿಸಿಬಿಟ್ಟಿದ್ದೀರಿ. ಈಗಲೂ ಹಿಂದಿನ ಏಪ್ರಿಲ್‌ನ ಕ್ಷಾಮದ ಪರಿಸ್ಥಿತಿ ಇದ್ದೇ ಇದೆ. ಹೋದವರುಷ ಬೆಳೆಯಿಲ್ಲದೆ ಹೋಯಿತು. ಈ ವರ್ಷವೂ ಬೆಳೆಯಾಗುವ ನಂಬಿಕೆಯಿಲ್ಲ. ಮಳೆ ಅಲ್ಲಿ

ವಿಪರೀತ ಕಮ್ಮಿ ಬಿದ್ದಿರುವುದು ಎಲ್ಲರಿಗೂ ಗೊತ್ತೇ ಇದೆ. ಅಷ್ಟಾದರೂ ತಾವು ಇದುವರೆಗೂ ಏನೂ ಮುಂಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ಒಣ ಹುಲ್ಲು ಅಲ್ಲಿಗೆ ಸರಬರಾಯಿಮಾಡಿಡಬೇಕೆಂದು ಹೇಳುತ್ತಿದ್ದೇವೆ. ರಾಜಪ್ರಮುಖರ ಭಾಷಣದಮೇಲೆ ಮಾತನಾಡುವಾಗಲೂ ನಾನು ಹೇಳಿದ್ದೇನೆ. ಇದುವರೆಗೂ ಆ ಬಗ್ಗೆ ಏನೂ ಕಾರ್ಯಕ್ರಮ ಕೈಕೊಂಡಿಲ್ಲ. ಮುಂದೆ ಕಷ್ಟ ಸಮಯ ಸನ್ನಿಹಿತವಾದಾಗ, ಲಾರಿ ಸಿಕ್ಕಲಿಲ್ಲ, ವಾಹನ ಸೌಕರ್ಯ ಸಿಕ್ಕಲಿಲ್ಲವೆಂದು ಹೇಳಿಬಿಡುತ್ತೀರಿ. ಈಗಲಾದರೂ ಸಕಾಲದಲ್ಲಿ ಪ್ರಯತ್ನಮಾಡಿ ಹುಲ್ಲನ್ನು ಆ ಭಾಗಕ್ಕೆ ಒದಗಿಸಬೇಕೆಂದು ಹೇಳುತ್ತೇನೆ.

ಹೋದಸಾರಿ ಇಂಥಾ ಕ್ಷಾಮಪೀಡಿತ ಪ್ರದೇಶಗಳಿಗೆ ಏನಾದರೂ Permanent Measures ಮಾಡಬೇಕೆಂದು ಸಲಹೆ ಕೊಟ್ಟೆವು. ರಾಮಮೂರ್ತಿ ಕಮಿಟಿಯವರು ಬಂದಾಗ ಕೂಡ ಈ ರೀತಿ ಮನವಿಗಳಿವೆಯೆಂದು ಎಷ್ಟೋ ಹೇಳಿದರು. ಆದರೂ ನಮ್ಮ ತಾಲ್ಲೂಕಿನಲ್ಲಿ ಇದುವರೆಗೂ ಯಾವ Permanent Measures ಮಾಡಿಸಿರುವುದೂ ಕಾಣಬರುತ್ತಿಲ್ಲ. ಹೆಸರಿಗೆ ಮಾತ್ರ, 'ಗುಡಿಬಂಡೆಗೆ 14 ಲೈಟ್‌ಗಳು, ಬಾಗೇಪಲ್ಲಿಗೆ 20 ದೀಪಗಳು ಕೊಟ್ಟೆವು, 25 ಸೈಕಲ್ಲನ್ನು 50 ಸೈಕಲ್ಲಿಗೆ ಬದಲಾಯಿಸಬೇಕೆಂದಿದ್ದೇವೆ' ಎಂದು ಹೇಳುತ್ತಿದ್ದೀರೇ ಹೊರತು ನಿಜವಾಗಿ ನೀರಾವರೀ ಸೌಕರ್ಯ ಒದಗಿಸಲು ವಿದ್ಯುಚ್ಛಕ್ತಿ ಸೌಕರ್ಯವನ್ನೂ ತಾವು ಈಚೆಗೆ ಎಲ್ಲಿಯೂ ಮಾಡಿಕೊಟ್ಟಂತೆ ಕಂಡುಬಂದಿಲ್ಲ. ತಾವು 25 ಸೈಕಲ್ಲಾದರೂ ಇಟ್ಟುಕೊಳ್ಳಿ, 50 ಸೈಕಲ್ಲಾದರೂ ಮಾಡಿಕೊಳ್ಳಿ, ಬಡಜನರಿಗೆ ಅವೊಂದೂ ಬೇಕಿಲ್ಲ. ಅವರಿಗೆ ಆದಷ್ಟು ಬೇಗ ವಿದ್ಯುಚ್ಛಕ್ತಿಅನುಕೂಲವನ್ನು ಕಲ್ಪಿಸಿಕೊಡಬೇಕು. ನಮ್ಮ ಕಡೆ 2,000 ಬಾವಿಗಳಿವೆ. ಇವುಗಳಿಗೆ ಪಂಪು ಹಾಕಿ ಪವರ್ ಸಪ್ಲೈಮಾಡಲಿಕ್ಕೆ ಏರ್ಪಾಡುಮಾಡಬೇಕಾದದ್ದು ಮುಖ್ಯ.

ಇದಲ್ಲದೆ, ತಾವು ಸದ್ಯಕ್ಕೆ ಅ[illegible] ರಿಲೀಫ್ ಕಾಮಗಾರಿಗಳನ್ನು ಕೈಕೊಳ್ಳಬೇಕು. ಇನ್ನೊಂದು ಮುಖ್ಯವಾದ ಅಂಶವನ್ನು ಈ ಸಂದರ್ಭದಲ್ಲಿ ಜ್ಞಾಪಕದಲ್ಲಿಡಬೇಕು. ತಾವೀಗ ಕೊಡುತ್ತಿರುವ ಕೂಲಿ ಎಷ್ಟುಮಾತ್ರವೂ ಸಾಲದು. ಏಕೆಂದರೆ, ಈಚೆಗೆ ಆಹಾರಧಾನ್ಯಗಳ ಬೆಲೆ ಜಾಸ್ತಿಯಾಗಿದೆ. ನೀವು ಕೊಡುವ ದುಡ್ಡಿನಲ್ಲಿ ಆತನಿಗೆ ಎಷ್ಟು ಕ್ಯಾಲರಿ ಪ್ರಮಾಣದ ಆಹಾರ ಸಿಕ್ಕೀತು ಎಂಬುದನ್ನು ಯೋಚನೆಮಾಡಿ. ಆವನಿಗೆ ಅದು ಸಾಕಾಗುತ್ತದೆಯೇ! ಇದಲ್ಲದೆ ತಾವು ರಷ್ಯದ ಧಾನ್ಯವನ್ನು ಹಂಚುತ್ತಿದ್ದೀರಿ. ಬರೀ ಧಾನ್ಯವಾದರೆ ಅವರಿಗೆ ಎಲ್ಲವೂ ಆಯಿತೇ? ಆದ್ದರಿಂದ ಆತನಿಗೆ ಬೇಕಾದ ಬಟ್ಟೆ ಬರೆಗಳನ್ನು ಕೊಂಡುಕೊಳ್ಳುವಂತೆ ಹೆಚ್ಚಿಗೆ ಕೂಲಿ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ನಮ್ಮ ಕಡೆಯ ರೈತರಿಗೆ ಹೆಚ್ಚು ಹೆಚ್ಚಿಗೆ ತಕಾವಿ ಸಾಲಗಳನ್ನೂ, ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲಗಳನ್ನೂ ಕೊಡುವುದರ ಜೊತೆಗೆ ವಿದ್ಯುಚ್ಛಕ್ತಿ ಪಂಪುಗಳನ್ನೂ ಹಾಕಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಅದಕ್ಕೂ ಸಾಲಗಳನ್ನು ಕೊಡಬೇಕೆಂದು ನಾನು ಒತ್ತಾಯವಾಗಿ ಹೇಳುತ್ತೇನೆ. ಈ ಸಾರಿಯಾದರೂ ಏನಾದರೂ ಮಾಡಿಯಾರು ಎಂದು ನಾನಿಷ್ಟು ಕಟುವಾಗಿ ಟೀಕಿಸುತ್ತಿದ್ದೇನೆ ಅಷ್ಟೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಅಧ್ಯಕ್ಷರೇ, ಕ್ಷಾಮ ಪರಿಸ್ಥಿತಿ ಇತ್ತೀಚೆಗೆ ನಮ್ಮ ಸಂಸ್ಥಾನದಲ್ಲಿ ಪದೇ ಪದೇ ನಮಗೆ ತೊಂದರೆ ಕೊಡುತ್ತಿದೆ. 1945-46ನೆಯ ಸಾಲಿನಲ್ಲಿ ಕ್ಷಾಮ ನಮ್ಮ ಸೀಮೆಯಲ್ಲಿ ತಲೆದೋರಿತ್ತು. ಆಗ ನಾನು ಕ್ಷಾಮ ಪರಿಸ್ಥಿತಿಯಿದ್ದ ಕೆಲವು ಭಾಗಗಳಲ್ಲಿ ಸಂಚಾರಮಾಡಿ ನೋಡಿದಾಗ—ನಾನು ಮುಖ್ಯವಾಗಿ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸಂಚಾರಮಾಡಿದೆ—ಎಲ್ಲಾ ಕಡೆಯಲ್ಲಿಯೂ ಅರ್ಧ ಮೈಲಿ, 2 ಫರ್ಲಾಂಗ್ ದೂರದವರೆಗೂ ಜನರು 500-600 ತಂಡವಾಗಿ ನಿಂತು ಕೆಲಸ ಕೊಡಿ, ಕೆಲಸ ಕೊಡಿ ಎಂದು ಕೇಳುತ್ತಿದ್ದ ದೃಶ್ಯವನ್ನು ಕಂಡೆ. ಅಲ್ಲದೆ, ಕೆಲವೆಡೆ ಉದಾಹರಣೆಗೆ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಎರಡು ತಾಲ್ಲೂಕುಗಳಲ್ಲಿ ಪದೇ ಪದೇ ಯಾವಾಗಲೂ ಕ್ಷಾಮ ಬರುವ ಸಂದರ್ಭವಿದ್ದೇ ಇರುತ್ತದೆ. ಮಳೆ ಕಡಿಮೆಯಾಗಿ, ಕ್ಷಾಮ ಪರಿಸ್ಥಿತಿ ಬಂದು, ಎಷ್ಟು ಪ್ರಮಾಣದಲ್ಲಿ ಬೆಳೆಯಾಗಬೇಕೋ ಅಷ್ಟು ಬೆಳೆಯಾಗುತ್ತಿಲ್ಲ. ಇಂಥ ಸಂದರ್ಭಗಳನ್ನು ತಾತ್ಕಾಲಿಕವಾಗಿ ಎದುರಿಸುವುದಕ್ಕಿಂತ ಹೆಚ್ಚು ಗಭೀರವಾದ ಸಮಸ್ಯೆಯೆಂದರೆ ಇಂಥವಕ್ಕೆ ಯಾವುದಾದರೂ Permanent remedy ಗಳನ್ನು ಕಂಡುಹಿಡಿಯುವುದು. ಏಕೆಂದರೆ ಇವುಗಳನ್ನಿಟ್ಟುಕೊಳ್ಳದೆಹೋದರೆ ಕ್ಷಾಮದಿಂದ ಆಗತಕ್ಕ ತೊಂದರೆಗಳು ತಪ್ಪುವುದಿಲ್ಲ. ನಮ್ಮ ಜನರಿಗೆ ಸುಖವಿರುವುದಿಲ್ಲ. ಈ ದೃಷ್ಟಿಯಿಂದಲೇ ಇಂಡಿಯಾ ಸರ್ಕಾರದವರು ಶ್ರೀ ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಏರ್ಪಾಡುಮಾಡಿದರು. ಆ ಕಮಿಟಿಯವರು ಈ ಸಂದರ್ಭದಲ್ಲಿ ಯಾವ ಯಾವ ಪ್ರದೇಶದಲ್ಲಿ ಕ್ಷಾಮ ಪರಿಸ್ಥಿತಿಯಿತ್ತೋ ಅಲ್ಲೆಲ್ಲ ಸಂಚಾರಮಾಡಿಕೊಂಡುಬಂದು ಏನು ಪರಿಹಾರವಾಗಬೇಕೆಂಬ ಬಗ್ಗೆ ಶಿಫಾರಸು ಮಾಡಿದ್ದಾರೆಂದು ನನಗೆ ತಿಳಿಯಬಂತು. ಅವರು ಕೆಲವು ನಿರ್ದಿಷ್ಟ ಸಲಹೆಗಳನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿದ್ದಾರೆಂದೂ ಕೇಳಿದ್ದೇನೆ. ಇಲ್ಲಿಯವರೆಗೂ ಆ ಸಲಹೆಗಳೇನೆಂಬುದು ಜನಸಾಮಾನ್ಯರಿಗೆ ಗೊತ್ತಾಗಿಲ್ಲ. ಒಂದೊಂದು ಸಾರಿ ನೀವು ಡೆಲ್ಲಿಗೆ ಹೋಗಿ ವಾಪಸು ಬಂದಾಗ ವೃತ್ತಪತ್ರಿಕೆಯವರು ನಿಮ್ಮನ್ನು ಕೇಳಿದರೆ ನೀವೇನು ಜವಾಬಾಗಿ ಹೇಳಿದ್ದೀರೋ ಅದರಿಂದ ತಿಳಿದಿರುವಮಟ್ಟಿಗೆ, ಅವರು ಲಕ್ಕವಳ್ಳಿ ಸ್ಕೀಮಿಗೆ ಸಹಾಯಮಾಡುವಹಾಗಿದ್ದಾರೆಂದು ಗೊತ್ತಾಗಿದೆಯೇ ಹೊರತು ನಿರ್ದಿಷ್ಟವಾಗಿ ಅವರು ಏನೇನು ಸಲಹೆಗಳನ್ನು ಮಾಡಿದ್ದಾರೆಂಬುದು ಗೊತ್ತಾಗಿಲ್ಲ. ಪ್ರಾಯಶಃ ಅವರು ಕೊಟ್ಟಿರತಕ್ಕ ರಿಪೋರ್ಟಿನ ಪ್ರತಿಯೊಂದು ತಮಗೂ ಬಂದಿರಬಹುದೆಂದು ನಾನು ಭಾವಿಸುತ್ತೇವೆ. ಏಕೆಂದರೆ, ಅವರು ಇಂಡಿಯಾಸರ್ಕಾರದವರಿಗೆ ವರದಿ ಕಳುಹಿಸುವ ಸಂದರ್ಭದಲ್ಲಿ ಅದರ ಪ್ರತಿಯೊಂದನ್ನು ತಮಗೂ ಕಳುಹಿಸಿರಬೇಕು. ಅವರು ಏನೇನು Permanent works ಮಾಡಬೇಕೆಂದು ಸಲಹೆಮಾಡಿದ್ದಾರೆ ಮತ್ತು ಆ ಬಗ್ಗೆ ಏನೇನು ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಶುರುಮಾಡಿದ್ದೀರಿ, ಇಂಡಿಯಾ ಸರ್ಕಾರದವರು ಏನಾದರೂ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸೂಚನೆಮಾಡಿದ್ದರೆ ಆ ಬಗ್ಗೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಯಾವ ರೀತಿ ಮನವಿಮಾಡಿಕೊಂಡಿದ್ದೀರಿ, ಎಂಬ ವಿಷಯಗಳ ಬಗ್ಗೆ ಒಂದು ಖೋತಾ ನಿರ್ಣಯವನ್ನು ನಾನು ಸೂಚನೆಮಾಡಿದ್ದೇನೆ. ಆ ಬಗ್ಗೆ ತಾವು ಜವಾಬುಕೊಡುವಾಗ ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೆ, ನಾನು ಖೋತಾ ನಿರ್ಣಯವನ್ನು ತಂದ ಉದ್ದೇಶ ನೆಲಮಂಗಲ, ದೊಡ್ಡಬಳ್ಳಾಪುರ ಮತ್ತು ಮಾಗಡಿ ತಾಲ್ಲೂಕುಗಳಲ್ಲಿರುವ ಕ್ಷಾಮ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರುವುದು. ದೊಡ್ಡಬಳ್ಳಾಪುರದ ತಾಲ್ಲೂಕಿನ ಸಾಸಲು ಮತ್ತು ಬೆಳವಂಗಲ, ಮಾಗಡಿ ತಾಲ್ಲೂಕಿನ ಸೋಲೂರು

(ಶ್ರೀ ಡಿ. ಎಂ. ಗೋವಿಂದರಾಜು)

ಮತ್ತು ಕುದೂರು ಮತ್ತು ನೆಲಮಂಗಲ ತಾಲ್ಲೂಕು ಪೂರ್ತಿ, ಈ ಪ್ರದೇಶಗಳಲ್ಲಿ ಈ ವರ್ಷ ಮಳೆಯಿಲ್ಲದೆ ರಾಗಿಬೆಳೆ ಎರಡಾಣೆಯಷ್ಟು ಮಾತ್ರ ಆಗಿದೆ. ಬತ್ತದ ಬೆಳೆಗೆ ರೋಗ ಬಂದು ಅರ್ಧಬೆಳೆ ಮಾತ್ರ ಆಗಿದೆ. ಜನರಿಗೂ ಮತ್ತು ದನಗಳಿಗೂ ಬಹಳ ಕಷ್ಟ ಪರಿಸ್ಥಿತಿ ಯೊದಗಿದೆ. ಆದುದರಿಂದ ಈ ತಾಲ್ಲೂಕುಗಳಲ್ಲಿ ಮುಖ್ಯವಾಗಿ ರಿಲೀಫ್ ಕಾಮಗಾರಿಗಳನ್ನು ಕೈಗೊಳ್ಳಬೇಕು. ಕೆರೆಗಳ ರಿಪೇರಿ, ರಸ್ತೆಗಳ ರಿಪೇರಿ ಮುತಾದ ಕೆಲಸಗಳನ್ನು ಈ ವರ್ಷ ಈ ಪ್ರಾಂತಗಳಲ್ಲಿ ನಡೆಸಬೇಕೆಂದು ಒತ್ತಾಯವಾಗಿ ಹೇಳುತ್ತೇನೆ. ಅಲ್ಲದೆ, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನುಗಳು ಮತ್ತು ತಕಾವಿ ಲೋನುಗಳನ್ನು ಅಲ್ಲಿನ ರೈತರಿಗೆ ವಿಶೇಷವಾಗಿ ಕೊಡಬೇಕು. ಈ ಪ್ರದೇಶಗಳಲ್ಲಿ ಎಷ್ಟು ಮಟ್ಟಿನ ಕ್ಷಾಮ ಪರಿಸ್ಥಿತಿಯಿದೆ ಯೆಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಿ, ಕ್ಷಾಮ ನಿವಾರಿಸುವುದಕ್ಕೆ ಹೆಚ್ಚು ಹಣವನ್ನು ಇಲ್ಲಿ ಖರ್ಚು ಮಾಡಬೇಕು. ಗಂಜಿ ಕೇಂದ್ರಗಳನ್ನು ತೆರೆಯಬೇಕು. ಹೆಚ್ಚು ಆಹಾರ ಬೆಳೆಯಲು ಸಾಧಕವಾಗಲು ವ್ಯವಸಾಯಗಾರರಿಗೆ ವ್ಯವಸಾಯದ ಇಲಾಖೆಯಿಂದ ಬೀಜದ ಬತ್ತ, ರಾಗಿ, ಜೋಳ, ಗೊಬ್ಬರ ಮುಂತಾದುವನ್ನು ಕೊಡಿಸಿಕೊಡಬೇಕು. ಕಷ್ಟಕ್ಕೊಳಗಾಗಿರುವವರಿಗೆ ದವಸ, ಹುಲ್ಲುವಗ್ಯೆರೆ ಉಚಿತವಾಗಿ ಕೊಟ್ಟು ಸಹಾಯಮಾಡಬೇಕಾದುದು ಸರ್ಕಾರದ ಕರ್ತವ್ಯವಾಗಿದೆ. ರೆವೆನ್ಯೂ ಮಂತ್ರಿಗಳು ಈ ಪ್ರಾಂತ್ಯಗಳಿಗೆ ಭೇಟಿಕೊಟ್ಟು ಪರಿಶೀಲನೆ ನಡೆಸಬೇಕೆಂದು ಪಾರ್ಥಿಸುತ್ತೇನೆ. ಕಮ್ಯೂನಿಟಿ ಪ್ರಾಜೆಕ್ಟುಗಳನ್ನೆಲ್ಲಾ ಮಲೆನಾಡು ಪ್ರಾಂತಗಳಿಗೆ ಕೊಡುವಂತೆ ಕಾಣುತ್ತದೆ. ಮೈದಾನ ಪ್ರಾಂತಗಳಿಗೂ ಕೊಡಬೇಕಾಗಿ ಪಾರ್ಥಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ನಾನು ಒಂದು ವಿಷಯವನ್ನು ಮಾತ್ರ ಸಭೆಯ ಗಮನಕ್ಕೆ ತರಲು ಖೋತಾ ನಿರ್ಣಯವನ್ನು ತಂದಿದ್ದೇನೆ. ಕ್ಷಾಮ ನಿವಾರಣೆಯ ಬಾಬಿನಲ್ಲಿ ಬಡ್ಜೆಟ್ಟಿನ 128ನೆಯ ಪುಟದಲ್ಲಿ 71,000 ರೂಪಾಯಿಗಳನ್ನು ಕಂಟಿಂಜೆನ್ಸೀಸ್‌ಗಾಗಿ ಒದಗಿಸಲಾಗಿದೆ. ಇಷ್ಟು ದೊಡ್ಡ ಹಣಕ್ಕೆ ವಿವರಗಳೇನೆಂಬುದನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಖೋತಾ ನಿರ್ಣಯ ತಂದಿರುವುದು, ಅದನ್ನು ತಿಳಿಸಬೇಕೆಂದು ಪ್ರಾರ್ಥನೆ.

Mr. CHAIRMAN.—We are discussing only on general demands and not on cut motions.

ಶ್ರೀ ಪಿ. ಆರ್. ರಾಮಯ್ಯ.—ಜನರಲ್ ಡಿಮ್ಯಾಂಡಿನ ಮೇಲೆಯೇ ಮಾತನಾಡುತ್ತಿದ್ದೇನೆ. ಕ್ಷಾಮ ನಿವಾರಣೆಗಾಗಿ ಒದಗಿಸಿರುವ ಹಣ ಜನರಿಗೆ ಕಷ್ಟ ನಿವಾರಣೆಗಾಗಿ ಖರ್ಚಾಗಬೇಕೇ ವಿನಾ ಬೇರೆ ಬಾಬುಗಳಿಗೆ ಖರ್ಚಾಗಬಾರದು. ಕಂಟಿಂಜೆನ್ಸೀಸ್‌ಗೆ ಇಷ್ಟು ಹೆಚ್ಚಿನ ಮೊಬಲಗಿದೆ, ಇದು ಹೇಗೆ ಖರ್ಚಾಗುತ್ತದೆಂಬುದನ್ನು ತಿಳಿಯಬೇಕು.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೇ, ಸಂಸ್ಥಾನದಲ್ಲಿ ಹಿಂದೆಂದೂ ಇಲ್ಲದಿದ್ದಂಥ ಪರಿಸ್ಥಿತಿ ಈ ವರ್ಷ ಬಂದಿದೆಯೆಂಬುದು ಜನರಿಗೆ ಮನವರಿಕೆಯಾಗಿದೆ. ರೈತರು ಹೊಂದಿದ್ದ ಭಯವನ್ನು ನಿವಾರಿಸುವುದಕ್ಕಾಗಿಯೂ ಅವರ ಕಷ್ಟಗಳನ್ನು ಸುಧಾರಿಸುವುದಕ್ಕಾಗಿಯೂ ಕೂಲಿಗಾರರಿಗೆ ಕೆಲಸಗಳನ್ನೊದಗಿಸುವುದಕ್ಕಾಗಿಯೂ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿದ್ದಾರೆ. ಸರಾಸರಿ 20 ರಿಂದ 25 ಅಂಗುಲಕ್ಕಿಂತ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಕ್ಷಾಮ ನಿವಾರಣೆ ಕೆಲಸಗಳನ್ನು ಕೈಗೊಳ್ಳುವುದು ಒಳ್ಳೆಯ ಉದ್ದೇಶ. ಹಿಂದೆ ಕೂಡ ಸಂಸ್ಥಾನದಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿ ಕಂಡುಬರುತ್ತಿತ್ತು. ಆದರೆ ಜನರು ತಮ್ಮಲ್ಲಿ ದಾಸ್ತಾನಿದ್ದ ದವಸವನ್ನು ಉಪಯೋಗಿಸಿಕೊಂಡು ಮಳೆ ಬಂದಾಗ ಕೂಡಿಡುತ್ತಿದ್ದರು. ಕಂಟ್ರೋಲ್ ಜಾರಿಗೆ ಬಂದಮೇಲೆ ರೈತರಲ್ಲಿ ದವಸ ಕಡಿಮೆಯಾಗಿ ಇದ್ದ ದವಸವನ್ನೆಲ್ಲಾ ಹಂಚಿದ್ದರಿಂದ ಕಷ್ಟವಾಯಿತು. ತಮ್ಮಲ್ಲಿ ದವಸ ವಿದ್ದಿದ್ದರೆ ಎಷ್ಟೇ ಮಳೆ ಹೋದರೂ ರೈತರು ಭಯಪಡುತ್ತಿರಲಿಲ್ಲ. ಮಳೆ ಹೋದಾಗ ಭಯಪಡುತ್ತಿದ್ದರೂ ಕೂಡ ಮಳೆ ಬಂದಾಗ ಪರಿಸ್ಥಿತಿ ಸುಧಾರಿಸುತ್ತಿತ್ತು. ಈಗ ಜನರಿಗೆ ಸಹಾಯ ಮಾಡಲು ಸರ್ಕಾರದವರು ಹಣವನ್ನು ಖರ್ಚುಮಾಡುತ್ತಾರೆ. ಈ ಸಂಬಂಧವಾಗಿ ಹಳ್ಳಿಗಳಲ್ಲಿ ಎಲ್ಲೆಲ್ಲಿ ಚಾಪೆ ನೇಯುವುದು, ಬಟ್ಟೆ ನೇಯುವುದು, ಊದುಬತ್ತಿ ತಯಾರಿಸುವುದು, ಪಿಂಗಾಣಿ ಸಾಮಾನು ತಯಾರಿಸುವುದು ಮುಂತಾದ ಸಣ್ಣ ಕೈಗಾರಿಕೆಗಳಿಗೆ ಅನುಕೂಲವಿದೆಯೋ ಅವನ್ನು ಏರ್ಪಾಡುಮಾಡಿ ಅಲ್ಲಿನ ಜನರನ್ನು ಉಪಯೋಗಿಸಿಕೊಳ್ಳಬೇಕು. ರೈತರಿಗೆ ವರ್ಷದಲ್ಲಿ ಮೂರು, ನಾಲ್ಕು ಅಥವಾ ಐದು ತಿಂಗಳ ಕಾಲ ಕೆಲಸವಿರುತ್ತದೆ; ಬಾಕಿ ಕಾಲದಲ್ಲಿ ಇರುವುದಿಲ್ಲ. ಆದಕಾರಣ ಇಂಥ ಕೆಲಸಗಳನ್ನು ಅವರಿಗೆ ಒದಗಿಸಿದರೆ, ಇದರಿಂದ ಖಾಯಂ ಆಗಿ ಕ್ಷಾಮ ನಿವಾರಣೆಯಾಗುತ್ತದೆ. ಸರ್ಕಾರದವರು ವಿದ್ಯುಚ್ಛಕ್ತಿ ಕೊಟ್ಟರೂ ಬಾವಿಯಲ್ಲಿ ನೀರೇ ಇಲ್ಲದೇಯಿರಬಹುದು. ಆದುದರಿಂದ ಸರ್ಕಾರದವರು ಎರಡು ಕಡೆಗೂ ಗಮನ ಕೊಡಬೇಕು. ನೀರಿನ ಅನುಕೂಲ ಎಲ್ಲೆಲ್ಲಿ ಇರುವುದಿಲ್ಲವೋ ಅಂಥ ಕಡೆ ಈ ಸಣ್ಣ ಗೃಹ ಕೈಗಾರಿಕೆಗಳ ಕಡೆ ಗಮನಕೊಡಬೇಕು. ಈ ಸಾರಿ ಕ್ಷಾಮ ಪರಿಸ್ಥಿತಿಯಲ್ಲಿ ಜನರ ಕಷ್ಟವನ್ನು ನಿವಾರಣೆ ಮಾಡಿದ್ದಾರೆಂಬುದು ಜನರಿಗೆ ಮನವರಿಕೆಯಾಗಿದೆ. ಅನೇಕ ಕಡೆ ಮುಂದಿನ ಸಾಲಿನಲ್ಲಿ ಬತ್ತನೆ ಮಾಡತಕ್ಕ ತರೀ ಜಮೀನುಗಳಲ್ಲಿ ಬಿತ್ತನೆಮಾಡಲು ಅವಕಾಶವಿಲ್ಲದಂತಾಗಿದೆ. ಏಕೆಂದರೆ, ಎರಡು ವರ್ಷಗಳ ಹಿಂದೆ ವ್ಯವಸಾಯದ ಇಲಾಖೆಯವರು ಬೀಜಕ್ಕಾಗಿ ಸಾಲವಾಗಿ ಕೊಟ್ಟ ಬತ್ತವನ್ನು ವಸೂಲು ಮಾಡುತ್ತಿದ್ದಾರೆ. ರೈತರಿಗೆ ಬಿತ್ತನೆ ಮಾಡಲು ಬತ್ತವಿಲ್ಲದೆ ತೊಂದರೆಯಾಗಿದೆ. ಈಗ ತಕಾವಿ ಸಾಲಗಳನ್ನು ಕೊಡುವುದೆಂದರೆ ಕಷ್ಟವಾಗುತ್ತದೆ. ಆದುದರಿಂದ ಇಂಥ ಸ್ಥಳಗಳಲ್ಲಿ ರೈತರಿಗೆ ವ್ಯವಸಾಯ ಮಾಡಲು ಬೀಜದ ಬತ್ತವನ್ನೊದಗಿಸಿ ಮುಂದಿನ ಸುಗ್ಗಿಯಲ್ಲಿ ಅವರಿಂದ ವಾಪಸು ಪಡೆಯುವುದಕ್ಕೆ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ನಮ್ಮ ಸಂಸ್ಥಾನದ ಕೆಲವು ಭಾಗಗಳಲ್ಲಿ ಜನರು ಕ್ಷಾಮ ಪರಿಸ್ಥಿತಿಯ ಕಷ್ಟ ಪರಂಪರೆಗಳನ್ನನುಭವಿಸಿದ್ದಾಯಿತು. ಕ್ಷಾಮ ನಮ್ಮ ತಾಲ್ಲೂಕಿಗೆ ಬರಲಿ ಎಂದು ಯಾರಿಗೂ ಆಸೆಯಿರುವುದಿಲ್ಲ. ಆದರೆ ಪ್ರಕೃತಿನಿಯಮದ ದೆಶೆಯಿಂದ ಈ ವರ್ಷ ನೆಲಮಂಗಲದ ತಾಲ್ಲೂಕಿನ ಬಹುಭಾಗ, ಮಾಗಡಿ ತಾಲ್ಲೂಕಿನ ಕೆಲವು ಭಾಗ ಮತ್ತು ದೊಡ್ಡಬಳ್ಳಾಪುರದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿಯ ಬೆಳೆ ಬಹಳ ಕಡಮೆಯಾಗಿದೆ. ಸರಾಸರಿ ನಾಲ್ಕಾಣೆ ಬೆಳೆಯೂ ಆಗಿಲ್ಲ. ಬತ್ತದ ಬೆಳೆ ಅನೇಕ ಕಡೆ ಸುಮಾರು ಅರ್ಧಭಾಗ ಆಗಿದೆ. ಈಸಾರಿ ಸರ್ಕಾರದವರು ನೆಲ

ಮಂಗಲದ ತಾಲ್ಲೂಕಿನ ಕಡೆ ಹೆಚ್ಚುಗಮನ ಕೊಡಬೇಕಾದುದು ಅವಶ್ಯಕ. ಸರ್ಕಾರದ ನಾನಾ ಇಲಾಖೆಗಳ ಮೂಲಕ, ಮಾಡತಕ್ಕ ಏರ್ಪಾಡುಗಳ ಜೊತೆಗೆ, ಮುಖ್ಯ ಮಂತ್ರಿಗಳ ಕ್ಷಾಮನಿವಾರಣಾ ನಿಧಿಯೊಂದಿದೆ, ಇದು ಬೆಳೆಯುತ್ತಿದೆ; ಖರ್ಚಾಗುತ್ತಲೂ ಇದೆ; ಈ ನಿಧಿಯಿಂದ ಒಂದು ನಿರ್ದಿಷ್ಟವಾದ ಭಾಗವನ್ನು ನೆಲಮಂಗಲದ ಕ್ಷಾಮಪೀಡಿತ ಪ್ರದೇಶಕ್ಕೆ ಖರ್ಚು ಮಾಡಬೇಕೆಂದು ಸಲಹೆಯನ್ನು ನೀಡುತ್ತಿದ್ದೇನೆ. ಅಲ್ಲದೆ ಸಂಬಂಧಪಟ್ಟ ಮಂತ್ರಿಗಳು ಕ್ಷಾಮ ಪರಿಸ್ಥಿತಿಯಿಂದ ನರಳುತ್ತಿರುವ ಪ್ರದೇಶಗಳ ಜನರ ಕೂಗು ಬಂದಮೇಲೆ ಅಲ್ಲಿ ಪ್ರವಾಸ ಮಾಡುವುದಕ್ಕೆ ಬದಲು, ಮುಂಚಿತವಾಗಿಯೇ ಈ ಕಷ್ಟ ಪರಿಸ್ಥಿತಿ ಎಲ್ಲೆಲ್ಲಿದೆಯೆಂಬುದನ್ನರಿತು, ಅಲ್ಲಿ ಪ್ರವಾಸವನ್ನು ಕೈಕೊಂಡು, ತಕ್ಕ ಕಾರ್ಯಕ್ರಮದ ಪಟ್ಟಿಯನ್ನು ತಯಾರು ಮಾಡಿಕೊಂಡು, ನಿವಾರಣೆ ಕೆಲಸಗಳಿಗೆ ಮೊದಲೇ ಏರ್ಪಾಡು ಮಾಡಬೇಕು. ಬೇಸಾಯದ ಇಲಾಖೆ, ಪಬ್ಲಿಕ್ ವರ್ಕ್ಸ್ ಇಲಾಖೆಗಳ ಮೂಲಕ ಕ್ಷಾಮ ಪರಿಸ್ಥಿತಿಯಿರುವ ಪ್ರದೇಶಗಳಲ್ಲಿ ಯಾವ ಯಾವ ಕಾರ್ಯಗಳನ್ನು ಕೈಕೊಳ್ಳಬಹುದೆಂದು ಪಟ್ಟಿಯನ್ನು ತಯಾರು ಮಾಡಿಸಬೇಕು. ಈ ಪ್ರಾಂತಕ್ಕೆ ಹೆಚ್ಚಿನ ಗ್ರಾಂಟನ್ನೊದಗಿಸಬೇಕಾದ ಪ್ರಮೇಯವಿದೆ. ನೆಲಮಂಗಲ ಪ್ರಾಂತ್ಯದ ಕೆಲವೆಡೆಗಳಲ್ಲಿ ಹೆಚ್ಚು ಕ್ಷಾಮ ಪರಿಸ್ಥಿತಿಯಿರುವುದರಿಂದ ಶೀಘ್ರವಾಗಿ ಒಂದು ಯೋಜನೆಯನ್ನು ತಯಾರುಮಾಡಿಕೊಂಡು ಸಂಬಂಧಪಟ್ಟ ಇಲಾಖೆಗಳು ತಮ್ಮ ತಮ್ಮ ಕಾರ್ಯಗಳನ್ನು ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಮುಖ್ಯವಾಗಿ ಕೆರೆಗಳ ಜೀರ್ಣೋದ್ಧಾರ ಕೆಲಸಗಳನ್ನು ತೆಗೆದುಕೊಂಡು ಸ್ಥಳೀಯ ಕೂಲಿಯವರಿಂದಲೇ ಕೆಲಸಮಾಡಿಸಿ, ಅಂಥ ಕಡೆ ಸಾಧ್ಯವಾದರೆ ದವಸವನ್ನು ಒದಗಿಸಿ, ಜನರಿಗೆ ಹೆಚ್ಚಿನ ಸೌಕರ್ಯಗಳನ್ನೊದಗಿಸಬೇಕಾಗಿ ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮಾರಾಟ ಮತ್ತು ಶಾಖೆಗಳ ಮಂತ್ರಿಗಳು).—ಸ್ವಾಮಿ ಕ್ಷಾಮ ನಿವಾರಣೆ ಕಾರ್ಯಕ್ರಮವನ್ನು ಆಯಾ ಪ್ರದೇಶದ ಕ್ಷಾಮ ಪರಿಸ್ಥಿತಿಯ ಮೇಲೆ ಕೈಗೊಳ್ಳಲಾಗುತ್ತಿದೆ. ಕೆಲವು ಸದಸ್ಯರು ಮಾತನಾಡಿದುದನ್ನು ನೋಡಿದರೆ ಕ್ಷಾಮ ನಿವಾರಣೆ ನಿಧಿಯಲ್ಲಿ ದಾಮಾಷಾ ಪ್ರಕಾರ ತಾಲ್ಲೂಕುಗಳಿಗೆ ಹಂಚಬೇಕೋ ಏನೋ ಎಂಬ ರೀತಿಯಲ್ಲಿ ಕ್ಷಾಮವನ್ನು ಸ್ವಾಗತಿಸುವ ರೀತಿಯಲ್ಲಿ ಮಾತನಾಡಿದಂತೆ ಕಾಣುತ್ತದೆ. ಎಲ್ಲೆಲ್ಲಿ ಎಷ್ಟೆಷ್ಟು ಹಣ ಅವಶ್ಯಕವೆಂಬುದನ್ನು ಸ್ಥಳೀಯ ಅಧಿಕಾರಿಗಳ ವರದಿಯನ್ನು ತರಿಸಿಕೊಂಡು ಅವರ ಅಭಿಪ್ರಾಯದ ಮೇಲೂ, ಮತ್ತು ಸ್ಥಳೀಯ ಶಾಸನ ಸಭಾಸದಸ್ಯರ ಅಭಿಪ್ರಾಯದ ಮೇಲೂ ಹಣವನ್ನು ಖರ್ಚುಮಾಡಲಾಗುತ್ತಿದೆ. ಮೈಸೂರು ಜಿಲ್ಲೆಗೆ ಏನೂ ಒದಗಿಸಲಿಲ್ಲ ಎಂಬ ಅರ್ಥ ಬರುವ ರೀತಿಯಲ್ಲಿ ಶ್ರೀ ಶಿವರುದ್ರಪ್ಪನವರು ಭಾಷಣಮಾಡಿದರು. ಮೈಸೂರು ಜಿಲ್ಲೆಗೆ ರೆವೆನ್ಯೂ ಏಜೆನ್ಸಿಯ ಮೂಲಕ ಕ್ಷಾಮ ಪರಿಹಾರದ ಬಗ್ಗೆ 59,000 ರೂಪಾಯಿಗಳನ್ನು ಒದಗಿಸಲಾಗಿತ್ತು; ಅಸ್ಸಾಂ ರಿಲೀಫ್ ಫಂಡಿನಿಂದ $2\frac{1}{2}$ ಸಾವಿರ ರೂಪಾಯಿ, ಗ್ರೋಮೋರ್ ಫುಡ್‌ನಿಂದ 3,32,700 ರೂಪಾಯಿಗಳನ್ನು ಒದಗಿಸಲಾಗಿತ್ತು, ರೆಡ್‌ಕ್ರಾಸ್ ಸಂಸ್ಥೆಯಿಂದ 13,000 ರೂಪಾಯಿಗಳನ್ನು ಒದಗಿಸಲಾಗಿತ್ತು, ಇದಲ್ಲದೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ 15,000, ತಕಾವಿ ಲೋನ್ 55,000 ಸಬ್‌ಸಿಡಿ 35,000 ರೂಪಾಯಿಗಳನ್ನು ಒದಗಿಸಿದ್ದೇವೆ. ಇದಲ್ಲದೆ ರೆಮಿಷನ್ ಕೂಡ ಕೊಟ್ಟಿದ್ದೇವೆ, ಅದಕ್ಕೆ ಸಂಬಂಧಪಟ್ಟ ಅಂಕಿಅಂಶಗಳು ಈಗ ನನ್ನಲ್ಲಿಲ್ಲ. ಆ ಜಿಲ್ಲೆಗೆ ಇಷ್ಟು ಹಣಕೊಟ್ಟಿದ್ದೇವೆ ಇದನ್ನು ಯಾವ ರೀತಿಖರ್ಚು ಮಾಡಬೇಕೆಂಬುದನ್ನು, ನಿರ್ಧರಿಸಲು ಸ್ಥಳೀಯ ಅಧಿಕಾರಗಳೂ ಶಾಸನಸಭಾ ಸದಸ್ಯರೂ ಇರುವ ಸಮಿತಿ ಇದೆ, ಅದು ನಿರ್ಧರಮಾಡಬೇಕು. ಅವರ ಶಿಫಾರಸಿನ ಮೇಲೆ ಖರ್ಚುಮಾಡುತ್ತಿದ್ದಾರೆ. ಗುಂಡ್ಲುಪೇಟೆ ತಾಲ್ಲೂಕಿಗೆ ಎಷ್ಟು ಖರ್ಚುಮಾಡಿದೆ ಎಂಬ ಬಗ್ಗೆ ಅಂಕಿ ಅಂಶಗಳು ಈಗ ನನ್ನಲ್ಲಿಲ್ಲ. ನೀರಾವರಿ ಕಾಮಗಾರಿಗಳು, ಎಂದರೆ ಮುಖ್ಯವಾಗಿ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಖರ್ಚುಮಾಡಿದೆ. ಆಮೇಲೆ ಬೇಕಾದರೆ ಗುಂಡ್ಲುಪೇಟೆ ತಾಲ್ಲೂಕಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಕೊಡುತ್ತೇನೆ. ಒಂದಂಶವನ್ನು ಸದಸ್ಯರ ಗಮನಕ್ಕೆ ತಂದುಕೊಡಿಸುತ್ತೇನೆ. ಕೋಲಾರ, ತುಮಕೂರು ಜಿಲ್ಲೆಗಳ ಪ್ರದೇಶಗಳಲ್ಲಿರುವ ಅಭಾವಕ್ಕೂ ಮೈಸೂರು ಜಿಲ್ಲೆಯಲ್ಲಿರುವ ಅಭಾವಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅಲ್ಲಿ ಮಾಡಿದ್ದೀರಿ, ಆದ್ದರಿಂದ ನಮ್ಮ ಜಿಲ್ಲೆಗೂ ಖರ್ಚು ಮಾಡಿ ಎಂದು ಕೇಳಿದರೆ ಆ ವಾದ ಅರ್ಥವಾಗುವುದಿಲ್ಲ.

ಶ್ರೀಗಳಾದ ಗೋವಿಂದರಾಜು ಮತ್ತು ಪ್ರಭಾಕರ್ ಅವರು ಮಂತ್ರಿಗಳು ಮುಂಚಿತವಾಗಿ ಆ ಪ್ರದೇಶಗಳಲ್ಲಿ ಪ್ರವಾಸಮಾಡಬೇಕೆಂದು ಹೇಳಿದರು. ಕೆಲವು ಸದಸ್ಯರು ಮಂತ್ರಿಗಳು ಪ್ರವಾಸಮಾಡಿ ಹಣಮಾಡಬೇಕೆಂಬ ಉದ್ದೇಶವುಳ್ಳವರಾಗಿದ್ದಾರೋ ಏನೋ ಎಂಬ ರೀತಿಯಲ್ಲಿ ಪ್ರಶ್ನೆಗಳನ್ನು ಕಳುಹಿಸುತ್ತಾರೆ. ಆದರೂ ಈ ಮಾನ್ಯ ಸಭೆಯಲ್ಲಿ ನನ್ನನ್ನು ಪ್ರವಾಸಮಾಡಲಿಲ್ಲವೆಂದು ಆಕ್ಷೇಪಣೆಮಾಡುವವರೇ ಜಾಸ್ತಿಯಿದ್ದಾರೆ. ಈ ಹೊತ್ತು ತುಮಕೂರು ಜಿಲ್ಲೆಯಿಂದ ಬಂದಿರತಕ್ಕ ಸದಸ್ಯರು ನನ್ನನ್ನು ಅವರ ಜಿಲ್ಲೆಯಲ್ಲಿ ಪ್ರವಾಸಮಾಡುವುದಿಲ್ಲವೆಂದು ಆಕ್ಷೇಪಣೆಮಾಡಿದರು. ಈ ಸಭೆಯಲ್ಲಿ ಐದಾರು ಜನರು ವಿನ ಮಿಕ್ಕವರು ಅವರವರ ಜಿಲ್ಲೆಗಳಲ್ಲಿ ನಾನು ಪ್ರವಾಸಮಾಡುವುದಿಲ್ಲವೆಂದು ನನ್ನನ್ನು ಆಕ್ಷೇಪಣೆಮಾಡಿದರು. ಐದಾರು ಜನರ ವಿನಾ ಮಿಕ್ಕವರು ಪ್ರವಾಸಮಾಡಬೇಕೆಂದು ಪದೇ ಪದೇ ನನಗೆ ಕಷ್ಟಕೊಡುತ್ತಿದ್ದಾರೆ. ಸಾಮಾನ್ಯವಾಗಿ ಹೇಳುವುದಾದರೆ, ಕ್ಷಾಮ ಪರಿಹಾರಕ್ಕಾಗಿ ಮೈಸೂರು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳು ತೃಪ್ತಿಕರವಾಗಿವೆಯೆಂದು ಧೈರ್ಯವಾಗಿ ಹೇಳುತ್ತೇನೆ. ಈಗ ನಮಗಿರುವ ಹಣದ ಅಭಾವ ಪರಿಸ್ಥಿತಿಯಲ್ಲಿ ಶಕ್ತಿಮೀರಿ ಕ್ಷಾಮ ನಿವಾರಣೆಯ ಕೆಲಸ ಮಾಡುತ್ತಿದ್ದೇವೆ. ಇದಕ್ಕೆ ಸರ್ಕಾರದ ಮೇಲೆ ಅಸಮಾಧಾನವನ್ನು ಸೂಚಿಸುವುದು ಸಾಧುವಲ್ಲ, ಸೂಕ್ತವಲ್ಲ ಎಂದು ವಿನಂತಿಮಾಡಿಕೊಳ್ಳುತ್ತೇನೆ.

3 P.M.

Mr. CHAIRMAN.—The question is :

"That a sum not exceeding Rs. 30,00,000 be granted to the Government to defray the charges which will come in course of payment during the year ending 31st day of March 1954, in respect of 'Famine Relief'."

The motion was adopted.

Mr. CHAIRMAN.—The House will now rise for Lunch and meet at 3-30 P.M.

The House adjourned for Lunch at One Minute past Three of the Clock and re-assembled at Thirty Minutes past Three of the Clock.

[MR. SPEAKER in the Chair.]

Sri Kadidal MANJAPPA (Minister for Revenue and Public Works).—To-morrow we will meet in the morning and so far as the break in the middle is concerned, we will submit to-morrow.

Mr. SPEAKER.—Tomorrow we meet from 8-30 A.M. to 12-30 P.M. and Sunday also ?

Sri Kadidal MANJAPPA.—Yes.

Mr. SPEAKER.—So it is understood that the House will meet tomorrow and the day after tomorrow in the morning.

HON'BLE MEMBERS.—Yes.

DEMAND No. 35—EXTRA-ORDINARY CHARGES.

63. EXTRAORDINARY CHARGES.

Mr. SPEAKER.—Motion moved :

"That a sum not exceeding Rs. 38,40,000 be granted to the Government to defray the charges which will come in course of payment during the year ending 31st day of March 1954, in respect of 'Extraordinary Charges'."

Up to 4-30 P.M. Demand No. 35 will continue and between 4-30 P.M. and 5 P.M. Demand No. 35-A will be taken up.

Sri H. SIDDAVEERAPPA (Minister for Home Affairs and Industries).—Sir, I wish to offer a few words while speaking on this demand. As the House is aware, I made a detailed survey of the working of the Food Department with particular reference to the food position in the State when I spoke in October 1952 and I will confine myself only to the happenings subsequent to October 1952 while speaking on this demand.

As the House is aware, in November 1952, Government passed an order for the decontrol of millets and also for the revision of the policy with regard to the acquisition of paddy and the Paddy Acquisition Harvest Order was promulgated on 17th November 1952. In pursuance of this Order, this year, we have procured 12,61,077 pallas of paddy as against the total acquisition last year of 16,47,632 pallas. The Central Government issued the Food Grains Licensing and Procurement Order, 1952 on 25th November 1952 which has become law in the State. Steps have been taken to implement the provisions of that Act.

With regard to production in the State, I would like to give a few salient figures for the consideration of this Hon'ble House. It will be seen from these figures that there is a steep fall in the production of food grains in the State due to reasons well-known to this Hon'ble House.

In 1952-53 the production figures are 37,06,951 pallas of paddy and 22,05,105 pallas of millets.

In 1951-52 the production figures are 46,95,981 pallas of paddy and 29,32,178 pallas of millets.

In 1950-51 the production figures are 50,46,580 pallas of paddy and 50,53,137 pallas of millets.

In pursuance of this very low production in the State due to adverse seasonal conditions, we fixed the import target at 180,000 tons out of which 20,000 tons would form rice and 40,000 tons wheat and 1,20,000 tons millets. In pursuance of the programme of this import policy, the Government of India have been supplying us grains. Up-to-date 42,331 tons of grains have been allotted out of which 20,831 tons are millets and 11,000 tons wheat and we have so far received 27,776 tons and the balance is moving. So far as wheat position is concerned we have got enough stock which, due to the present low offtake, is likely to last for nearly four to five months. We have informed the Government of India that so far as wheat is concerned, they may as well stop sending us fur-

ther allotment for one or two months. Very recently, just a few days ago, I received a communication from the Government of India that they have allotted 30,000 maunds of broken rice from Orissa along with the other quantities of rice that has been allotted to us and they have also allotted about 5,000 tons of ragi from Orissa, out of which nearly 1,500 tons are already moving. Whatever ragi is available that has been totally allotted to Mysore and they have allotted 8,000 tons of imported milo during this month.

So far as the revision of food prices is concerned, I have already discussed the subject on a previous occassion when I spoke during general discussion of the Budget and I do not think it is necessary to dilate on it any longer.

I would like to mention one other point with regard to the present offtake in the State.

In the month of December 1952, the offtake was 76,200 pallas of rice, 47,140 pallas of wheat, 63,430 pallas of millets, in all 1,86,770 pallas; in June the offtake was 66,330 pallas of rice, 34,830 pallas of wheat, 41,630 pallas of millets, in all 1,42,790 pallas; in February the offtake was 54,110 pallas of rice, 31,530 pallas of wheat, 25,240 pallas of millets, in all 1,10,880 pallas; in March up to 21st the off-take was 36,680 pallas of rice, 21,590 pallas of wheat, 14,770 pallas of millets.

This decline is due to the decontrol policy of the State and also due to the reason that there is local availability of the grains more or less for the same price as in the ration depots or fair price depots. Sugar has been totally decontrolled from this month. We have been watching the situation as to how far this complete decontrol policy in regard to sugar has been beneficial or otherwise to the consumers, and we will be keeping a close watch with regard to price trends in the open market.

With regard to stock position as it stands on 26th March 1953 is as follows:—

Rice	..	6,58,177 pallas.
Millets	..	1,13,343 „
Wheat	..	1,39,717 „

In all 9,11,237 pallas of grains are available as against 99,842 pallas on corresponding date of the previous year. Even this year, it will be seen from the figures that we have to spend 15.5 lakhs for the subsidy of food grains apart from the establishment charges. This is the position so far as the present stock is concerned.

With regard to other matters, I have already made my position quite clear to this Hon'ble House. The matter is under correspondence with the Government of India and we have been bringing to their notice the feeling in the country with regard to the present issue prices of foodgrains and in the light of the correspondence that is taking place, Government will have to come to a decision.

In spite of the decontrolled economy, we have to-day 769 urban depots, 1,009 rural depots and in all we are having 1,778 sales depots in the State.

All told, the Hon'ble Members will kindly find that the Food Department, in spite of the very adverse seasonal conditions, has been, to the best of its abilities, discharging its duties to the satisfaction of the people.

Sir, I thank you.

Sri K. PATTABHIRAMAN (Kolar).—I want clarification from the Hon'ble Minister. Just to-day there is an announcement that the Union Food Miniter makes a declaration that, this year import of food grains, particularly rice, will be stopped. Against that background, how do these figures work out and how is the position envisaged as at present stands?

Sri H. SIDDAVEERAPPA.—So far as the rice position is concerned, I may assure the Hon'ble House that there is no alarming situation. It is

(SRI H. SIDDAVEERAPPA.)

for this reason. Apart from the local requirements, the Government of India have allotted to us 6,000 tons of rice from Coorg and about 5,000 tons of rice from Orissa out of which 3,000 tons from Coorg have almost come to us and by the end of this month they will give us the quantity that has been allotted to us.

And what is more, I am very glad to say that our friendly neighbouring State of Coorg has been trying to give something more than what has been allotted to us in view of the special request made by this Government to spare whatever grain is available with them. I had an assurance from the Chief Minister of Coorg the other day on telephone that they would send us positively 500 tons more and try to send 1,000 tons more. So far as Orissa rice is concerned, the price also is rather favourable to us and they have been sending rice according to the quota that has been allotted and I have been trying to get something more than what has already been given to us, and so far as rice is concerned, I may assure the Hon'ble House that the position need not cause us any alarm. The only point is with regard to millets. With regard to millets, I mostly depend upon the grain that is made available to me either from imported grain or from the grain that is locally available, that is in India, and the three States from which I have been getting millets are, Madhya Pradesh, Madhya Bharat and Hyderabad. In Madhya Bharat they allotted to us 7,000 tons. Most of it has moved and the other day when the Chief Minister and the Food Minister of Madhya Bharat were here, I made a special request that something more might be given to Mysore. They were good enough to promise that they would do their best and this is the position so far as rice is concerned and the Government of India say that we would do well to depend more on wheat for the simple reason, they feel, that the international market for wheat is much better than for millet.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ):- ಅಧ್ಯಕ್ಷರೆ, ಈಗ ತಾನೆ ಮಾನ್ಯ ಆಹಾರ ಮಂತ್ರಿಗಳು ಆಹಾರದ ಇಲಾಖೆಯ ವಿಚಾರವಾಗಿ ಚೆನ್ನಾಗಿ ವಿವರಣೆ ಕೊಟ್ಟಿದ್ದಾರೆ. ಅವರ ವಿವರಣೆಯಲ್ಲಿ ನಮ್ಮಲ್ಲಿ ಈಗ ಎಷ್ಟು ಧಾನ್ಯವಿದೆ, ಎಷ್ಟು ಬೇಕು ಎಂಬುದನ್ನೆಲ್ಲಾ ವಿಶದವಾಗಿ ತಿಳಿಸಿದ್ದಾರೆ. ಆಹಾರದ ಇಲಾಖೆ ಬಹಳ ಚೆನ್ನಾಗಿ ಕಷ್ಟಪಟ್ಟು ಕೆಲಸಮಾಡುತ್ತಿದೆಯೆಂದು ಕೇಳಿ ನಮಗೆ ನಿಜವಾಗಿಯೂ ಸಂತೋಷವಾಗಿದೆ.

ಆದರೆ ಜನಗಳಿಗಿರುವ ಒಂದು ಕುಂದು, ಕೊರತೆಯೇನೆಂದರೆ ಧಾನ್ಯಗಳ ಬೆಲೆಯನ್ನು ಹೆಚ್ಚಿಸಿರುವ ವಿಚಾರ. ಇದನ್ನೇ ನಾನು ನನ್ನ ಕತ್ತರಿ ನಿರ್ಣಯದ ಮೂಲಕ ಈ ಸಭೆಯ ಹಾಗೂ ಸರ್ಕಾರದವರ ಗಮನಕ್ಕೆ ತರುವವನಾಗಿದ್ದೇನೆ.

ಮೊದಲನೆಯದಾಗಿ ನಾವು ಒಂದು ತಿಳಿದುಕೊಳ್ಳಬೇಕು. ನಮ್ಮ ಸಂಸ್ಥಾನ ಒಂದು 'welfare State' ಎಂಬುದನ್ನು. ಇದೇ ವಿಚಾರವನ್ನೆತ್ತಿ ಮಾ॥ ರಾ॥ ಮ್ಯಾಥ್ಯೂರವರು ಶಾಸನ ಸಭಾ ಸದಸ್ಯರನ್ನುದ್ದೇಶಿಸಿ ಭಾಷಣಮಾಡುತ್ತಾ ಒಂದು ಮಾತು ಬಹಳ ಚೆನ್ನಾಗಿ ಹೇಳಿದ್ದಾರೆ. ಸಿಲೋನಿನ ಉದಾಹರಣೆಯನ್ನು ಕೊಡುತ್ತ ಅವರು ಹೇಗೆ ಧಾನ್ಯಗಳನ್ನು ಒಂದಕ್ಕೆ ಮೂರರಷ್ಟು ಬೆಲೆ ಕೊಟ್ಟು ತಂದರೂ ಬಡಜನರ ಹಿತದೃಷ್ಟಿಯಿಂದ, ಹೇಗೆ ಬೆಲೆಯನ್ನು ತಗ್ಗಿಸಿ ಜನರಿಗೆ ಹಂಚುತ್ತಿದ್ದಾರೆಂದು ಹೇಳಿ, ಇದು ಎಲ್ಲ ಜನಾನುರಾಗ ಸರ್ಕಾರಗಳ ಧ್ಯೇಯವಾಗಿರಬೇಕೆಂದು ತಿಳಿಸಿದ್ದಾರೆ. ಆದ್ದರಿಂದ 'Service at cost' ಎನ್ನುವ ನೀತಿ ಸರ್ಕಾರದ ನೀತಿಯಲ್ಲ, ವರ್ತಕನ ನೀತಿ. ವರ್ತಕರು ಕೆಲವು ಸಾಮಾನುಗಳನ್ನು ಅಸಲಿಗೇ ಮಾರುತ್ತಾನೆ, ಇನ್ನು ಕೆಲವನ್ನು ಲಾಭವಿಟ್ಟು ಮಾರುತ್ತಾನೆ ಹೀಗೆಲ್ಲಾ, ಅಸಲು, ಲಾಭನಷ್ಟ ಲೆಕ್ಕಹಾಕಿಕೊಂಡು ಹೋಗುವುದು ವ್ಯಾಪಾರಿಯ ಮನೋಧರ್ಮ. ಸರ್ಕಾರದ ದೃಷ್ಟಿ ಲಾಭನಷ್ಟದ ದೃಷ್ಟಿಯಲ್ಲ; ಪ್ರಜಾಹಿತದ ಕಡೆಗೆ ಅವರ ದೃಷ್ಟಿಯಿರಬೇಕು. ಈ ಕಷ್ಟ ಕಾಲದಲ್ಲಿ ಬಡಜನರು, ಸಾಮಾನ್ಯ ಜನರು ಎಲ್ಲರೂ ಉಳಿದುಕೊಳ್ಳುವಂತೆ ಮಾಡಬೇಕಾದದ್ದು ಧರ್ಮ. ಇದಕ್ಕಾಗಿ ಬೆಲೆ ಏರುವುದನ್ನು ಇಳಿಸಿ ಸಾಮಾನ್ಯ ಜನರಿಗೂ ಬಡಜನರಿಗೂ ಎಲ್ಲರಿಗೂ ಆಹಾರವನ್ನು ಕೊಳ್ಳಲು ಸಾಧ್ಯವಾಗುವಂತೆ ಮಾಡಬೇಕಾದದ್ದು ಸರ್ಕಾರದ ಮುಖ್ಯ ಕರ್ತವ್ಯ. ಕೋಲಾರದ ಜಿಲ್ಲೆಯಲ್ಲಿ ಈಗಿನ ಕ್ಷಾಮದ ಪರಿಸ್ಥಿತಿಯಲ್ಲಿ 'Service at cost' ಎಂಬ ನೀತಿಯನ್ನಿಟ್ಟುಕೊಂಡರೆ ಅನೇಕರು ಸತ್ತೇ ಹೋಗಬಹುದು. ಒಬ್ಬರನ್ನೂ ಕೂಡ ಹಾಗೆ ಸಾಯುವ ಕಷ್ಟಕ್ಕೆ ಈಡುಮಾಡಬಾರದು; ಎಲ್ಲರೂ ಬದುಕಿಕೊಳ್ಳಬೇಕು, ಎಲ್ಲರೂ ಸುಖವಾಗಿರಬೇಕು ಎಂಬುದೇ ಸರ್ಕಾರದ ಕಾರ್ಯನೀತಿಯಾಗಿರಬೇಕು. ಹಾಗಿಲ್ಲದೆ ನಾವು ಯಾವ ರೀತಿ ಕೊಂಡುಕೊಳ್ಳುತ್ತೇವೊ ಅದೇ ರೀತಿ ಮಾರುತ್ತೇವೆ ಎನ್ನುವ ಹಾಗಿದ್ದರೆ, ಇದೆಲ್ಲವನ್ನೂ ವರ್ತಕರಿಗೆ ಬಿಟ್ಟುಬಿಡಬಹುದು.

ಒಬ್ಬ ಸದಸ್ಯರು.—ಇದಕ್ಕೆಲ್ಲಾ ದುಡ್ಡು ಎಲ್ಲಿಂದ ತರಬೇಕು?

ಶ್ರೀ ಆರ್. ಅನಂತರಾಮನ್.- ಸಾಲ ತೆಗೆದಾದರೂ ಮಾಡಬೇಕು. ಸಾಮಾನ್ಯ ವರ್ತಕನಂತೆ ಹಣ ನಷ್ಟವಾಗುತ್ತದೆ, ನಾಳೆ ಏನುಮಾಡಬೇಕು ಎಂದು ಯೋಚನೆಮಾಡಕೂಡದು. ಸರ್ಕಾರ ಯಾವಾಗಲೂ ಜನರ ಸುಖ ನೋಡಬೇಕು. ಸಾಮಾನ್ಯ ಜನರು, ಬಡಜನರು ಸುಖವಾಗಿದ್ದಾರೆಯೆ ಅಥವಾ ಕಷ್ಟದಲ್ಲಿದ್ದಾ

ರೆಯೆ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ತಮ್ಮ ಕಾರ್ಯನೀತಿಯನ್ನು ಅಳವಡಿಸಿಕೊಳ್ಳಬೇಕಾದುದು ಅವರ ಮುಖ್ಯ ಕರ್ತವ್ಯ.

ಮೊದಲು ಆಹಾರ ಮಂತ್ರಿಗಳು ಅಧಿಕಾರಕ್ಕೆ ಬಂದ ಕೂಡಲೇ ಆಹಾರ ನೀತಿಯನ್ನು ಬದಲಾವಣೆಮಾಡಿ ಬೆಲೆಯನ್ನು ಜಾಸ್ತಿಮಾಡಿದಾಗ ಅನೇಕ ಕಡೆಗಳಿಂದ ಪ್ರತಿಕ್ರಿಯೆ ಕಂಡುಬಂತು. ಆಗ ನಮಗೊಂದು ಅಭಿಪ್ರಾಯ ಬಂತು, 'ಈಗ ಜಾಸ್ತಿಮಾಡಿದ್ದಾರೆ, ಇನ್ನು ಮೇಲೆ ಹೆಚ್ಚುಮಾಡುವುದಿಲ್ಲ, ಏಕೆಂದರೆ ಮೂರು ಮೂರು ತಿಂಗಳಿಗೂ ಬೆಲೆ ಹೆಚ್ಚಿಸಿದರೆ ಎಲ್ಲರಿಗೂ ಕಷ್ಟವಾಗುತ್ತದೆ' ಎಂದು ಯೋಚನೆಮಾಡಿದ್ದೆವು. ಆದರೆ ಇನ್ನೂ ಒಂಬತ್ತು ತಿಂಗಳೂ ಆಗಿಲ್ಲ, ತಿರುಗಿ ಬದಲಾವಣೆಯಾಯಿತು. ಹಿಂದೆ ಆಹಾರದ ಮೇಲೆ ಚರ್ಚೆಮಾಡುವಾಗ ನಾವೆಲ್ಲರೂ ಒಂದೇ ಸಮನಾಗಿ 'ಬೆಳೆಯುವವರಿಗೆ ಹೆಚ್ಚಿಗೆ ಬೆಲೆಕೊಡುವುದು ಧರ್ಮ' ಎಂದು ಹೇಳಿದ್ದುಂಟು. ಪಲ್ಲಕ್ಕೆ 25 ರೂಪಾಯಿಗಳನ್ನು ಕೊಡಿ ಎಂದು ಎಲ್ಲರೂ ವಾದಿಸಿದೆವು. ಆದರೂ, ಆಗ ನಾವ್ಯಾರೂ ಎಣಿಸಿರಲಿಲ್ಲ, ಹೀಗೆ ರೈತರಿಗೆ ಸ್ವಲ್ಪ ಬೆಲೆ ಜಾಸ್ತಿ ಮಾಡಿದಾಕ್ಷಣ ಮಾರುವ ಧಾರಣೆಗಳನ್ನೂ ಏರಿಸಿಬಿಡುತ್ತಾರೆ ಎಂದು. 'ರೈತರಿಗೆ ಅನುಕೂಲಮಾಡಿಕೊಡಬೇಕೆಂದು ಯೋಚನೆಮಾಡಿದೆವೇ ಹೊರತು ಅವರಿಗೆ ಹೆಚ್ಚಿಗೆ ಕೊಟ್ಟು ಬಡಜನರನ್ನು ಕಷ್ಟಕ್ಕೀಡುಮಾಡಬೇಕೆಂದು ಎಂದೂ ಯೋಚಿಸಿರಲಿಲ್ಲ. ಹಾಗಿದ್ದರೆ ಆಗಲೇ ನಾವು ಅದಕ್ಕೂ ಬೇಡವೆಂದು ಹೇಳುತ್ತಿದ್ದೆವು.

ಆದ್ದರಿಂದ ಸರ್ಕಾರದವರು ಅವರು ಕೊಳ್ಳುವ ದರಗಳು ಹೇಗೇ ಇರಲಿ, ಮಾರುವಾಗ, ಬಡಜನರಿಗೆ, ಸಾಮಾನ್ಯ ಜನರಿಗೆ ಅನುಕೂಲವಾದ ಬೆಲೆಗಳಿಗೆ ದವಸ ಧಾನ್ಯಗಳು ಸಿಕ್ಕುವಂತೆ ಬೆಲೆಯನ್ನು ಕುಗ್ಗಿಸಿ ಮಾರಬೇಕು. ನಮ್ಮ ಸ್ನೇಹಿತರು ಕೆಲವರು 'ಆಹಾರದ ಇಲಾಖೆಯನ್ನೇ ತೆಗೆದುಬಿಡಿ, 38 ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡಿಕೊಳ್ಳಬಹುದು' ಎಂದು ಹೇಳಿದರು. ನಾವು ಒಂದಂಶವನ್ನು ಯೋಚನೆಮಾಡಬೇಕು. ಈ ಆಹಾರದ ಇಲಾಖೆಯಿರುವುದು ಕೇವಲ ಈ ಮೂರು ಪಟ್ಟಣಗಳಿಗಾಗಿ ಅಲ್ಲ. ವಾಸ್ತವವಾಗಿ ಈಗ ಪಟ್ಟಣಗಳಿಗೆ ಎಷ್ಟು ದವಸಗಳನ್ನೊದಗಿಸುತ್ತಿದ್ದಾರೋ ಅದಕ್ಕೆರಡರಷ್ಟು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳ ಕಡೆಯಲ್ಲೂ ಎಷ್ಟೋ ಜನ ಕೂಲಿಯವರು, ಆಹಾರ ಬೆಳೆಯದವರಿದ್ದಾರೆ. ಅವರ ಹಿತವನ್ನೂ ನಾವು ರಕ್ಷಣೆ ಮಾಡಬೇಕಾಗಿದೆ. ಆದ್ದರಿಂದ ಒಂದೇ ಸಾರಿ ಇಲಾಖೆಯನ್ನು ತೆಗೆಯಬೇಕೆಂದು ಹೇಳುವುದು ಸರಿಯಲ್ಲ. ದೇಶದಲ್ಲಿ ಹತ್ತನೆಯ ಒಂದು ಭಾಗದಷ್ಟು ಜನರು ಮಾತ್ರ ಬೆಳೆಯುವವರು ಹೀಗಿರುವಲ್ಲಿ ಮಿಕ್ಕವರೇನು ಮಾಡಬೇಕು? ಮೈಸೂರು ಸಂಸ್ಥಾನದಲ್ಲಿ ಬೇಕಾದಷ್ಟು ಪಟ್ಟಣಗಳೂ ಹಳ್ಳಿಗಳೂ ಇವೆ. ಇವೆಲ್ಲವುಗಳ ಕ್ಷೇಮವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಈ ಇಲಾಖೆಯನ್ನು ತೆಗೆಯುವುದನ್ನು ಅಥವಾ ಇಡುವುದನ್ನು ಯೋಚನೆಮಾಡಬೇಕು.

ಈಗ ನೀವು ಆಹಾರದ ಬೆಲೆಗಳನ್ನು ಜಾಸ್ತಿ ಮಾಡಿದ್ದರಿಂದ ಕಷ್ಟ ಬಂದುದು ಕೇವಲ ಬೆಂಗಳೂರು, ಮೈಸೂರು ಕೆ. ಜಿ. ಎಫ್—ಸಿಟಿಗಳಿಗೆ ಮಾತ್ರವಲ್ಲ, ಗ್ರಾಮಾಂತರಗಳ ಕಡೆಯಲ್ಲಿರುವ ಲಕ್ಷಾಂತರ ಬಡಜನರಿಗೆ ಕಷ್ಟ ಬಂದಿದೆ. ಹಳ್ಳಿಗಳ ಕಡೆ ಕೊಂಡು ತಿನ್ನುವವರೇನು ಮಾಡಬೇಕು? ಈಗಂತೂ ಹಳ್ಳಿಗಳ ಕಡೆ 12 ಆಣೆಕೊಟ್ಟರೂ ಒಂದು ಸೇರು ಅಕ್ಕಿಯೂ ಕೂಡ ಸಿಕ್ಕುತ್ತಿಲ್ಲವಲ್ಲ! ಆ ಬಡಜನರ ಕಷ್ಟ ಸುಖಗಳನ್ನು ನೋಡಬೇಕಾದದ್ದು ನಿಮ್ಮ ಕರ್ತವ್ಯವಲ್ಲವೇ?

ಅಲ್ಲದೆ ಇನ್ನೊಂದು ಅಂಶವನ್ನು ಯೋಚನೆಮಾಡೋಣ. ಆಹಾರದ ಮಾರುವ ಬೆಲೆಯನ್ನು ಹೀಗೆ ಜಾಸ್ತಿ ಮಾಡಿದ್ದರಿಂದ ರೈತರಿಗಾದರೂ ಹೆಚ್ಚಿಗೆ ಅನುಕೂಲವಾಯಿತೇ? ಆಹಾರದ ಬೆಲೆ ಜಾಸ್ತಿಯಾದಂತೆ ಅದಕ್ಕೆ ಸೇರಿದಂತಿರುವ ಮಿಕ್ಕ ಸಾಮಾನುಗಳ ಬೆಲೆಯೂ ಏರುತ್ತದೆ. ಹೋದ ವರ್ಷ ಏನು ಬೆಲೆ ಇಳಿದುಹೋಗಿತ್ತು! ಈಗ ಅದನ್ನೇ ನೋಡಿದರೆ ವಿಪರೀತ ಏರಿದೆ. ತೆಂಗಿನ ಕಾಯಿ 5 ಆಣೆ ಆಗಿದೆ! ಕಡಲೆಕಾಯಿಎಣ್ಣೆ 12 ರೂಪಾಯಿಯಿದ್ದುದು ಈಗ 23 ರೂಪಾಯಿಯಾಗಿದೆ. ಆದ್ದರಿಂದ ಇವೆಲ್ಲದರ ಧಾರಣೆ ಆಹಾರ ಧಾನ್ಯಗಳ ಬೆಲೆಯನ್ನವಲಂಬಿಸಿರುತ್ತದೆ. ಆದ್ದರಿಂದ ಸರ್ಕಾರದವರು ಆಹಾರದ ಬೆಲೆ ಜಾಸ್ತಿಮಾಡಿದ್ದರಿಂದ ಬರೀ ಅಕ್ಕಿ, ರಾಗಿ ಬೆಲೆಗಳನ್ನು ಜಾಸ್ತಿಮಾಡಿದ ಹಾಗಾಗಲಿಲ್ಲ, ಅದಕ್ಕೆ ಸೇರಿದ ಇನ್ನೂ ಅನೇಕ ಸಾಮಗ್ರಿಗಳ ಬೆಲೆಗಳನ್ನು ಜಾಸ್ತಿಮಾಡಿದಹಾಗಾಯಿತು. ಜನ ಸಾಮಾನ್ಯರ ಮೇಲೆ ಇದರ ಪರಿಣಾಮವೇನೆಂಬುದನ್ನು ಯೋಚನೆ ಮಾಡಬೇಕಾದದ್ದು ಮುಖ್ಯ. ಆದ್ದರಿಂದ ಎಲ್ಲ ಪದಾರ್ಥಗಳ ಬೆಲೆಯೂ ಕುಗ್ಗುವಂತೆ ಮಾಡಬೇಕಾದದ್ದು ಸರ್ಕಾರದ ಕರ್ತವ್ಯ, ಇಲ್ಲದಿದ್ದರೆ ಬಡಜನರು, ಸಾಮಾನ್ಯ ಜನರು ಈ ಕಷ್ಟ ಕಾಲದಲ್ಲಿ ಬದುಕಲಾರರು. ಜೀವನದ ಮಟ್ಟವನ್ನು 'cost of living index'ನ್ನು ಕಡಮೆಮಾಡುವುದಕ್ಕೆ ಪ್ರಯತ್ನಮಾಡಬೇಕೇ ಹೊರತು, ಏರುವುದಕ್ಕೆ ಬಿಡಕೂಡದು.

ಒಬ್ಬ ಸದಸ್ಯರು.—ಹೇಗೆ ಮಾಡುವುದು, ಹೇಳಿ.

ಶ್ರೀ ಆರ್. ಅನಂತರಾಮನ್.—ಅದಕ್ಕೆ ಆಹಾರದ ಬೆಲೆಯನ್ನು ಆದಷ್ಟು ಮಟ್ಟಿಗೆ ಕುಗ್ಗಿಸಿ ಮಾರಬೇಕು. ಆಹಾರದ ಬೆಲೆಯನ್ನು ಜಾಸ್ತಿಮಾಡಿದರೆ ಇತರ ಪದಾರ್ಥಗಳ ಬೆಲೆಗಳೂ ಹೆಚ್ಚುತ್ತವೆ. ಕಾರ್ಮಿಕರೂ, ಸರ್ಕಾರಿ ನೌಕರರೂ ಹೆಚ್ಚಿಗೆ ತುಟ್ಟಿ ಭತ್ಯ ಕೇಳುವುದಕ್ಕೆ ಪ್ರಾರಂಭಿಸಿದ್ದಾರೆ. ಇದಕ್ಕಾಗಿ ಸರ್ಕಾರ ಹೆಚ್ಚಿಗೆ ಹಣ ಖರ್ಚು ಮಾಡಬೇಕಾಗಿ ಬರುತ್ತದೆ. ಇದಕ್ಕೆ ಹಣ ಎಲ್ಲಿಂದ ಸರ್ಕಾರದವರಿಗೆ ಬರುತ್ತದೆ. ಕೂಲಗಾರರಿಗೆ ಹೆಚ್ಚಿಗೆ ತುಟ್ಟಿಭತ್ಯ ಸಂಬಳ ಕೊಟ್ಟರೆಂದರೆ ಅವರು ತಯಾರು ಮಾಡುವ ಪದಾರ್ಥಗಳ ಬೆಲೆ ಏರುತ್ತದೆ. ಇದನ್ನು ಕೊಂಡುಕೊಳ್ಳುವ ರೈತನ ಮೇಲೆ ಇದರ ಪರಿಣಾಮ ಇದ್ದೇ ಇದೆ. ರೈತನ ದವಸವನ್ನು ಕೊಂಡುಕೊಳ್ಳದೆ ಹೋದರೂ ಮಿಕ್ಕ ಪದಾರ್ಥಗಳನ್ನೆಲ್ಲಾ ದುಬಾರಿ ಬೆಲೆಗೆ ಕೊಂಡುಕೊಳ್ಳಬೇಕಾಗುತ್ತದೆ. ಹೀಗೆ ಪರೋಕ್ಷವಾಗಿ ಹಳ್ಳಿಯವರಿಗೆ ಬೇಕಾದ ಇತರ ಪದಾರ್ಥಗಳ ಬೆಲೆಗಳೂ ಹೆಚ್ಚಾಗುತ್ತವೆ. ಆದ್ದರಿಂದ ಆಹಾರದ ಬೆಲೆಯನ್ನು ಇಳಿಸಿದರೆ, ಮಿಕ್ಕ ಎಲ್ಲ ಪದಾರ್ಥಗಳ ಬೆಲೆಗಳೂ ಇಳಿಯುತ್ತವೆ. ಮುಂಚೆ ಬ್ಲಾಕ್‌ಮಾರ್ಕೆಟ್ಟಿನಲ್ಲಿ ರೂಪಾಯಿಗೆ 2 ಸೇರು ಅಕ್ಕಿ ಸಿಕ್ಕುತ್ತಿತ್ತು. ನೀವು $1\frac{1}{2}$ ಸೇರು ಮಾಡಿದ ಮೇಲೆ, ಈಗ ಬ್ಲಾಕ್ ಮಾರ್ಕೆಟ್ಟಿನಲ್ಲಿ $1\frac{1}{4}$ ಸೇರು ಆಗಿದೆ. ಈ ಎಲ್ಲ ಕಾರಣಗಳಿಂದ ಆಹಾರ ಪದಾರ್ಥಗಳ ಬೆಲೆಯನ್ನು ಕುಗ್ಗಿಸುವುದಕ್ಕೆ ಪ್ರಯತ್ನಮಾಡಬೇಕು. ಅದನ್ನು ಬಿಟ್ಟು, ನಮ್ಮ ಮಿತ್ರರು ಹೇಳಿದಹಾಗೆ, ಕಂಟ್ರೋಲ್ ತೆಗೆಯುವುದು ಮುಂತಾದ ಕಾರ್ಯಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಏಕೆಂದರೆ ನಾವು ವರ್ತಕರಲ್ಲ. ಒಟ್ಟು ಸಂಸ್ಥಾನದ, ಸಾವಿರಾರು ಜನ ಬಡಪಾಯಿಗಳ ಜೀವನವನ್ನು ದೃಷ್ಟಿಯಲ್ಲಿಟ್ಟುಕೊಂಡು ಧಾರಣೆಗಳನ್ನು ತಗ್ಗಿಸಬೇಕೆಂದು ಹೇಳುತ್ತೇನೆ.

4 P.M.

Sri B. NARAYANASWAMY (Mysore City South).—Mr. Speaker,

(Sri B. NARAYANASWAMY.)

Sir, I thank the Hon'ble Speaker for having given me an opportunity to speak on this subject. Before I offer my remarks, I would earnestly make an appeal to the Hon'ble Members in this House to kindly be more considerate and be kind to those who live in cities, because I have an impression, sir, that people who live in cities are deemed to be more affluent and in a very prosperous condition. But, unfortunately, sir, there is a dark side to the picture. Nowadays the cities are more crowded by people who come from rural parts. It is an admitted fact that both in rural parts and in cities, the majority of the people who reside are poor. A city like Mysore or Bangalore—is an industrial area and there are several factories and industrial concerns and people from rural parts come and flock into cities. It is also a matter of fact, sir, that in cities, we have more of Government servants and officers and merchants, especially of middle-class, and also, as my friend puts it, lawyers. So far as the earning capacity of men who live in cities is concerned, the standard of living is as poor, if not poorer, than in rural parts. On that point, I think, it is a very serious matter for members of this House to kindly take into consideration that after all, whether we live in rural parts or in urban parts, the standard of living is becoming poorer day by day. It cannot be said that people who live in cities have become prosperous and they have enough means to pay for anything and everything. Sir, nowadays, we see that the voice from the rural parts is becoming effective. Here in this Assembly, I am seeing for the last two days that on several demands so much of concession and so much of rights have been conferred on people who reside in rural parts. Take for example the Grow More Food Scheme; that is meant for the rural people; take the Community projects, it is meant for the rural people; take the famine relief works; it is also meant for rural parts. Then, what about the people who reside in cities, sir?

(Interruptions)

Mr. SPEAKER.—It is pointed out that these are very misleading analogies.

Sri B. NARAYANASWAMY.—Why all this relief is given to rural parts is just to raise their standard of living. So far as the Government is concerned, I am not saying this as a complaint against them. Because, I am sure that they are also trying their best to do their best. But unfortunately, though I agree that in food policy, Government are proceeding on very cautions lines and that they do not hustle matters, still, when it comes to a question of prices, somehow Government—I do not want to use any hard expression or any harsh expression— are muddled. For one year, I see that prices have been revised five times and at what cost?

Mr. SPEAKER.—The prices have been changed five times only in the case of wheat.

Sri B. NARAYANASWAMY.—It is not wheat question, but is again a question of millets. That affects people who live in urban parts and especially Mysore City. I being a representative of Mysore City, it is my duty to represent to Government the anamolous position to which the people who live in the City, especially the labour and middle class people and poor class people are put. You have said in August 1952 that the whole city of Mysore has become a derationed area, you have said in the month of November that control on millets has been removed. What is the position in Mysore now? Again, you have fair price depots and I see people going to the fair price depots with their ration cards. The open market is existing side by side. Do you mean to say that people are satisfied with either the open market or fair price depots? As a matter of fact, I have put in an interpellation just to know what the offtake and

stock position in Mysore is. I have not yet received any answer to that interpellation.

Sri H. SIDDAVEERAPPA.—I will give the answer to you this evening. The offtake position is very very favourable.

Sri B. NARAYANASWAMY.—The offtake position and stock position in several depots is gradually decreasing month by month.

Sri S. SRINIVASA IYENGAR (T.-Narsipur).—It is cheaper in the open market.

Sri B. NARAYANASWAMY.—In that case, why should Government raise the price of millets when people are getting millets in the open market at a cheap rate? I think Government is not justified in having raised the price of millets. The offtake position and the stock position is not increasing, but as a matter of fact, it is decreasing. You ought to have kept the price of millets at that level on the day on which that order was passed. My humble request to Government is that the citizens of Mysore and Bangalore should be treated with a good deal of consideration. I appeal to Government that they should go back to the original price of millets which they have raised.

It is also said and I read in the Papers that a sort of agitation is going on in Mysore City. That is called Satyagraha. I also read in the papers that some people are thinking of doing satyagraha before my house and that of Sri Mariappa's house. I may tell you that I am not afraid of this satyagraha, because we are all adepts, and as Congressmen we know what is the meaning of Satyagraha. But, Sir, apart from that, I humbly request Government to kindly revise their order and see that the citizens of Bangalore and Mysore are given these millets at a cheap rate. Thereby you will be earning the gratitude of the people.

ಶ್ರೀ ಎಸ್. ಗೋಪಾಲಗೌಡ (ಸಾಗರ–ಹೊಸನಗರ).—ಸ್ವಾಮಿ, ಈ ಆಹಾರ ಸಮಸ್ಯೆಯ ಮೇಲೆ ಮಾತನಾಡಬೇಕೆಂದು ನಾನು ಪ್ರಾರಂಭಮಾಡುವಾಗಲೇ ನನ್ನ ಮಿತ್ರರು ಡೀ-ಕಂಟ್ರೋಲ್ ಮಾಡಬೇಕೆಂದು ಹೇಳಿ ಎಂದು ಹೇಳಿದರು. ಆದರೆ, ಅನೇಕ ವೇಳೆ ಈ ಮೊದಲೇ ನಾನು ಹೇಳಿದ್ದೇನೆ, ಡೀ-ಕಂಟ್ರೋಲ್ ಮಾಡಬೇಕೆಂಬ ಬಗ್ಗೆ ನಾನು ವಿರೋಧಮಾಡುವವನು ಎಂದು; ಮತ್ತು ಇನ್ನೂ ವಿರೋಧ ಮಾಡುತ್ತೇನೆ ಏಕೆಂದರೆ, ನನಗೆ ಇನ್ನೂ ಡೀ-ಕಂಟ್ರೋಲ್ ಮಾಡಲು ಒಪ್ಪುವುದಕ್ಕೆ ಕಾರಣಗಳು ದೊರೆತಿಲ್ಲ. ಇದೊಂದು ವಿವಾದಾಸ್ಪದ ವಿಚಾರವೆಂದು ತಿಳಿದುಕೊಂಡಿದ್ದೇನೆ. ಪ್ಲಾನಿಂಗ್ ಕಮಿಷನ್‌ನವರು ಕೂಡ ಐದು ವರ್ಷದ ಯೋಜನೆ ಕಾರ್ಯಗತವಾಗಬೇಕಾದರೆ ಕಂಟ್ರೋಲ್ ಇರಬೇಕೆಂದು ಹೇಳಿದ್ದಾರೆ. ಆದರೆ, ಕೇಂದ್ರ ಸರ್ಕಾರದ ಮಂತ್ರಿ ಕಿದ್ವಾಯಿಯವರು ಡೀಕಂಟ್ರೋಲ್ ಮಾಡುತ್ತೇನೆ ಎಂದು ಹೇಳುತ್ತಾರೆ. ಹೀಗೆ ಮೇಲಿಂದ ಕೆಳಗಿನವರೆಗೂ ಎರಡು ಅಭಿಪ್ರಾಯಗಳಿವೆ. ಮೊನ್ನೆ ನಾನು ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಒಬ್ಬರು ಆಸ್ಪತ್ರೆಯ ಬಡ ನೌಕರರೂ ಇನ್ನೊಬ್ಬರು ರೋಗಿ ಈ ಆಹಾರ ಸಮಸ್ಯೆಯು ಯಾವ ರೀತಿ ಆಗಬಹುದೆಂದು ಕೇಳಿದರು. ಸದ್ಯಕ್ಕೆ ಏನೂ ಇಲ್ಲ, ಇನ್ನು ಸ್ವಲ್ಪ ದಿವಸವಾದ ಮೇಲೆ ಕಂಟ್ರೋಲ್ ತೆಗೆಯಬಹುದೆಂದು ನಾನು ಹೇಳಿದಾಗ ಸದ್ಯ ಹಾಗಾದರೂ ಮಾಡಿದರೆ ಒಳ್ಳೆಯದು, ಹಳ್ಳಿಯಿಂದ ಆಹಾರ ತರುವುದಕ್ಕೆ ಅವಕಾಶವಾಗಬಹುದು, ಸಂತೋಷವೆಂದು ಆ ನೌಕರ ಹೇಳಿದ. ಅದಕ್ಕೆ ರೋಗಿ ಕಂಟ್ರೋಲ್ ತೆಗೆದರೆ ಬಹಳ ಕಷ್ಟವಾಗುತ್ತದೆ. ಈಗಾಗಲೇ ಬ್ಲಾಕ್‌ಮಾರ್ಕೆಟ್ಟಿನಲ್ಲಿ, ಸರ್ಕಾರದವರು ಬೆಲೆ ಏರಿಸಿದ ಮೇಲೆ ಹೆಚ್ಚಾಗಿದೆ, ಯಾವಾಗಲೂ ಸರ್ಕಾರ ಗೊತ್ತುಮಾಡಿದ ಬೆಲೆಗಿಂತ ಹೆಚ್ಚು ಬೆಲೆಗೆ ಮಾರುತ್ತಾರೆ. ಇದು ರೂಢಿಯಾಗಿದೆ, ವರ್ತಕರಲ್ಲಿ ಧರ್ಮರಾಯರು ಯಾರೂ ಹುಟ್ಟುವುದಿಲ್ಲ ಎಂದು ಹೇಳಿದ. ಹೀಗೆ ಕಂಟ್ರೋಲ್ ಮತ್ತು ಡೀ-ಕಂಟ್ರೋಲ್ ವಿಷಯದಲ್ಲಿ ಎಲ್ಲೆಲ್ಲಿಯೂ ಭಿನ್ನಾಭಿಪ್ರಾಯವಿದೆ. ಇದನ್ನೆಲ್ಲಾ ವಿಮರ್ಶೆಮಾಡುವುದಕ್ಕೆ ಈಗ ಕಾಲವಿಲ್ಲ. ಆಹಾರ ಪರಿಸ್ಥಿತಿಯ ಬಗ್ಗೆ ಸರ್ಕಾರದವರು ಹೇಳುತ್ತಾ ಈ ವರ್ಷ ಮಳೆ ಚೆನ್ನಾಗಿ ಆಗದೇಯಿದ್ದುದರಿಂದ ಬೆಳೆ ಚೆನ್ನಾಗಿ ಆಗಿಲ್ಲ, below normal ಆಗಿದೆಯೆಂದು ಹೇಳಿದ್ದಾರೆ. ಈ ಕಾರಣದಿಂದ ಕೇಂದ್ರ ಸರ್ಕಾರದಿಂದ 1,80,000 ಟನ್ ಆಹಾರ ಧಾನ್ಯ ಒದಗುತ್ತದಾದ್ದರಿಂದ ಆಹಾರವಿಲ್ಲದೆ ಪರಿಸ್ಥಿತಿ ಅಂಥಾ ಚಿಂತಾಜನಕವಾಗುವುದಿಲ್ಲ, ಜನರಿಗೆ ಆಹಾರವಿಲ್ಲದಂತಾಗುವ ಪರಿಸ್ಥಿತಿ ಉಂಟಾಗುವುದಿಲ್ಲ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಆ ಸಂದರ್ಭದಲ್ಲಿ ಅವರು ಕೆಲವು ಅಂಕಿ ಅಂಶಗಳನ್ನು ಕೊಟ್ಟು ಕೊಡಗಿನಿಂದ ಇಷ್ಟು, ಒರಿಸ್ಸಾದಿಂದ ಇಷ್ಟು ಆಹಾರಧಾನ್ಯ ಬರುತ್ತದೆ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದು ರೈತರಿಗೆ ಬತ್ತಕ್ಕೆ ಪಲ್ಲಕ್ಕೆ ನಾಲ್ಕು ರೂಪಾಯಿನಂತೆ ಏರಿಸಿದರು. ರೈತರ ದೃಷ್ಟಿಯಿಂದ, ಬೆಳೆದು ಮಾರುವವರ ದೃಷ್ಟಿಯಿಂದೇನೋ ಇದು ಒಳ್ಳೆಯದು, ಆದರೆ ನಮ್ಮ ದೇಶದಲ್ಲಿ, ನನಗೆ ಕಂಡು ಬಂದಿರುವ ಹಾಗೆ, ಬೆಳೆದುಮಾರುವ ರೈತರ ಸಂಖ್ಯೆ ಕಡಮೆ. ತಮ್ಮ ಹೊಟ್ಟೆಗೆ ಬಟ್ಟೆಗೆ ಇಟ್ಟುಕೊಂಡು ಮಾರುವವರ ಸಂಖ್ಯೆ ಎಷ್ಟು, ಮಾರುವುದರ ಪ್ರಮಾಣವೆಷ್ಟು, ಎಷ್ಟು ಹಣ ಅವರಿಗೆ ಅದರಿಂದ ಬರುತ್ತದೆ ಎಂಬುದು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ನಮ್ಮ ಕಡೆ ಜಮೀನ್ದಾರರಿಗೇ ಈ ಹಣ ಹೋಗುತ್ತದೆ.

(ಶ್ರೀ ಎಸ್. ಗೋಪಾಲಗೌಡ.)

ನಾನು ಬೇಕಾದರೆ, ಈ ಬಗ್ಗೆ ಅಂಕಿ ಅಂಶಗಳನ್ನು ತಿಳಿಸುತ್ತೇನೆ. ಹೆಚ್ಚು ಹಣ ಜಮೀನ್ದಾರರ ಬೊಕ್ಕಸಕ್ಕೆ ಹೋಗುತ್ತದೆಯೇ ವಿನಾ ರೈತರಿಗೆ ಹೋಗುವುದಿಲ್ಲ. ರೈತ ಒಟ್ಟು ಎಷ್ಟು ಬೆಳೆ ಬೆಳೆಯುತ್ತಾನೋ ಅದರ ಮೇಲೆ ವ್ಯವಸಾಯದ ಬೋನಸ್ಸುರೂಪದಲ್ಲಿ ಹಂಚಿದ್ದಾದರೆ ಒಳ್ಳೆಯದಾಗಿತ್ತು. ಹಾಗೆ ಮಾಡಿದ್ದರೆ ಆಗ ಬೆಳೆಯುವವನಿಗೆ ಕೊಡುತ್ತೇವೆ ಎನ್ನುವ ಮಾತು ಸಾರ್ಥಕವಾಗುತ್ತಿತ್ತೋ ಏನೋ, ಮುಂದೆ

"They have been unable to tackle the question immediately in view of the budgetary position"

ಎಂದು ಹೇಳಿದ್ದಾರೆ. ಈ ದರ ಏರಿಸಿದುದನ್ನು ಇಳಿಸಬೇಕೆಂದು ಕೇಳಿಕೆಗಳು ಜನರಿಂದ ಬರುತ್ತಿವೆ. ಇದರ ಬಗ್ಗೆ ನಮಗೆ ತಾತ್ಸಾರವಿಲ್ಲ, ನಿರ್ಧಯವಿಲ್ಲ, ಕಡಮೆ ಮಾಡಲು ನಾವೂ ಕುತೂಹಲರಾಗಿದ್ದೇವೆ, ಕಾತುರರಾಗಿದ್ದೇವೆ, ಬೆಲೆ ಇಳಿಸುವುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ,

"this demand will remain their constant and anxious consideration."

ಎಂದು ಹೇಳಿದ್ದಾರೆ. ನಿಜವಾಗಿ ಇದು ಒಂದು dilema ಅಥವಾ ಒಂದು vicious circle ಹಾಗಿದೆ. ಆಹಾರದ ಸಮಸ್ಯೆ ದೇಶಾದ್ಯಂತ ಇರುವುದು. ಕೊಳ್ಳತಕ್ಕವರ ಹಿತರಕ್ಷಣೆಗೆ ಹೋದರೆ ಬೆಳೆಯುವವರ ಹಿತಕ್ಕೆ ಧಕ್ಕೆ ಬರುತ್ತದೆ. ಇಬ್ಬರ ಹಿತವನ್ನೂ ಸಾಧಿಸಬೇಕು. ಸರ್ಕಾರ ನೇರವಾಗಿ ಈ ವ್ಯಾಪಾರವನ್ನು ಕಳೆದ ಹತ್ತು ವರ್ಷಗಳಿಂದ ವಹಿಸಿಕೊಂಡು ನಡೆಸಿಕೊಂಡು ಬರುತ್ತಿದೆ. ಈ ವಿಷಯದಲ್ಲಿ ನಾನು ಒಂದು ಪ್ರಶ್ನೆ ಕೇಳಿದಾಗ, ಮಿಲ್ಲಿನಲ್ಲಿ ಬತ್ತವನ್ನು ಕೊಳ್ಳುವ ಕ್ರಮದಲ್ಲಿ ಸರ್ಕಾರ ಏನು ಒಪ್ಪಂದಕ್ಕೆ ಬಂದಿದೆಯೆಂಬುದನ್ನು ನೋಡಿದ್ದರಲ್ಲಿ, ಇದರಲ್ಲಿ ಲಕ್ಷಾಂತರ ರೂಪಾಯಿ ಖೋತಾ ಬಂದಿದೆ. ಪ್ರತಿ ವರ್ಷವೂ ಆ ಮಿಲ್ಲುಗಳನ್ನು ತನಿಖೆ ಮಾಡುತ್ತಿದ್ದುದು ನಿಜ, ಸರ್ಕಾರ ಹಣವನ್ನು ಕೊಟ್ಟು ಬತ್ತವನ್ನು ಮಿಲ್ಲುಗಳ ಮೂಲಕ ತೆಗೆದುಕೊಂಡು ಸರ್ಕಾರದ ಪರವಾಗಿ ಮಿಲ್ಲುಗಳು ನೇರವಾಗಿ ವ್ಯಾಪಾರ ಮಾಡುತ್ತಿದ್ದುದು ಸರಿ, ಆದರೆ ಈ ಹೊತ್ತು ಒಂದೇ ಮಿಲ್ಲಿನಲ್ಲಿ ಒಂದು ಲಕ್ಷ ರೂಪಾಯಿ ಖೋತಾ ಬಂದಿದೆ. ಇನ್ನೂ ಎಷ್ಟು ಮಿಲ್ಲುಗಳಲ್ಲಿ ಹೀಗಾಗಿದೆ, ಹೀಗೆ ನೇರವಾಗಿ ಲೆಕ್ಕದಲ್ಲಿರತಕ್ಕ...............

Mr. SPEAKER.—Much of it has been recovered.

ಶ್ರೀ ಎಸ್. ಗೋಪಾಲಗೌಡ.—ಕೇಳಿದ್ದೇನೆ. ಅವರ ಮೇಲೆ ಕ್ರಮ ತೆಗೆದುಕೊಂಡು ಅವರ ಮನೆಯನ್ನು ಹರಾಜು ಮಾಡಿಸಿ,...............

Mr. SPEAKER.—I think it is not relevant to this subject matter.

ಶ್ರೀ ಎಸ್. ಗೋಪಾಲಗೌಡ.—ಈ ಕಾನೂನಿಗೆ ಸಂಬಂಧಪಟ್ಟ ಹಾಗೆ ಒಂದೇ ವಿಷಯ. ಇದರಲ್ಲಿ ಸರ್ಕಾರದ ಜವಾಬ್ದಾರಿಯಿದೆ. ಬರೀ ಮಿಲ್ಲು ಮಾಲೀಕರ ಮನೆಯನ್ನು ಹರಾಜು ಮಾಡಿದ ಮಾತ್ರಕ್ಕೇ ನಿಲ್ಲುವುದಿಲ್ಲ.

Mr. SPEAKER.—How is this relevant to this debate?

ಶ್ರೀ ಎಸ್. ಗೋಪಾಲಗೌಡ.—ಎಲ್ಲೋ ಒಂದು ಮಿಲ್ಲನ್ನು ಮಾತ್ರ ಹರಾಜು ಹಾಕಿ ಹಣವನ್ನು ವಾಪಸ್ಸು ಪಡೆದಿರುತ್ತಾರೆ. ಈಗ ಕಾನೂನು ಇನ್ನೂ ಜಾರಿಯಲ್ಲಿದೆ. ಇದನ್ನು ಸರ್ಕಾರ ಅವಕಾಶ ತೆಗೆದುಕೊಂಡು ಹಣ ವಸೂಲು ಮಾಡಬೇಕಾದ ಜವಾಬ್ದಾರಿ ಇರುತ್ತದೆ. ಆದರೆ ಮಿಲ್ ಮಾಲೀಕರ ಮನೆ ಮತ್ತು ಮಿಲ್‌ಗಳನ್ನು ಹರಾಜು ಹಾಕಿದರೆ ಸಾಲದು.—

Mr. SPEAKER.—How is that relevant to this debate?

ಶ್ರೀ ಎಸ್. ಗೋಪಾಲಗೌಡ.—ಆದರೆ ಸರ್ಕಾರದವರು ಈ ದಿವಸ ಯಾವುದೋ ರೀತಿಯಾಗಿ ಅವರಿಗೊಂದು ನಿಷ್ಠೂರ ಬರುತ್ತೆಂಬ 'ಸಂಕೋಚದ' ಮೇಲೆ ಅನೇಕ ಮಿಲ್‌ಗಳ ಮೇಲೆ ಸರಿಯಾದ ತನಿಖೆ ನಡೆಸಿರುವುದಿಲ್ಲ. ಈಗಲೂ ಸರ್ಕಾರದವರು ನಿಷ್ಪಕ್ಷಪಾತ ಭಾವನೆಯಿಂದ ಈ ವ್ಯವಹಾರ ಎಲ್ಲೆಲ್ಲಿ ನಡೆದಿರುತ್ತೆಂಬ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಕೈಕೊಂಡಿದ್ದೇ ಆದರೆ ಇನ್ನೂ ಎಷ್ಟೋ ಮಿಲ್ಲುಗಳ ಗತಿ ಏನೇನೋ ಆಗುವಂತಿದೆ. ಆದಕಾರಣ ಸರ್ಕಾರದವರು ಇವುಗಳ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಅಗತ್ಯವಾಗಿ ಕೈಕೊಳ್ಳಬೇಕೆಂದು ಹೇಳುತ್ತೇನೆ.

Sri M. PALANIYAPPAN (Ulsoor).—Mr. Speaker, I would like to support the demand. Now there is a big cry in the city for decontrol. To-day we have seen in the papers that the Food Minister of the Government of India, Sri Kidwai, has said that he is prepared to supply any quantity of foodgrains to the State Governments provided they make an indent. The present position being better, we feel that it is absolutely necessary to decontrol, and it is no use revising the rates as we please. I quite understand and appreciate if by raising the prices Government can safeguard the budgetary position. But I am sure even if they raise the rates, Government will be put in an embarrassing position. Already there is a big deficit and there will be still more. The immediate relief Government could give to the people is to decontrol and abolish the food establishment. By that we will be reducing the expenditure on the establishment and at the same time we will be giving to the people, an opportunity to have a sigh of relief. As my friend Sri Anantaraman put it, if every time the rates are revised, Government will be put in an embarrassing position. The people, especially who work in the factories like the Cigarette Fac-

tory, the Hindustan Aircraft, etc., have a fixed salary and they adjust their home budget according to their salary. They do not get any increment. When the prices of foodgrains go up, they feel it difficult to maintain their family with the limited income. So also is the case with the people who work in the Secretariat, mostly of the non-gazetted rank. The salaries given by the Mysore Government are really very low, nor do they increase the dearness allowance nor pay extra allowance to meet this cost. I earnestly appeal to the Government that instead of revising the prices of foodstuffs again and again they can decontrol and be done with it.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಶ್ರೀ ಆರ್. ಅನಂತರಾಮಯ್ಯರವರು, ಮತ್ತು ಶ್ರೀ ಬಿ. ನಾರಾಯಣಸ್ವಾಮಿಯವರು ಮಾಡಿರತಕ್ಕ ವಾದಗಳನ್ನು ನೋಡಿದರೆ ನನಗೆ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ; "ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ," ಎಂದ ಹಾಗಿದೆ ಇವರಿಬ್ಬರು ಮಾಡಿರತಕ್ಕ ಭಾಷಣಗಳು. ಇವರು ಹೇಳಿರತಕ್ಕದ್ದು ಕಂಟ್ರೋಲುಗಳನ್ನು ತೆಗೆಯಬೇಡಿ, ಆಹಾರ ಸಾಮಗ್ರಿಗಳ ಧಾರಣೆಯನ್ನು ಏರಿಸಬೇಡಿ ಎಂದು ಹೇಳಿದ್ದಾರೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ ತಿನ್ನಲು ಕಾಳಿಲ್ಲದೆ ಅವರೂ ಸಹ ಕಾಳು ಕೊಳ್ಳಬೇಕಾದ ಪ್ರಸಂಗ ಬಂದಿದೆ. ಸರ್ಕಾರದವರು ಕಂಟ್ರೋಲ್ ಹಾಕಿ ರೈತನಿಂದ ಅತನ ಉಪಯೋಗಕ್ಕೆಂದು ಇಟ್ಟುಕೊಂಡಿದ್ದ ದವಸವನ್ನೆಲ್ಲಾ ಕಿತ್ತುಕೊಂಡು ಬಂದು ಪಟ್ಟಣಗಳಲ್ಲಿ ವಾಸಮಾಡತಕ್ಕವರಿಗೆ ಕೊಡುತ್ತಿದ್ದಾರೆ. ಈ ಕಾರಣದಿಂದ ಈ ದಿವಸ ರೈತನಿಗೇ ತಿನ್ನಲು ಕಾಳಿರುವುದಿಲ್ಲ. ಹೀಗೆ ದವಸ ಧಾನ್ಯಗಳನ್ನು ಆತನಿಗೆ ತಿನ್ನಲಿಕ್ಕೂ ಕೂಡ ಬಿಡದಂತೆ ಕಿತ್ತುಕೊಂಡು ಬಂದಿದ್ದಾಗ್ಯೂ, ಆ ದವಸ ಧಾನ್ಯಗಳನ್ನು ಪಟ್ಟಣದಲ್ಲಿ ಕುಳಿತುಕೊಂಡು ತಿನ್ನತಕ್ಕವರಿಗೆ ಕಮ್ಮಿ ಬೆಲೆಗೆ ಮಾರಾಟ ಮಾಡಬೇಕೆಂದು ಹೇಳತಕ್ಕದ್ದು ಯಾವ ಧರ್ಮ, ಯಾವ ನೀತಿ? ಅವರು ಮಾಡಿದ ಭಾಷಣಗಳ ಅರ್ಥ ಇಷ್ಟೇನೆ. ಆದರೆ ಪಟ್ಟಣಗಳಲ್ಲಿರತಕ್ಕವರ ಕಷ್ಟ ಸುಖಗಳು ಅವರಿಗೆ ಗೊತ್ತಿವೆ, ನನಗೆ ಗೊತ್ತಿಲ್ಲವೆಂದು ಯಾರೂ ಭಾವಿಸಬಾರದು; ನನಗೂ ಕೂಡ ಪಟ್ಟಣದ ಅನುಭವವಿದೆ. ನಾನು ಹಳ್ಳಿಯಲ್ಲಿ ಹುಟ್ಟಿದ್ದರೂ ನನ್ನ ಜಮೀನಿನಲ್ಲಿ ಉತ್ಪತ್ತಿಯಾದ ಕಾಳನ್ನೆಲ್ಲಾ ಸರ್ಕಾರಕ್ಕೆ ಕೊಟ್ಟು ನಾನು ವರ್ಷದಲ್ಲಿ ಅರ್ಧಕ್ಕೆ ಹೆಚ್ಚಾಗಿ ದವಸ ಕೊಂಡು ತಿನ್ನುತ್ತಿದ್ದೇನೆ. ಆದರೆ ಹಳ್ಳಿಯ ಜನರ ಕಷ್ಟ ಈ ಪಟ್ಟಣದಲ್ಲಿರತಕ್ಕವರ ಕಷ್ಟಕ್ಕಿಂತಲೂ ಮೀರಿರುತ್ತದೆ. ಹಳ್ಳಿಯವರ ಕಷ್ಟ ಅಷ್ಟಿಷ್ಟಲ್ಲ. ಈ ಸಾರ್ತಿ ಅಷ್ಟು ಕಿರುಕುಳ ಕೊಡದಂತೆ ಧಾನ್ಯ ಸಂಗ್ರಹಣೆ ಮಾಡಿರುತ್ತೇವೆಂದು ಸರ್ಕಾರದವರು ಹೇಳಿದ್ದರು. ಮತ್ತು ಹಾಗೆ ಯಾರ ಮೇಲೂ ಒಂದು ಕೇಸನ್ನೂ ಹಾಕದೆ ಇದ್ದರೂ, ಕೇವಲ ಒಳ್ಳೆಯ ಮಾತುಗಳಿಂದಲೇ ಅವರಲ್ಲಿದ್ದ ಕಾಳನ್ನೆಲ್ಲಾ ಕಿತ್ತುಕೊಂಡು ಬಂದಿದ್ದಾರೆ. ಈ ವರ್ಷ ಸರ್ಕಾರದವರು ಬಹಳ effective ಆಗಿ ಬಹಳ intensive ಆಗಿ ಧಾನ್ಯ ಸಂಗ್ರಹಣ ಮಾಡಿದ್ದಾರೆ ಜಮೀನಿಲ್ಲದ ರೈತರಿಂದಕೂಡ, ಮನೆಗೆ 8-10-15 ಸೇರಿನಂತೆ ಪ್ರತಿಯೊಂದು ಗ್ರಾಮದಲ್ಲಿಯೂ ಕಾಳನ್ನು ಸಂಗ್ರಹ ಮಾಡಿದ್ದಾರೆ. ಹೀಗೆ ಕಷ್ಟ ಪಟ್ಟು, ಮೈ ಬೆವರು ಸುರಿಸಿ, ಯಾರು ಕೆಲಸ ಮಾಡಿ ಆ ಬೆಳೆಯನ್ನು ಬೆಳೆದಿದ್ದಾರೋ, ಅಂಥವರಿಗೆ ತಿನ್ನಲಿಕ್ಕೂ ಕೂಡ ಬಿಡದಹಾಗೆ ಕಿತ್ತುತಂದು; ಈ ಪಟ್ಟಣದಲ್ಲಿರತಕ್ಕವರಿಗೆ ಕಮ್ಮಿ ದರದಲ್ಲಿ ಆ ದವಸವನ್ನು ಮಾರಬೇಕೆಂದು ಹೇಗೆ ಹೇಳಿದರೋ ಅದು ನನಗೆ ಗೊತ್ತಾಗುವುದಿಲ್ಲ. ಪಟ್ಟಣದಲ್ಲಿ ಒಂದು ಸಣ್ಣ ಬೀಡಿ ಅಂಗಡಿ ಇಟ್ಟುಕೊಂಡಿರತಕ್ಕವನು ಸಹ ಎಷ್ಟೋ ಸಂತೋಷವಾಗಿದ್ದಾನೆ. ಆದರೆ ಅಲ್ಲಿ ಹತ್ತಾರು ಎಕರೆ ಜಮೀನಿರತಕ್ಕವನಿಗೆ ಆ ಸಂತೋಷವಿಲ್ಲ ಮತ್ತು ಆತನಷ್ಟು ಸುಖವೂ ಇಲ್ಲ. ರೈತನು ತಾನು ದುಡಿದದ್ದನ್ನೆಲ್ಲಾ ಕೂಲಿಗಾಗಿ ಉಪಯೋಗಿಸಿ ತಾನು ನಿರ್ಗತಿಕನಾಗುತ್ತಿದ್ದಾನೆ. ಆದ್ದರಿಂದ ಹೀಗೆ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ನಾರಾಯಣಸ್ವಾಮಿ.—He is creating a wrong effect on the mind. ನಾನು ಹೇಳಿದ್ದು ಈ ಸಭೆಯಲ್ಲಿ ನಾಲ್ಕಾರು ಜನರನ್ನು ಬಿಟ್ಟರೆ, ಇನ್ನು ಉಳಿದವರೆಲ್ಲ ಈ ಧಾರಣೆಗಳನ್ನು ಏರಿಸಿರತಕ್ಕದ್ದು ಸರಿಯಲ್ಲ ಎಂದು ಹೇಳತಕ್ಕವರೇ ಆಗಿದ್ದಾರೆ. ಈ ಕಂಟ್ರೋಲುಗಳಿರುವುದರಿಂದ ಜನರ ನೈತಿಕ ಮಟ್ಟ ಕೆಟ್ಟು ಹೋಗುತ್ತಿದೆ. ಅಧಿಕಾರಿಗಳು ಲಂಚರುಷವತ್ತು ತೆಗೆದುಕೊಳ್ಳಲು ಅವಕಾಶವಾಗಿದೆ. ಈ ಕಂಟ್ರೋಲು ಇರುವ ತನಕ ಇದನ್ನು ನಿವಾರಿಸಲು ಸಾಧ್ಯವಾಗುವುದಿಲ್ಲವೆಂಬುದನ್ನು ನಮ್ಮ ಮಾನ್ಯ ಸ್ನೇಹಿತರು ಮನಗಾಣಬೇಕು. ಎಲ್ಲಿಯವರೆಗೂ ದೇಶದಲ್ಲಿ ಈ ಕಂಟ್ರೋಲುಗಳು ಹೋಗುವುದಿಲ್ಲವೋ ಅಲ್ಲಿಯವರೆಗೂ ದೇಶದಲ್ಲಿ ಈ ಲಂಚರುಷವತ್ತುಗಳು ತಪ್ಪಿ, ಜನರ ನೈತಿಕ ಮಟ್ಟ ಹೆಚ್ಚಾಗುವುದಿಲ್ಲ ಎಂಬುದನ್ನು ತಿಳಿಸಲು ನಾನೀಗ ಎದ್ದು ನಿಂತಿದ್ದೇನೆ. He has not understood me.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಈಗ ನಮ್ಮ ಮಾನ್ಯ ಸ್ನೇಹಿತರುಗಳೆಲ್ಲಾ ಇದುವರೆಗೂ ಮಾಡಿರತಕ್ಕ ಭಾಷಣಗಳನ್ನು ಕೇಳಿದೆನು. ಆದರೆ ಒಂದು ವಿಷಾದವಾಗುತ್ತಿದೆ. ಅವರ ಈ ಭಾಷಣಗಳಲ್ಲಿ ಹಳ್ಳಿಗರು ಮತ್ತು ಪಟ್ಟಣಿಗರು ಎಂಬ ಒಂದು ವ್ಯತ್ಯಾಸವನ್ನು ಸೂಚಿಸತಕ್ಕಂಥ ಒಂದು ಸನ್ನಿವೇಶ ಬರಬಾರದಾಗಿತ್ತು. ಆದರೆ ನಮ್ಮ ಸರ್ಕಾರ ಅಂಥ ಯಾವ ಒಂದು ಭಿನ್ನಾಭಿಪ್ರಾಯಕ್ಕೂ ಅವಕಾಶ ಕೊಡದಂತೆ ಸರ್ವರ ಹಿತದೃಷ್ಟಿಯನ್ನೂ ಒಂದೇ ಸಮನಾಗಿ ಗಮನದಲ್ಲಿಟ್ಟುಕೊಂಡು ಎಲ್ಲರನ್ನೂ ಒಂದೇ ರಥದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿದೆ. ಇವರು ಬಲತಾಯಿ ಮಕ್ಕಳು ಮತ್ತೊಬ್ಬರು ಮಲತಾಯಿ ಮಕ್ಕಳು, ಎಂಬ ಭಿನ್ನಭೇದಗಳಿಗೆ ಅವಕಾಶವಿಲ್ಲದಂತೆ ಎಲ್ಲರೂ ಒಬ್ಬ ತಾಯಿಯ ಮಕ್ಕಳಂತೆ ಅವರೆಲ್ಲರ ಹಿತದೃಷ್ಟಿಯನ್ನೂ ಗಮನದಲ್ಲಿಟ್ಟುಕೊಂಡು ಹೋಗುತ್ತಿದೆ. ಆದರೆ ತಮಗೆಲ್ಲರಿಗೂ ಆ ನೇಗಿಲ ಯೋಗಿಯ ಮೇಲೆ ಎಷ್ಟು ಪ್ರೇಮ ಭಾವನೆಗಳಿವೆಯೋ ಅಷ್ಟೇ ಭಾವನೆಗಳಿಂದ ಸರ್ಕಾರ ಕೂಡ ಅವನ ಹಿತದೃಷ್ಟಿಯ ಕಡೆಗೆ ತೀವ್ರವಾದ ಮನ್ನಣೆ ಕೊಟ್ಟು ನೋಡುತ್ತಿದೆಯೆಂದು ಒಂದು ಮಾತು ಹೇಳಿದರೆ ಸಾಕು.

ಇನ್ನು ಶ್ರೀ ಅನಂತರಾಮಯ್ಯರವರು ಸಿಲೋನ್ ಉದಾಹರಣೆಯನ್ನು ಕೊಟ್ಟು ಮಾತನಾಡಿದರು. ಆಧರೆ ಅವರು ಕೊಟ್ಟ ಉದಾಹರಣೆಯಲ್ಲೇ ಆ ಸಿಲೋನಿನವರು ಇತರ ಸಾಮಾನುಗಳ ಬೆಲೆಯನ್ನು

(ಶ್ರೀ ಹೆಚ್. ಸಿದ್ದವೀರಪ್ಪ.)

ಯಾವ ಮಟ್ಟಕ್ಕೆ ಏರಿಸಿದ್ದಾರೆಂಬ ವಿಚಾರವನ್ನೇ ಎತ್ತಲಿಲ್ಲ. ಆ ವಿಷಯವನ್ನೇತಕ್ಕೆ ಅವರು ಕೈಬಿಟ್ಟರೋ ನಾನು ಕಾಣೆ. ಈ ಸಭೆಯಲ್ಲೇ ಅನೇಕ ಸಾರಿ ನಾನು ಹೇಳಿದ್ದೇನೆ. ಸರ್ಕಾರ ಯಾವ ನೀತಿಯನ್ನು ಅನುಸರಿಸಬೇಕೆಂದು ಈ ಮಾನ್ಯ ಸಭೆಯು ನಿರ್ಧರಿಸುತ್ತದೋ ಅದರಂತೆ ಸರ್ಕಾರ ತನ್ನ ಕಾರ್ಯ ಕಲಾಪಗಳನ್ನು ಮುಂದುವರೆಸಿಕೊಂಡು ಹೋಗುತ್ತದೆ ಎಂಬುದಾಗಿ ಹೇಳಿದರೆ ಈ ಸಂದರ್ಭದಲ್ಲಿ ಅದು ತಪ್ಪಾಗಲಾರದು. ಆದರೆ ನಾವು ಹೀಗೆ ಹೇಳುತ್ತಿರುವುದರಿಂದ ನಾವು ಏನನ್ನೂ ಮಾಡದೆ ಸುಮ್ಮನೆ ಕೈಕಟ್ಟಿ ಕುಳಿತುಕೊಂಡಿದ್ದೇವೆಂದು ಯಾರೂ ಭಾವಿಸಬಾರದು. ನಾವೇನೂ ಸುಮ್ಮನೆ ಕುಳಿತಿಲ್ಲ. ನಾವು ಕೇಂದ್ರ ಸರ್ಕಾರದವರೊಡನೆ ಪತ್ರವ್ಯವಹಾರ ನಡೆಸುತ್ತಿದ್ದೇವೆ. ನನಗೆ ಕೇಂದ್ರ ಸಚಿವರಾದ ಮಾನ್ಯ ಖಿದ್ವಾಯಿಯವರಿಂದ ತಾ॥ 14-3-1953ರಲ್ಲಿ ಬಂದಿರತಕ್ಕ ಪತ್ರದಲ್ಲಿ ಅವರು ಈ ರೀತಿ ತಿಳಿಸಿದ್ದಾರೆ :—

"I am sending it on with your letter to the Finance Minister for his consideration. Any financial aid for subsidising food or meeting scarcity conditions has to come from finance and I will suggest to your writing to him direct and it will avoid delay."

ಇನ್ನು ಶ್ರೀ ಚಿಂತಾಮಣಿ ದೇಶಮುಖ್‌ರವರು ಮಾರ್ಚಿ 7ನೇ ತಾರೀಖು ಬರೆದಿರುವ ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ :—

"You may have seen from my Budget speech that the Central Government do not propose to give any subsidies for food to State Governments from next year and it is for the State Governments now to arrange their food operations on a no-profit and no-loss basis or meet any subsidy which they may wish to give to consumers in the area from their own resources."

ಇನ್ನೊಂದು ದೃಷ್ಟಿಯಿಂದ ಈ ವಿಚಾರವನ್ನು ಹೇಳಬೇಕಾಗಿದ್ದರೆ, Nobody will be happier than I when the grain is sold at six seers per rupee. But where is the wherewithal? The matter is not yet concluded. It is under the consideration of the Government. I repeat the same words for the benefit of my friend, Sri Gopala Gowda.

ಆ ಮೇಲೆ ಮಾನ್ಯ ಸದಸ್ಯರು ಮೈಸೂರು ಸಿಟಿಯಲ್ಲಿ ಈಗ ಇರತಕ್ಕ ಸ್ಟಾಕ್ ಏನು ಎಂಬುದಾಗಿ ಒಂದು ವಿಚಾರವೆತ್ತಿದ್ದಾರೆ. ಆದರೆ ಇದೊಂದು ವಿತಂಡವಾದವೆಂದು ಹೇಳಿದರೆ ತಪ್ಪಾಗಲಾರದು. ನಾವು ಮೈಸೂರು ಸಿಟಿಯಲ್ಲಿ ಡೀ ಕಂಟ್ರೋಲ್ ಮಾಡುವಾಗ ಅವರ ಅಭಿಪ್ರಾಯವನ್ನು ತೆಗೆದುಕೊಂಡೇ ಅಲ್ಲಿ ಡೀ ಕಂಟ್ರೋಲ್ ಮಾಡಿದ್ದೇವೆ. ನಾವು ಅವರ ಅಭಿಪ್ರಾಯ ಕೇಳಿದಾಗ ಅವರು ಈ ಕಂಟ್ರೋಲನ್ನು ಬೆಂಗಳೂರು, ದಾವಣಗೆರೆ ಮತ್ತು ಕೆ.ಜಿ.ಎಫ್. ಈ ಮೂರು ಸ್ಥಳಗಳಲ್ಲಿ ಇಟ್ಟರೆ ಸಾಕು ನಮ್ಮ ಮೈಸೂರಿನಲ್ಲಿ ಏನೂ ಇದು ಬೇಕಾಗಿಲ್ಲವೆಂದು ಅವರೆಲ್ಲ ಅಭಿಪ್ರಾಯ ಕೊಟ್ಟಿದ್ದಾರೆ. ಆ ದಿವಸ ಹಾಗೆ ತಿಳಿಸಿ ನಾವು ಡೀ-ಕಂಟ್ರೋಲ್ ಮಾಡಿದನಂತರ ಈ ದಿವಸ ಅವರು ಓಪನ್ ಮಾರ್ಕೆಟ್ಟಿನಲ್ಲಿ ಆಹಾರ ಸಾಮಾಗ್ರಿಗಳು ಸಿಕ್ಕುತ್ತಿಲ್ಲವೆಂದೂ, ಫೇರ್ ಪ್ರೈಸ್ ಡಿಪೋಗಳನ್ನು ಎಲ್ಲಾ ಕಡೆಯೂ ಇಡಬೇಕೆಂದೂ ವಾದಮಾಡತಕ್ಕದ್ದು ಸರಿಯಾದದ್ದಲ್ಲ. ಇನ್ನೂ ಬೆಂಗಳೂರಿನಲ್ಲಿರತಕ್ಕವರು ವಾದಮಾಡಿದರೂ ಒಂದುವೇಳೆ ಅದು ನ್ಯಾಯವಾಗಿದೆಯೆಂದು ಒಪ್ಪಿಕೊಳ್ಳಬಹುದು. ಆದರೆ ಮೈಸೂರಿನವರಿಗೆ ಅಂಥ ವಾದಕ್ಕೆ ಅವಕಾಶವೇ ಇಲ್ಲ. ಇನ್ನು ನಮ್ಮಲ್ಲಿರತಕ್ಕ stock ಬಗ್ಗೆ ತಮಗೆ ಅಂಕಿ ಅಂಶಗಳ ಸಮೇತ ಹೇಳುವುದಾದರೆ, 6,871 ಪಲ್ಲ ಅಕ್ಕಿ, 8,281 ಪಲ್ಲ ಗೋಧಿ, 1,178 ಪಲ್ಲ ರಾಗಿ, 10,879 ಪಲ್ಲ ಭತ್ತ ದಾಸ್ತಾನಿರುತ್ತವೆ. ಇದು ತಾ॥ 23-3-1953ರಲ್ಲಿ ಇರತಕ್ಕ ದಾಸ್ತಾನು. ಇನ್ನು ಕೆಲವು ಮಾನ್ಯ ಸದಸ್ಯರು ಇದನ್ನು ಸಂಪೂರ್ಣವಾಗಿ, ದೇಶಾದ್ಯಂತವೂ ಡೀ-ಕಂಟ್ರೋಲ್ ಮಾಡಿಬಿಡಿ ಎಂದು ಹೇಳಿದರು. ಆದರೆ ನಾವು ಈ ವಿಚಾರವನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತಂದಿದ್ದೆವು. ಆಗ ಅವರು ತಾ॥ 24-3-1953ರಲ್ಲಿ ಬರೆದಿರುವ ಪತ್ರವ್ಯವಹಾರದಲ್ಲಿ ಹೀಗಿದೆ:—

"It is for you to decide your own policy." They want me to keep the entire machinery intact.

"All the machinery and the necessary legislation for keeping controls, if necessary, will have to be retained for some time. We would advise you to have a cautious policy."

ಇನ್ನು ಈ ಆಹಾರದ ಸಬ್‌ಸಿಡಿ ಮತ್ತು ಎಸ್ಟಾಬ್ಲಿಷ್‌ಮೆಂಟ್ ಖರ್ಚುಗಳೂ ಸೇರಿ 1951-52ರಲ್ಲಿ 27·2 ಲಕ್ಷ ಖರ್ಚಾಗಿದೆ, 1952-53 ರಲ್ಲಿ 18·25 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. 1953–54ಕ್ಕೆ 16 ಲಕ್ಷ 99 ಸಾವಿರ ರೂಪಾಯಿಗಳನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ. ಆದರೆ ನಾವು ಬಡ್ಜೆಟ್ಟಿನಲ್ಲಿ ಒದಗಿಸಿದ್ದ ಮಾತ್ರಕ್ಕೇ ಅಷ್ಟನ್ನೂ ಖರ್ಚುಮಾಡಿಬಿಡಬೇಕೆಂಬ ಉದ್ದೇಶವೇನೂ ಸರ್ಕಾರಕ್ಕಿಲ್ಲ. ಆದರೆ ಈ ಆಹಾರ ಪ್ರಶ್ನೆ ಅಷ್ಟೊಂದು ಸುಲಭವಾದುದಲ್ಲವೆಂಬ ಅಂಶವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಒಂದು ಹೆಜ್ಜೆ ಮುಂದಿಟ್ಟರೆ ಅದು ಮುಂದೆ ಹೋಗುತ್ತದೆ, ಒಂದು ಹೆಜ್ಜೆ ಹಿಂದಕ್ಕಿಟ್ಟರೆ ಅದು ಹಿಂದಕ್ಕೆ ಹೋಗುತ್ತದೆ ಎನ್ನುವ ಹಾಗಿದೆ ಈ ಆಹಾರದ ಸಮಸ್ಯೆ. ಇದು ಇಂಗ್ಲೀಷ್‌ನಲ್ಲಿ "Between Scylla and Charyhdis" ಎಂದು ಹೇಳುವ ಗಾದೆಯಂತೆ ಇದೆ.

Please bear with us and we shall try our very best to do what is best in the interests of the State.

Mr. SPEAKER.—The question is:

"That a sum not exceeding Rs. 38,40,000 be granted to the Government to defray the charges which will come in course of payment during the year ending 31st day of March 1954, in respect of 'Extraordinary Charges'."

The motion was adopted.

4-30 P.M.

Demand No. 63-B—Community Development.

Demand No. 63-B—Community Development Projects.

Mr. SPEAKER.—Motion moved:

"That a sum not exceeding Rs. 15,00,000 be granted to the Government to defray the charges which will come in course of payment during the year ending 31st March 1954, in respect of 'Community Development Projects."

Sri Kadidal MANJAPPA (Minister for Revenue and Public Works).—Under the Indo-U.S.A. Technical Co-operation Agreement, one community project has been allotted to this State. Sorab and Shikaripur Taluks have been selected for the Project. The Project costs about Rs. 65 lakhs, out of which the Central Government will give us a grant of Rs. 22½ lakhs and a loan of Rs. 29 and odd lakhs. The balance has to be met by the State Government. The aim of the Project is to improve the condition of rural areas in all respects. So to say, it is an all round development of the areas selected. Under the Scheme, special attention will be given to agriculture. Therefore, while selecting areas, the possibility of development of agriculture is the main basis; assured irrigation facilities or assured rainfall is the main basis for selecting the Project areas. The Central Government have thought of giving 55 more development blocks in the current year. The final selection will be made by the Central Project Administration. We are asked to send our proposals regarding the area or areas to be selected. The Government are considering the proposals submitted in this behalf by the Development Commissioner. I need not dwell on the organization and other matters. The Hon'ble Members are well aware of these facts. Our object is to make this Project a grand success. No doubt due to initial difficulties we could not progress with expected speed. Initial survey took a lot of time and further it should be remembered that the Project was inaugurated in the month of October and from November onwards up to the middle of January it was the harvest season in that area and therefore we cannot expect the villagers to pay attention towards the Project activities. In spite of all this, some good work has been done. A number of approach roads and inter-village communication roads have been taken up. I think if I remember rightly, about 50 miles of road has been formed. A few school buildings have also been taken up; they are under construction. The Government are determined to make the Scheme a grand success.

Mr. SPEAKER.—There are six cut motions. The first one and the last one refer to the starting of a community project in Mysore District; the other one in Chikmagalur. The two general cut motions stand in the name of Sri Mudalagiri Gowda and Sri Govindaraju. One of them will have a chance and Sri Linganna may speak now.

Sri M. LINGANNA (Nanjangud).—It is a new innovation that these community projects have been started in several States.

Mr. SPEAKER.—The Hon'ble Member may take not more than six minutes.

Sri M. LINGANNA.—Yes, Sir. In conformity with the Central policy, the Government of Mysore also has followed suit and it has selected one block in Shimoga District and of course financially our Government has committed itself to the extent of

(SRI M. LINGANNA.)

Rs. 29 lakhs and yearly Rs. 46 lakhs. As I have said in the beginning, this is a new method; it is a novel method. Several schemes have been proposed during the time of our fight for freedom and several schemes were proposed at the time when we had the fortune of having Gandhiji with us. And I believe that this scheme which is being formulated and foisted on us is completely a foreign idealogy as is draws little inspiration from our own schemes. Why I say so is not without reason. If anybody were to go through the pamphlet printed by the Central Project Authority, there is one para in the last page of the pamphlet which says that because of the agreement between the Government of India and the Government of U.S.A. this community project has come into being and several clauses have been enumerated and in one of the clauses it is said that every community project should entertain one of the technicians imported from America.

Sri Kadidal MANJAPPA.—No such thing.

Sri M. LINGANNA.—And what is the financial position and who are going to finance this particular project all over the Union? Nearly half the finance has been met by the Government of America. And every detail that is being worked out is being objected to by the greatest followers of Mahatma Gandhi. I submit, this particular community project conceived by a foreign mind and practically being foisted on us may not be a success and to that extent we are going to incur a loss from the State Treasury, as we are now advancing Rs. 22½ lakhs for this and as we are getting by way of loan Rs. 29½ lakhs. The sum of 29 and odd lakhs of rupees is going to be advanced by way of loan, which probably carries interest to the tune of 3½ per cent and the rest we are going to advance from out of our Treasury and to that extent we are going to lose so much of fund that we are collecting by several methods, by several taxes, several resources.

This particular project which is being inaugurated at State level is being controlled by the Central authorities. When asked, the Minister concerned was pleased to say that that is not the position. But I know—with reference to the particular pamphlet with me—that every detail has to be scrutinised and sanctioned by the central authority. To the extent, the so-called project—the Community Project—is being subject to the scrutiny and sanction of the central authority. The extent of control being such that the details cannot be worked out easily and the amount we spend cannot be spent usefully over this American-born project. There are so many high ideas in schemes put forward by Mahatma Gandhi but we never care to practise them. While inaugurating this project, Pandit Nehru, our Prime Minister, said that this is going to bring prosperity to each and every village. But I humbly submit that though that particular idealogy is rated so highly and has been so vigorously put by our Prime Minister, it cannot be achieved. To that extent, the Community Project may not be a successful scheme. To that extent, I say, we have to lose. With these observations, I submit ....

Mr. SPEAKER.—Mr. Rudrappa.

ಶ್ರೀ ಎಚ್. ಎಸ್. ರುದ್ರಪ್ಪ (ಹೊನ್ನಾಳಿ).—ಸ್ವಾಮಿ, ಈ ಸಂದರ್ಭದಲ್ಲಿ ನಾನು ಬಹಳ ಮಾತನಾಡಬೇಕೆಂಬ ಆಶೆಯಿಂದಿದ್ದೆ; ಆದರೆ ಕಾಲಾವಕಾಶವಿಲ್ಲದೇಯಿರುವುದರಿಂದ ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಶ್ರೀಮಾನ್ ಲಿಂಗಣ್ಣನವರು ಈ ಕಮ್ಯೂನಿಟಿ ಪ್ರಾಜೆಕ್ಟ್ ಎನ್ನುವುದು ಅಮೇರಿಕನ್ನರ ಕಲ್ಪನೆ, ಇದನ್ನು ಕಾರ್ಯಗತ ಮಾಡುವುದು ಕಷ್ಟ ಎಂದು ಹೇಳಿದರು. ಅವರು ಬಹುಶಃ ಒಂದು ಅಧ್ಯಾಯವನ್ನು ಮಾತ್ರ ಓದಿದ್ದಾರೆಂದು ಕಾಣುತ್ತದೆ, ಪೂರ್ತಿ ಓದಿಲ್ಲ. ಮಹಾತ್ಮಾಗಾಂಧಿಯವರು ಏನು ಹೇಳಿದರೋ ಅದನ್ನು ಕಾರ್ಯ ರೂಪಕ್ಕೆ ತರುವುದಕ್ಕೇ ಈ ಯೋಜನೆ. ಅವರು Government by the people; for the people ಎಂದು ಏನು ಹೇಳಿದ್ದಾರೋ ಅದನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಬೇಕು. ಈ ಯೋಜನೆ ಜನರಿಂದ ಜನರಿಗಾಗಿ ಮಾಡಿರುವುದು. ಈ ಸಣ್ಣ ಯೋಜನೆಯನ್ನು ಒಂದು ಸ್ಥಳದಲ್ಲಿ ಮೊದಲು ಕಾರ್ಯರೂಪಕ್ಕೆ ತರುವುದು; ಆಮೇಲೆ

ಇದನ್ನು ಬೇರೆ ಸ್ಥಳಗಳಿಗೆ ವಿಸ್ತರಿಸುವುದು ಇದರ ಉದ್ದೇಶ. ನಾನು ಹೇಳುವುದಾದರೆ, ಈ ಯೋಜನೆ ಬಹಳ ಚನ್ನಾಗಿದೆ. ನೆಹರೂರವರೂ, ಸಮಿತಿಯವರೂ ಎಲ್ಲರೂ ಇದು ಬಹಳ ಉತ್ತಮವಾದ ಯೋಜನೆ ಯೆಂದು ಹೇಳಿದ್ದಾರೆ. ಇದರಲ್ಲಿ ಕೆಲಸ ಮಾಡುವುದು ಕಷ್ಟ, ನಮ್ಮ ಅನುಭವದ ಮೇಲೆ ಮುಂದೆ ಬದಲಾವಣೆ ಮಾಡುತ್ತೇವೆಂದು ಹೇಳಿದ್ದಾರೆ. ಕಾರ್ಯ ರೂಪಕ್ಕೆ ತರುವುದರಲ್ಲಿ ಕೆಲವು ಅಡ್ಡಿ ಆತಂಕಗಳಿವೆಯಾದರೂ ಚೆನ್ನಾಗಿ ಕೆಲಸ ಮಾಡಿದರೆ ದೇಶಕ್ಕೆ ಬಹಳ ಅನುಕೂಲ ವಾಗುತ್ತದೆಂದು ಹೇಳಬಲ್ಲೆ. ನಾನು ಅಧ್ಯಕ್ಷನಾಗಿರು ವುದರಿಂದ ಇದರ ಮುಖ್ಯ ಅಂಶಗಳನ್ನು ಸಭೆಯ ಮುಂದಿಡುತ್ತೇನೆ. ಈಗ ಮುಖ್ಯವಾಗಿ ನಮ್ಮ ದೇಶಕ್ಕೆ ಆಹಾರ ಬೇಕು. ಇದರ ಉತ್ಪತ್ತಿಯನ್ನು ಹೆಚ್ಚು ಮಾಡುವುದಕ್ಕೆ ಈ ಯೋಜನೆಯಲ್ಲಿ ಅವಕಾಶವಿದೆ. ಇದರ ಮೂಲಕ ಕೆರೆಗಳನ್ನು ಕಟ್ಟುವುದು, ನೀರಾವರಿ ಹೆಚ್ಚು ಮಾಡುವುದು ಎಲ್ಲವನ್ನೂ ಮಾಡಬಹುದು. ಹಿಂದೆ ನಮ್ಮ ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳು ತ್ತಿದ್ದೆವು. ಅದನ್ನು ಮರೆತಿದ್ದೇವೆ. ಮತ್ತೆ ನಾವು ಸ್ವಾವಲಂಬಿಗಳಾಗಬೇಕು ಎಂದು ಏನು ಹೇಳುತ್ತಿ ದ್ದರೋ ಅದು ಇದರಿಂದ ಪೂರ್ತಿಯಾಗಿ ಕಾರ್ಯಗತ ವಾಗುತ್ತದೆ. ಈ ಯೋಜನೆಯಲ್ಲಿ ಹಳ್ಳಿಯವರಿಂದ ಮಾಡಲು ಸಾಧ್ಯವಾಗದೇ ಇರತಕ್ಕ ಕೆಲಸವನ್ನು ಮಾತ್ರ ಬೇರೆಯವರು ಮಾಡಬೇಕು. ಬಾಕಿ ಕೆಲಸವನ್ನೆಲ್ಲಾ ಹಳ್ಳಿಯವರೇ ಮಾಡಬೇಕು. ಉದಾಹರಣೆಗೆ ಒಂದು ಕೆರೆಯನ್ನು ತೆಗೆದುಕೊಂಡರೆ, ಅದರ ಕೋಡಿ ಮತ್ತು ತೂಬು ವಿನಾ ಬಾಕಿ ಕೆಲಸವನ್ನು ಹಳ್ಳಿಯವರೇ ಮಾಡ ಬೇಕು. ಇದೊಂದು ಆದರ್ಶವೆಂದು ಹೇಳಿದ್ದಾರೆ ನೆಹರು. ನೆಹರೂರವರು ಬರಿಯ 'ಐಡಿಯಲಿಸ್ಟ್' ಎಂದು ಟೀಕೆ ಮಾಡಬಹುದು. ಆದರೆ 'ನಮ್ಮ ಆದರ್ಶ, ಅಥವಾ ಗುರಿ ಯಾವಾಗಲೂ ಹೆಚ್ಚಿನ ಮಟ್ಟ ದಲ್ಲಿರಬೇಕು. ಹಾಗಿದ್ದರೆ ಖಂಡಿತ ಮುಟ್ಟಬಹುದು' ಎಂದು ಅವರು ಹೇಳಿದ್ದಾರೆ. ಅವರು ಯೋಜನೆಯನ್ನು ಯಾವ ಒಂದು ಚೌಕಟ್ಟಿನಲ್ಲಿ ಮಾಡಿದ್ದಾರೋ ಅದನ್ನು ಮಾರ್ಪಾಡು ಮಾಡಿಕೊಳ್ಳಬಹುದು. ವ್ಯವಸಾಯ, ವಿದ್ಯಾಭ್ಯಾಸ, ಸಾಮಾಜ ಶಿಕ್ಷಣ ಎಲ್ಲವೂ ಇದರಿಂದ ಅಭಿವೃದ್ಧಿಯಾಗಬೇಕೆಂದು ಹೇಳಿದ್ದಾರೆ. ಇನ್ನೂ ಅನೇಕ ವಿಷಯಗಳನ್ನು ಹೇಳಿದ್ದಾರೆ. ಇದಕ್ಕೆಲ್ಲಾ ಹಣವನ್ನೊದಗಿಸಿದ್ದಾರೆ. ಈ ಯೋಜನೆಯನ್ನು ಪ್ರಾರಂಭಮಾಡಿದಾಗ ಅನೇಕ ಅನುಭವಗಳನ್ನು ಹೇಳಿ ದ್ದಾರೆ. ಹಣವನ್ನು ಖರ್ಚುಮಾಡಿ ಆ ಮೇಲೆ ಅದರ ಫಲ ನಮಗೆ ಗೊತ್ತಾಗುವ ಹಾಗೆ ಮಾಡಬೇಕು, ಸುಮ್ಮನೆ 65 ಲಕ್ಷ ರೂಪಾಯಿ ಖರ್ಚುಮಾಡಿ, ನಾವು ಮಾನು ಸಾಕಿದೆವು, ಅದನ್ನು ಮಾಡಿದೆವು, ಇದನ್ನು ಮಾಡಿದೆವು ಎಂದು ಹೇಳಿ ಬಿಟ್ಟರೆ ಪ್ರಯೋಜನ ವಿಲ್ಲ ಎಂದು ಮಂತ್ರಿಗಳೂ ಅಧ್ಯಕ್ಷರೂ ಹೇಳಿದ್ದಾರೆ. ಈ 65 ಲಕ್ಷ ರೂಪಾಯಿಗಳಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳ ಕೆಲಸವಾದರೂ ಆಗಬೇಕು ಹಾಗೆ ಕೆಲಸ ಮಾಡಬೇಕೆಂದು ಮಾಡಿದ್ದೇವೆ. ಇದರಲ್ಲಿ ಕನಿಷ್ಟಪಕ್ಷ ಶೇಕಡ 50ರಷ್ಟಾದರೂ ಜನರೇ ಮಾಡಬೇ ಕಾದದ್ದು ಎಂದು ಹೇಳಿದ್ದೇವೆ. ಸಾವಿರಾರು ರೂಪಾ ಯಿಗಳ ಕೆಲಸವಿದ್ದರೆ ಜನರು 500 ರೂಪಾಯಿಗಳ ಕೆಲಸವನ್ನು ಸ್ವಂತವಾಗಿ ಮಾಡಬೇಕು ಎಂದಿದೆ. ಪ್ರತಿ ಯೊಬ್ಬ ಅಧಿಕಾರಿಯೂ ಕೆಲಸಮಾಡಿ ತೋರಿಸಬೇಕು, ಸುಮ್ಮನೆ ಬರಿಯ ಬಾಯಲ್ಲಿ ಹೇಳಬಾರದು, ಯಾರು ಪ್ರಜಾ ಸೇವಕರಾಗಿದ್ದಾರೋ ಅಂಥವರು ಮಾಡಬೇಕು. ಅವನು 'ಸರ್ವೆಂಟ' ಆಗಿರಬೇಕು. Servants of the people can only do this work and not people who sit in the office and pass orders. ಇದು 'ಸೆಲ್ಫ್ ಹೆಲ್ಪ್' ಎಂಬು ದನ್ನು ಕಾರ್ಯರೂಪಕ್ಕೆ ತರುವ ಯೋಜನೆ ಇದು. ಮೂರು ವರ್ಷಗಳಾದ ಮೇಲೆ ಜನರು ಸರ್ಕಾರದ ಸಹಾಯವನ್ನೇ ಕೇಳದೆ ಈ ಯೋಜನೆಯನ್ನು ತಾವೇ ಮುಂದೆಯೂ ನಡೆಸಬಹುದೋ ಏನೋ ಎನ್ನಿಸುತ್ತದೆ. ಈಗ ನಮ್ಮ ಜನರಲ್ಲಿ ಪ್ರತಿಯೊಂದನ್ನೂ ಸರ್ಕಾ ರವೇ ಮಾಡಬೇಕು ಎನ್ನುವ ಮನೋಧರ್ಮ ಬಂದಿದೆ. ಹಳ್ಳಿಗಳಲ್ಲಿ ಈ ಹೊಲ, ಗದ್ದೆ, ತೋಟ ನಮ್ಮದು ಎಂದು ಹೇಳುತ್ತಾರೆ ಆದರೆ ಅದಕ್ಕೆ ನೀರು ಕೊಡುವ ಕರೆ ಕಟ್ಟೆ ನಮ್ಮದಲ್ಲ ಎಂದು ಹೇಳುತ್ತಾರೆ, ಈ ಮನೋ ಭಾವ ಬಂದಿದೆ. ಕರೆ ಕಟ್ಟೆಗಳನ್ನು ಸರಿಪಡಿಸುವುದಿಲ್ಲ. ದನಗಳು ಹುಲ್ಲು ಮೇದು ಏರಿ ಕೆಟ್ಟರೂ ಅಥವಾ ನೀರು ಹೋಗುತ್ತಿದ್ದರೂ ಅದನ್ನು ಅವರು ಸರಿಮಾಡುವುದಿಲ್ಲ. ಹೀಗಿರುವುದರಿಂದ ನಾವು ಜನರಿಗೆ ಹೇಳಬೇಕು. ಎಲ್ಲಿಯ ವರೆಗೆ ಜನ ಎಲ್ಲಕ್ಕೂ ಸರ್ಕಾರವನ್ನವಲಂಬಿಸುತ್ತಾರೋ ಅಲ್ಲಿಯವರೆಗೂ ಪರಿಸ್ಥಿತಿ ಹೀಗೆಯೇ ಇರುತ್ತದೆ. ನಾವು ಸ್ವಂತವಾಗಿ ಯಾವಾಗ ಮಾಡುತ್ತೇವೋ ಆಗ ಅದು ನಮ್ಮದು ಎಂಬ ಭಾವನೆ ಬರುತ್ತದೆ, ಹಾಗೆ ಬರ ಬೇಕು ಎಂದು ಹೇಳಬೇಕು. ಇದನ್ನು ನಾವು ಹೇಳು ತ್ತಿದ್ದೇವೆ. ಹೊಸದರಲ್ಲಿ ಏನೋ ಒಂದು ಹೊಸ ಯೋಜನೆಯನ್ನು ಕಾಂಗ್ರೆಸ್ಸಿನವರು ಮಾಡಿದ್ದಾರೆ ಎಂದು ಹೇಳುತ್ತಿದ್ದರು. ಆದರೆ ಈ ಹೊತ್ತು 'ಇವರು ಹೇಳುವುದು ನಿಜ, ಇದರಲ್ಲಿ ಸತ್ಯಾಂಶವಿದೆ, ಇದರಂತೆ ಮಾಡಿ ನಮ್ಮ ಕಾಲ ಮೇಲೆ ನಾವು ನಿಲ್ಲುತ್ತೇವೆ' ಎಂದು ಭರವಸೆ ಕೊಟ್ಟಿದ್ದಾರೆ. ಮೊದಲೇ ಪ್ರಾರಂಭವಾಗಲು ಅನೇಕ ಅಡಚಣೆಗಳು ಬಂದು ಅಕ್ಟೋಬರಿನಲ್ಲಿ ಕಾರ್ಯ ಪ್ರಾರಂಭಮಾಡಿದೆವು, ಇನ್ನೂ ಸರ್ವಸಿದ್ಧತೆಯಾಗಿಲ್ಲ. ಈ ವರ್ಷ ಜನವರಿಯಿಂದ ಕೆಲಸ ಪ್ರಾರಂಭವಾಗಿರುವು ದರಿಂದ ಇನ್ನು ಮೂರು ತಿಂಗಳು ಅಥವಾ ಆರು ತಿಂಗಳು ನೋಡಬೇಕು. ಅನೇಕ ಅಡಚಣೆಗಳಿವೆ, ಆದರೂ ಸರ್ಕಾರದವರು ಬಹಳವಾಗಿ ಸಹಾಯಕರಾಗಿ ರುವುದರಿಂದ ನಾವು ಎಷ್ಟು ಕೆಲಸವನ್ನು ಮಾಡಬೇ ಕೆಂದು ಇಂಡಿಯಾ ಸರ್ಕಾರದವರು ಹೇಳಿದ್ದಾರೋ ಅದಕ್ಕಿಂತಲೂ ಹೆಚ್ಚು ಕೆಲಸ ಮಾಡುತ್ತೇವೆಂದು ಹೇಳಿದ್ದೇವೆ. ಅಧಿಕಾರಿಗಳಿಗೂ ಸೇವಾದೃಷ್ಟಿಯಿಂದ ಕೆಲಸಮಾಡಬೇಕೆಂದು ಹೇಳುತ್ತಿದ್ದೇನೆ. ಒಟ್ಟಿನಲ್ಲಿ ಸರ್ಕಾರದವರೂ ಸಾರ್ವಜನಿಕರೂ ಎಷ್ಟು ಕೆಲಸ ವನ್ನು ನಿರೀಕ್ಷೆಮಾಡಿದ್ದಾರೋ ಅದಕ್ಕಿಂತ ಹೆಚ್ಚು ಮಾಡುತ್ತೇವೆಂದು ಆಶ್ವಾಸನ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ಈ ಕಮ್ಯೂನಿಟಿ ಪ್ರಾಜೆಕ್ಟಿನ ತತ್ವಗಳ ವಿಚಾರದ ಲ್ಲಿ ಒಂದೆರಡು ಮಾತುಗಳನ್ನು ಮಾತ್ರ ಹೇಳಬೇಕೆಂದಿಚ್ಛಿ ಸುತ್ತೇನೆ. ಈಗಾಗಲೇ ಮಂತ್ರಿಗಳೂ ಕಮ್ಯೂನಿಟಿ ಪ್ರಾಜೆಕ್ಟಿನ ಅಧ್ಯಕ್ಷರೂ ಕೆಲವು ವಿಷಯಗಳನ್ನು ತಿಳಿಸಿ ದ್ದಾರೆ. ಭಾರತ ಸರ್ಕಾರದವರು ಈ ಕಮ್ಯೂನಿಟಿ ಪ್ರಾಜೆಕ್ಟ್ ಮೂಲಕ ದೇಶವನ್ನು ಅಭಿವೃದ್ಧಿಮಾಡ ಬೇಕೆಂಬ ದೃಷ್ಟಿಯಿಂದ ಇದನ್ನು ಜಾರಿಗೆ ತಂದಿದ್ದಾರೆ. ಮೈಸೂರಿನವರಾದ ನಾವು ಇದರಿಂದ ಅಷ್ಟು ಹೆಮ್ಮೆ ಪಡಬೇಕಾಗಿಲ್ಲ. ಏಕೆಂದರೆ, ನಾವು ಇಂಥ ಯೋಜನೆ ಗಳನ್ನೂ ತತ್ವಗಳನ್ನೂ ಹತ್ತಾರು ವರ್ಷಗಳಿಂದ ಈಗಾ ಗಲೇ ಜಾರಿಗೆ ತಂದಿದ್ದೇವೆ.

ಹಿಂದೆ ಇದೆ ಸಭೆಯ ಮುಂದೆ ಎಷ್ಟೋ ಇಂಥ ಯೋಜನೆಗಳು ಬಂದಿರುತ್ತವೆ. ಅವುಗಳನ್ನೆಲ್ಲಾ

(ಶ್ರೀ ಟಿ. ಎಸ್. ಮೂಡಲಗಿರಿಗೌಡ.)

ನಾನು ನೋಡಿದ್ದೇನೆ. ನಮಗೆ ಇದೇನೂ ಅಂಥ ಒಂದು ಹೊಸ ಯೋಜನೆಯಲ್ಲ. ಈ ಹಿಂದೆಯೂ ಸಹ ಇಂಥ ಕೆಲಸಗಳೇನೋ ನಡೆಯುತ್ತಲೇ ಇದ್ದವು. ಆದರೆ ನಮಗೆ ಈ ದಿವಸ ಇರತಕ್ಕ ಮುಖ್ಯ ಗಮನ ಯಾವುದೆಂದರೆ, ನಾವು ಜಾರಿಗೆ ತರಬೇಕೆಂದಿರುವ ಯಾವ ಯೋಜನೆಯನ್ನೇ ಆಗಲಿ ಜಾರಿಗೆ ತರತಕ್ಕದ್ದೇ ಮುಖ್ಯವಲ್ಲ, ಆದರೆ ಅಂಥ ಯೋಜನೆಯಲ್ಲಿ ಏನೇನು ಲೋಪದೋಷಗಳಿರುತ್ತವೆ ಎಂಬುದನ್ನು ಕಂಡು ಹಿಡಿದು, ಅವುಗಳನ್ನು ನಿವಾರಣೆ ಮಾಡಿಕೊಂಡು ಈ ಯೋಜನೆಗಳನ್ನು ದೇಶದ ಅಭಿವೃದ್ಧಿಗೆ ಹೇಗೆ ಅಳವಡಿಸಿಕೊಳ್ಳಬೇಕೋ ಆ ರೀತಿ ಅಳವಡಿಸಿಕೊಂಡು ಹೋಗಬೇಕು. ಈ 65 ಲಕ್ಷ ರೂಪಾಯಿಗಳನ್ನೂ ಒಂದೇ ಸ್ಥಳದಲ್ಲಿ ಖರ್ಚುಮಾಡುವುದು ಅಷ್ಟು ಸೂಕ್ತವೆಂದು ಕಾಣುವುದಿಲ್ಲ. ಈಗಾಗಲೇ ಆ ಸ್ಥಳದಲ್ಲಿ ಕೆಲವು ರಸ್ತೆಗಳು ಮತ್ತು ಇನ್ನೂ ಇತರ ಕೆಲವು ಕಾಮಗಾರಿಗಳು ನಡೆದಿರುತ್ತವೆಯೆಂದು ಹೇಳಿದರು. ಹಾಗೆಯೇ ಅವರು ಮುಂದುವರಿದು, ಆ ಪ್ರಾಂತ್ಯದ ಜನರಲ್ಲಿ ಒಂದು ಜನಸಮುದಾಯ ಭಾವನೆಯನ್ನು ಹುಟ್ಟಿಸಲು ಇದೊಂದು ಮಾರ್ಗವಾಗಿರುತ್ತೆಂದೇ ತಿಳಿಸಿದ್ದಾರೆ. ಆದರೆ 65 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಈ ಯೋಜನೆಯ ತತ್ವ ಮತ್ತು ಈ ಯೋಜನೆಯ ಭಾವನೆಗಳು ಜನರಲ್ಲಿ ಮೂಡಿ, ಅವರಲ್ಲಿ ಇವು ಶಾಶ್ವತವಾಗಿ ಉಳಿಯುವಂತೆ ಮಾಡಲು ಸಾಧ್ಯವಿದೆಯೇ ಎನ್ನುವ ಒಂದು ಅನುಮಾನ ಕೂಡ ನನಗೆ ಬರುತ್ತಿದೆ. ಆದ್ದುದರಿಂದ ಈ ಹಣವನ್ನು ಖರ್ಚುಮಾಡುವಾಗ ಬಹಳ ವಿವೇಚನೆಯಿಂದ ನಡೆಯಬೇಕಾಗಿದೆ. ಆದರೆ ಈಗೇನೋ ಜನರೇ ಸೇರಿಕೊಂಡು, ರಸ್ತೆ, ಕಾಲುವೆ, ಇತ್ಯಾದಿ ಕೆಲಸಕಾರ್ಯಗಳನ್ನೆಲ್ಲಾ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವರೂ ಆ ಹಳ್ಳಿಯ ಜನರೊಡನೆ ಸೇರಿಕೊಂಡು ಈ ಕೆಲಸಗಳನ್ನೂ ಮಾಡುತ್ತಿದ್ದಾರೆ ಆದರೆ ಅಷ್ಟೇ ಸಾಲದು. ಆ ಜನಗಳು ಈ ದಿವಸ ಯಾವ ಒಂದು ರಸ್ತೆಯನ್ನು ಮಾಡಲಿ, ಇದು ನಮ್ಮ ರಸ್ತೆ, ಇದು ನಮ್ಮ ಗ್ರಾಮ, ಇದು ನಮ್ಮ ಕೆರೆ ಅನ್ನೋ ಮನೋಭಾವ ಅವರಲ್ಲಿ ಮೂಡಬೇಕು. 65 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ 65 ವರ್ಷಗಳಾದರೂ ಅಲ್ಲಿ ಮಾಡಿದ ಕೆಲಸಗಳು ಅಳಿಯದಂತಿರಬೇಕು. ಹಾಗೆ ಈ ದಿವಸ ಮಾಡತಕ್ಕ ಕೆಲಸ ಕಾರ್ಯಗಳು ಒಂದು ಶಾಶ್ವತವಾದ ರೀತಿಯಲ್ಲಿ ಉಳಿಯದಿದ್ದರೆ ನಮಗೆ ಇದರಿಂದ ಒಂದು ಹೆಸರೂ ಬರುವುದಿಲ್ಲ ಮತ್ತು ಮಾಡಿದ ಖರ್ಚೆಲ್ಲ ನಿಷ್ಪ್ರಯೋಜನವಾಗುತ್ತದೆ. ಆದರೆ ಜನರಲ್ಲಿ ಇಂಥ ಒಂದು ಮನೋಭಾವವುಂಟಾಗಬಾರದು ಅನ್ನುವ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಪ್ರಾಜೆಕ್ಟನ್ನು ಪ್ರಾರಂಭಮಾಡಬೇಕಾಗಿದೆ. ಈ ಸಂಬಂಧದಲ್ಲಿ ನಾವು ಉಪಯೋಗಿಸುವ ಪ್ರತಿಯೊಂದು ಕಾಸೂ ಪೋಲಾಗಬಾರದೆಂಬ ಭಾವನೆ ಇರಬೇಕು. ಇದನ್ನು ಒಂದು ಪ್ರಾಂತ್ಯಕ್ಕೆ ಅನ್ವಯಿಸುವ ಬದಲು ಇಡೀ ಸಂಸ್ಥಾನಕ್ಕೇ ಅನ್ವಯಿಸುವಂತೆ ಮಾಡತಕ್ಕದ್ದು ಸಾಧುವಾದುದೆಂದು ಕಾಣುತ್ತದೆ. ಈ ಯೋಜನೆಯ ಬಗ್ಗೆ ಅರಿತದ್ದಕ್ಕೂ ನುರಿತದ್ದಕ್ಕೂ ಎಲ್ಲಕ್ಕೂ ಕೇಂದ್ರದವರ ಸಲಹೆಗೆ ಕೈಹಾಕುವುದನ್ನು ದೂರ ಮಾಡಿ, ನಮ್ಮ ದೇಶಕ್ಕೆ ಇದು ಅನುಗುಣವಾಗುವಂತೆ ಇದನ್ನು ಅಳವಡಿಸಿಕೊಂಡು ಹೋಗಬೇಕು. ಇಲ್ಲದಿದ್ದರೆ ಇದು ನಿಷ್ಪ್ರಯೋಜನವಾಗುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಅಧ್ಯಕ್ಷರೇ, ಈ ಸಂಬಂಧವಾಗಿ ನಾನು ಒಂದೆರಡು ಮುಖ್ಯ ವಿಷಯಗಳನ್ನು ಮಾತ್ರ ತಿಳಿಸಬೇಕೆಂದಿದ್ದೇನೆ. ಈ ಕಮ್ಯುನಿಟಿ ಪ್ರಾಜೆಕ್ಟಿನಿಂದ ಖಂಡಿತವಾಗಿಯೂ ಯಾವ ಪ್ರಯೋಜನವೂ ದೇಶಕ್ಕೆ ಆಗುವುದಿಲ್ಲ. ಒಂದು ದುರುದ್ದೇಶದಿಂದ ಅಮೇರಿಕಾದೇಶದವರು ಮಾಡಿರುವವಂಥ ಒಂದು ಉಪಾಯ ಇದು. ಅವರು ತಮ್ಮ ಒಂದು ಉದ್ದೇಶದ ಗುರಿಯನ್ನಿಟ್ಟುಕೊಂಡು ಹೀಗೆ ಮಾಡಿದ್ದಾರೆ. ಇದು ಇಂಡಿಯಾದೇಶಕ್ಕೆ ಅವರು ಮಾಡಿರುವಂಥ ಒಂದು ಮೋಸ. ಇಂಡಿಯಾದೇಶ ಈ ದಿವಸ ಅವರ ಬಲೆಗೆ ಮೋಸ ಹೋಗಿ ಬಿದ್ದಿದೆ. ಜನರಲ್ಲಿರತಕ್ಕಂಥ ಒಂದು ರೆವಲ್ಯೂಷನರಿ ಉಮೇದನ್ನು ಮೊಟಕುಮಾಡಬೇಕೆಂಬ ಒಂದು ದುರುದ್ದೇಶದಿಂದ ಅವರು ಹೀಗೆ ಮಾಡಿದ್ದಾರೆ. ಅವರ ದೇಶದಲ್ಲಿ ಬೆಳೆದಂಥ ಗೋಧಿಯನ್ನು ಇತರ ದೇಶಗಳಿಗೆ ಕಳುಹಿಸಿದರೆ, ಆ ದೇಶಗಳಿಗೆ ಅನುಕೂಲವಾಗುತ್ತದೆಂಬ ಅಂಶವನ್ನು ಮನಗಂಡು, ಆ ಗೋಧಿಯನ್ನು ಸಮುದ್ರಕ್ಕೆ ಚೆಲ್ಲಿದಂಥ ಆ ಅಮೇರಿಕಾ ದೇಶದವರು, ನಮಗೆ ಅನುಕೂಲವಾಗಲಿ ಎಂಬ ಒಂದು ಭಾವನೆಯಿಂದ ಇಲ್ಲಿ ಈ ಕಮ್ಯುನಿಟಿ ಪ್ರಾಜೆಕ್ಟಿಗೆ ಸಹಾಯಮಾಡುತ್ತಾರೆಂದರೆ ಆಶ್ಚರ್ಯವಲ್ಲವೆ ? ಆದರೆ ನಾವು ಇದರಲ್ಲಿ ಏನು ಮರ್ಮ ಅಡಗಿದೆ ಎಂಬುದನ್ನು ನೋಡಬೇಕಾಗಿದೆ. ಏಷ್ಯಾದಲ್ಲಿ ಜನರು ಕ್ರಾಂತಿಮಾರ್ಗ ಅನುಸರಿಸುತ್ತಿದ್ದಾರೆ. ರಷ್ಯಾಕ್ಕೂ ಮತ್ತು ಅಮೇರಿಕಾಕ್ಕೂ ಯುದ್ಧ ಸಂಭವಿಸಿದರೆ ನಮ್ಮ ಸೆಂಟ್ರಲ್ ಪಾಲಸಿಯನ್ನು ಬದಲು ಮಾಡಿ ಅಮೇರಿಕಾದ ಕಡೆ ವಾಲಲಿ ಎಂದು ಇರಬಹುದು. ಇವರು ಧನಸಹಾಯ ಮಾಡಲು ಏನೋ ಒಂದು ಕ್ಲಿಕ್ ಕೂಡ ಇದೆ ಎಂದು ಅನೇಕರು ಹೇಳುತ್ತಿದ್ದಾರೆ. ಹೀಗಿದ್ದರೂ ಈ ದಿವಸ ಇಂಡಿಯಾ ಟೋಪಿ ಹಾಕಿಸಿಕೊಂಡಿದೆ. ಇಂಥಾ ಕಮ್ಯುನಿಟಿ ಪ್ರಾಜೆಕ್ಟುಗಳಿಂದ ಯಾವ ರೀತಿಯಲ್ಲೂ ದೇಶಕ್ಕೆ ಅನುಕೂಲವಾಗುವುದಿಲ್ಲ. ದೇಶದಲ್ಲಿರುವ ಜನರ ಜೀವನದ ಮಟ್ಟವನ್ನು ಹೆಚ್ಚಿಸುವವರೆಗೆ ಮತ್ತೂ ಅವರಲ್ಲಿ ಒಂದು ಸೌಜನ್ಯ ಭಾವನೆ ಉಂಟಾಗುವಂತೆ ಮಾಡುವವರೆಗೆ ತಾವು ಏನು ಮಾಡಿದರೂ ಸಾರ್ಥಕವಾಗುವುದಿಲ್ಲ. ಜನರಲ್ಲಿ ಒಂದು ಹೊಸ ಸ್ಫೂರ್ತಿ ಹುಟ್ಟಿಸುವಂತೆ ಮಾಡಿದರೆ ಅದರಿಂದ ಸ್ವಲ್ಪ ಅನುಕೂಲವಾಗಬಹುದು. ಆದರೆ ತಾವು ಕೈಕೊಂಡಿರುವ ಮಾರ್ಗ ಸರಿಯಾದ್ದಲ್ಲ. ಆದುದರಿಂದ ಶ್ರೀಮಾನ್ ಎಂ. ಲಿಂಗಣ್ಣನವರು ಹೇಳಿರತಕ್ಕದ್ದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

Sri Kadidal MANJAPPA.—Sir, we do not align ourselves either with this group or that group. We do not discriminate between Russia and America. We do not want to be under obligation of either America or Russia.

Sri Mulka GOVINDA REDDY.—We are under the obligation of America.

Sri Kadidal MANJAPPA.—I was submitting that we do not want to discriminate between countries whether Russia or America. America has come forward to help us and we are taking the help of America. If Russia had come forward to help us, we would have taken their help. In

fact, Russia gave us food grains as a gift when we were faced with distress conditions and we made use of the stuff and we are thankful to Russia.

Sri Linganna said that the scheme is foreign. The idea of community project is not at all novel to India. It is there from the beginning. The success of the scheme entirely depends upon the willing co-operation of the public and the integrity and efficiency of the workers there. Sri Rudrappa pertinently pointed out that the theme of the entire scheme is to get co-operation of the public, not only lip sympathy but actual co-operation. The idea is to spend Rs. 65 lakhs and the people have to contribute in shape of labour. Supposing we take up project work and restoration of tank; the earth work has to be done by the villagers and the masonry and other works will be done by the project authority. This is the idea with which we are starting the community project. I would earnestly request Sri Mulka Govinda Reddy not to discourage the scheme itself or to try to throw cold water upon the scheme and we also request, from the Members of the Opposition Party, at least co-operation in the sense that they should not decry the scheme itself.

Sri J. MOHAMED IMAM.—Did you consult us?

Sri Kadidal MANJAPPA.—You have been consulted.

Sri J. MOHAMED IMAM.—You never consulted us before you launched it.

Sri M. LINGANNA.—What about the difficulties that have been expressed?

Sri Kadidal MANJAPPA.—Difficulties are there; we must try to overcome them. I need not add much to what I have said. With the co-operation of the local people and with the co-operation of the leaders like Sri Mulka Govinda Reddy, we are sure that this scheme will be a success and a grand success too.

Mr. SPEAKER.—The question is:

"That a sum not exceeding Rs. 15,00,000 be granted to the Government to defray the charges which will come in course of payment during the year ending 31st day of March 1954, in respect of 'Community Development Project'."

The motion was adopted.

Mr. SPEAKER.—The question is:

"That the respective sums not exceeding the amounts shown in the List of Demands for Grants for the year 1953-54, circulated among Members be granted to defray the charges which will come in course of payment during the year ending 31st March 1954 in respect of Demands Nos. 31, 32, 32-A, 33, 34, 42-A and 43-A."

The motion was adopted.

As directed by the Speaker the motion for demands adopted by the House are reproduced below:—

No. 31—POLITICAL PENSIONS.

54-A.—Territorial and Political Pensions.

"That a sum not exceeding Rs. 2,87,000 be granted to the Government to defray the charges which will come in course of payment during the year ending 31st day of March 1954, in respect of "Territorial and Political Pensions."

No. 32—SUPERANNUATION ALLOWANCES AND PENSIONS.

55—Superannuation Allowances and Pensions.

"That a sum not exceeding Rs. 51,74,500 be granted to the Government to defray the charges which will come in course of payment during the year ending 31st day of March 1954, in respect of 'Superannuation Allowances and Pensions'."

DEMAND NO. 32-A—COMMUTATION OF PENSION.

55-A.—COMMUTATION OF PENSION FINANCED FROM ORDINARY REVENUE.

"That a sum not exceeding Rs. 1,95,000 be granted to the Government to defray the charges which will come in course of payment during the year ending 31st day of March 1954, in respect of 'Commutation of Pension'."

DEMAND NO. 33—STATIONERY AND PRINTING.

56.—STATIONERY AND PRINTING.

"That a sum not exceeding Rs. 18,17,000 be granted to the Government to defray the charges which will come in course of payment during the year ending 31st day of March 1954, in respect of 'Stationery and Printing'."

DEMAND NO. 34.—MISCELLANEOUS.

57.—MISCELLANEOUS.

"That a sum not exceeding Rs. 18,10,000 be granted to the Government to defray the charges which will come in course of payment during the year ending 31st day of March 1954, in respect of 'Miscellaneous'."

DEMAND NO. 42-A.—COMMUNITY PROJECTS.

82.—CAPITAL ACCOUNT OF OTHER STATE WORKS—COMMUNITY DEVELOPMENT PROJECTS.

"That a sum not exceeding Rs. 10,00,000 be granted to the Government to defray the charges which will come in course of payment during the year ending 31st day of March 1954, in respect of 'Community Development Projects'."

DEMAND NO. 43-A—COMMUTED VALUE OF PENSION.

83.—PAYMENTS OF COMMUTED VALUE OF PENSIONS.

"That a sum not exceeding Rs. 100 be granted to the Government to defray the charges which will come in course of payment during the year ending 31st day of March 1954, in respect of 'Commutation of Pensions'."

Mr. SPEAKER.—The House will now rise for the day and meet tomorrow at 8-30 A.M.

The House adjourned at Five of the Clock to meet again at Thirty Minutes past Eight of the Clock, on Saturday, 28th March 1953.

WD 4516—GPB—500—4-1-54